# ಕೊಡಗು ಸಂಗಾತಿ

ನವೆಂಬರ್ 1 ರಿಂದ 15, 2000 ಪಾಕ್ಷಿಕ ಪತ್ರಿಕೆ (ಬೊಂತೆಲ್ 16-30)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 4 ಸಂಚಿಕೆ : 21 ಪುಟಗಳು : 24 ಬೆಲೆ ರೂ. : 6-00




## ಮೈಸೂರು ದಸರಾ 2000ದಲ್ಲಿ ಗ್ರಾಫಿಕ್ ಕೊಲೊಗ್ರಾಫಿ ಚಿತ್ರಕಲಾ ಪ್ರಶಸ್ತಿ ಪಡೆದ ಚಿತ್ರ



ವಿಜೇತರು :

ಕೊಡಗಿನ ಚೆಟ್ಟಳ್ಳಿಯ ಕೊಳಂಬೆ ಭಾನುಪ್ರಕಾಶ್

## ಮನವಿ



ಕೊಡಗು ಗೌಡ ವಿದ್ಯಾ ಸಂಘದ ಸದಸ್ಯರಲ್ಲಿ ಕುಯ್ಯಮುಡಿ ಕೆ. ಪೂರ್ಣಯ್ಯನ ಕಳಕಳಿಯ ವಿನಂತಿ.

ನನ್ನನ್ನು ಗೌಡ ವಿದ್ಯಾಸಂಘದ ಅಧ್ಯಕ್ಷನನ್ನಾಗಿ ಇನ್ನೊಂದು ಬಾರಿ ಆರಿಸಿ ನಮ್ಮ ಜನಾಂಗದ ಶ್ರೇಯೋಭಿವೃದ್ಧಿಗಾಗಿ ಆಶೀರ್ವದಿಸಬೇಕಾಗಿ ಬೇಡಿ ಕೊಳ್ಳುತ್ತೇನೆ.

ಇತೀ ತಮ್ಮ ಸೇವಾಕಾಂಕ್ಷಿ

**ಕುಯ್ಯಮುಡಿ ಕೆ. ಪೂರ್ಣಯ್ಯ**

## ಜಿಲ್ಲೆಯ ಕಲಾವಿದ ಭಾನುಪ್ರಕಾಶ್ ಕೋಳಂಬೆ ಅವರಿಗೆ ಮೈಸೂರು ದಸರಾ ಚಿತ್ರಕಲಾ ಪ್ರಶಸ್ತಿ



ಮೈಸೂರು ಲಲಿತ ಕಲಾ ಅಕಾಡೆಮಿ ಆಶ್ರಯದಲ್ಲಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಮೂಲತಃ ಕೊಡಗಿನ ಚೆಟ್ಟಳ್ಳಿಯವರಾದ ಹಾಗೂ ಪ್ರಸ್ತುತ ಮೈಸೂರು ಕಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಕೋಳಂಬೆ ಯಾದವ ಭಾನುಪ್ರಕಾಶ್ ಅವರು ಮೈಸೂರು ದಸರಾ -2000, ಚಿತ್ರಕಲಾ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಅಲ್ಲದೆ ಭಾನುಪ್ರಕಾಶ್ ಅವರು ವಿರಚಿತ ಚಿತ್ರಗಳು ಉನ್ನತ ಮಟ್ಟದ ಪ್ರದರ್ಶನಕ್ಕೆ ಆಯ್ಕೆಯಾಗಿವೆ. ಇವರ 200 ಚಿತ್ರಗಳು ಮೈಸೂರು ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಪ್ರದರ್ಶನಗೊಳ್ಳುತ್ತಿವೆ.

ಪೂರ್ಣ ಪರಿಚಯ ಸಂಗಾತಿ ಸಂಪುಟ 2 ಸಂಚಿಕೆ 1ರಲ್ಲಿ ನೀಡಿದೆ. - **ಸಂಗಾತಿ**

## ಮೈಸೂರಿನ ಕಲಾಮಂದಿರದಲ್ಲಿ 3-12-2000ರಂದು ಅರೆ ಬಾಷೆ ಗೌಡರ ಅದ್ದೂರಿ ಕಾರ್ಯಕ್ರಮ

ತಾರೀಖ್ 3-12-2000 ರ್ಲಿ ಮೈಸೂರ್‌ನ ಕಲಾಮಂದಿರಲಿ ಜನಾಂಗದ ಆದರ್ಶ ದಂಪತಿಗ ಮತ್ತು ಫ್ಯಾಷನ್ ಷೊ ನಡ್ದದೆ. ಜನಾಂಗ ಬಾಂದವು ಸಂಸಾರ ಸಮೇತ ಬಂದ್ ಕಾರ್ಯಕ್ರಮನ ಬಾರಿ ಲಾಯ್ಕಾಗಿ ನಡ್ಸಿ ಕೊಡೊಕುತ ಕೇಳಿ ಕಂಡವೆ. ಅಭಿಮಾನಿಗ ತಮ್ಮ ತನು ಮನ ಧನ ಸಹಕಾರನ ನೀಡಕು. ಹಂಗೆನೆ MO/DD ಸಹ ಮಾಡಕ್. ಸ್ಥಳೀಯ ಚೆಕ್‌ಗಳ್ನ ಸ್ವೀಕಾರ ಮಾಡ್ತೆ. ಅಷ್ಟೆ ಅಲ್ಲ ರೂ 100/- ಕ್ಕಿಂತ ಹೆಚ್ಚಿಗೆ ಕೊಟ್ಟವರ ಹೆಸ್‌ರ್ನ ಸಂಗಾತಿ ಪತ್ರಿಕೆಲಿ ಹಾಕುವೆ. ಆದರ್ಶ ದಂಪತಿ ಮತ್ತೆ ಫ್ಯಾಷನ್ನ್ ಷೋಗೆ ಆದಸ್ಟ್ ಬೇಗ ಹೆಸ್ರ್ ನೊಂದಾಯಿಸಕು. 25-11-2000 ದ ಒಳಗಡೆ ನೊಂದಾಯಿಸಿಕಣಿ. ನಂತ್ರ ಬಂದವ್‌ಗಳ್ನ ತಿರಸ್ಕರಿಸಿವೆ. ಕಾರ್ಯಕ್ರಮ ವಿಶಿಷ್ಠ ಸಂಪ್ರದಾಯದ ವಿಶಿಷ್ಠ ರೀತಿಲಿ ನಡ್ದದೆ. 60 ವರ್ಷಕ್ಕೆ ಮೇಲ್ಪಟ್ಟ ದಂಪತಿಗಸ ಭಾಗವಹಿಸಕ್. ಹಣ ಕಳ್ಸವು **ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಾರ್ಕೆಟ್ ಬ್ರಾಂಚ್, ಮೈಸೂರು** ಖಾತೆ ನಂಬರ್ **310482** ಕ್ಕೆ ನೇರವಾಗಿ ಕಳ್ಸ್‌ರ್.

**ಆದರ್ಶ ದಂಪತಿಗಳು ರೂ. 150/-**
**ಫ್ಯಾಷನ್ ಷೋ ರೂ. 100/-**


ಮರೆಯಿಕಾಗದ್ ಆಖೈರಿ ತಾರೀಖ್ **25-11-2000**

**ಸಂಪರ್ಕಿಸುವ ಮತ್ತೆ ಹಣ ಕಳ್ಸುವ ವಿಳಾಸ :**

**ಕರ್ಣಯ್ಯನ ಲಕ್ಷ್ಮಣ**, ಕಾರ್ಯದರ್ಶಿ, D.No. 1047/28A, 2 ನೇ ಮೇನ್, 7ನೇ ಕ್ರಾಸ್, ವಿದ್ಯಾರಣ್ಯ ಪುರಂ, ಮೈಸೂರು-8 **Ph : 0821-489052**

**ತಡಿಯಪ್ಪನ ಕುಮಾರಜಯ**, ಅಧ್ಯಕ್ಷರು, ನಂ. 10,LIG, E&F ಬ್ಲಾಕ್, ಪವರ್ ಹೌಸ್ ಹಿಂಭಾಗ, ರಾಮಕೃಷ್ಣನಗರ, ಮೈಸೂರು -23. **Ph : 0821-568574**

## ಮನವಿ



ದಿನಾಂಕ 12-11-2000 ರಿಂದ ಐತ್ವವಾರ ಕೊಡಗು ಗೌಡ ವಿದ್ಯಾ ಸಂಘದ ಕಾರ್ಯಕಾರಿ ಚುನಾವಣೆಲಿ ನಾನ್ ಅಧ್ಯಕ್ಷ ಪಟ್ಟಕ್ಕೆ ಸ್ಪರ್ಧಿಸಿಯೊಳೆ. ಗೌರವಾನ್ವಿತ ಸದಸ್ಯರ್ ನಿಮ್ಮ ಘನ ಓಟ್‌ನ ನಂಗೆ ಕೊಟ್ಟ್ ಮುಂದೆ 3 ವರ್ಷ ವಿದ್ಯಾ ಸಂಘದ ಅಭಿವೃದ್ಧಿಗೆ ಸಹಕರಿಸೊಕುತ ವಿನಂತಿಸಿನೆ. ನನ್ನ ಕಿರು ಪರಿಚಯ ಹಿಂಗುಟ್ಟು. 1977ರ್ಲಿ ಮಡಿಕೇರಿ ಕಾಲೇಜ್‌ದ್ ಕಾರ್ಯದರ್ಶಿ ಆಗಿದ್ದೆ. 1992 ರಿಂದ ಇಂದ್‌ನ ತನಕ ಕಾರ್ಯದರ್ಶಿ ಆಗಿ ವಿದ್ಯಾಸಂಘುಲಿ ಒಳೆ. 1985 ಮತ್ತೆ 1996 ರ್ಲಿ ಕೊಡಗಿನಿಂದ ಸಂಘಟನಾ ಕಾರ್ಯದರ್ಶಿ ಆಗಿ ಕೆಲ್ಸ ಮಾಡಿದ್ದೆ. ಅಷ್ಟೇ ಅಲ್ಲಾ ಇನ್ನಿತರ ಹಲವಾರ್ ಸಂಘ ಸಂಸ್ಥೆ ಅಲ್ಲದೆ ಸಮಾಜ ಸೇವೆ ಜನಪರ ಕೆಲ್ಸಗಳ್ನ ಈಗಲೂ ಮಾಡ್ತಾ ಒಳೆ.

ಇತೀ ನಿಮ್ಮ ಸೇವಾಕಾಂಕ್ಷಿ : **ಕೋಳುಮುಡಿಯನ ಆರ್. ಅನಂತ್‌ಕುಮಾರ್**

**2000,** ನವೆಂಬರ್ 1 ರಿಂದ 15ರ ತನಕ

## ಒಳನೋಟ


| | ಲೇಖಕರು | ಪುಟಗಳು |
|---|---|---|
| **ಕನ್ನಡ ವಿಭಾಗ** | | |
| ಕಲಬೆರೆಕೆ ಭಾಷೆಗಳು | - ಸಂಪಾದಕೀಯ | 02 |
| ಕೊಡಗು ಮತ್ತು ದ. ಕ. ಗೌಡ ಸಮ್ಮೇಳನದ ಅಧ್ಯಕ್ಷರಾಗಿ | | |
| ಶ್ರೀ ದಂಬೆಕೋಡಿ ಚಿಣ್ಣಪ್ಪ | - ಪಟ್ಟಡ ಶಿವಕುಮಾರ್ | 02 |
| ಕೊಡಗು ಗೌಡ ವಿದ್ಯಾಸಂಘದ ಮುಂದಿನ ನಾಯಕನಾರು? | - ಟಿ. ಪಿ. ಕುಮಾರ ಜಯ | 03 |
| ಸರ್ಪಗಂಧ - ಧಾರವಾಹಿ - 41 | - ಕೌಂಡಿನ್ಯ | 04 |
| ಬೆಂಗಳೂರು ಉತ್ತರ ವಲಯದ ಅತ್ಯುತ್ತಮ ಶಿಕ್ಷಕಿ ಮತ್ತು ಡಬ್ಬಲ್ ಸ್ಟಾರ್ : | | |
| ಶ್ರೀಮತಿ ಬಾರಿಕೆ ಜೋಯಪ್ಪ ಕುಸುಮಾವತಿ | - ಎಡಿಕೇರಿ ಸುದರ್ಶನ್ | 07 |
| ಗೃಹ ಸಂಗಾತಿ : ವನಿತಾ ಲೋಕ | - ಸಂಗಾತಿ | 09 |
| ಗುಡ್ಡಗಾಡು ಓಟದಲ್ಲಿ ಅರಳುತ್ತಿರುವ ಪ್ರತಿಭೆ | - ಸೂರ್ತಲೆ ಜಯಂತ್ | 09 |
| ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆ | | |
| ಸಂಘಟಿತ ಶಕ್ತಿಯೇ ಸಮುದಾಯದ ಏಳಿಗೆಯ ಮೂಲ | - ಸಂಗಾತಿ | 10 |
| ಮೈಸೂರಿನಲ್ಲಿ ಕೈಲು ಮುಹೂರ್ತ ಸಾಂಸ್ಕೃತಿಕ ಕಾರ್ಯಕ್ರಮ | - ದೇವಜನ ಕೇಶವ | 11 |
| ಮೈಸೂರಿನಲ್ಲಿ ಕಾವೇರಿ ತೀರ್ಥ ಪ್ರಸಾದ ವಿತರಣೆ : | | |
| ಮಾಜಿ ಸೈನಿಕರ ಪ್ರಾಯೋಗಿಕ ಪ್ರಯತ್ನ ಜಯಪ್ರದ | - ಸಂಗಾತಿ | 11 |
| ಪತ್ರ ವಿಭಾಗ | - | 12 |
| ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಜನಾಂಗದವರ ಶೃಂಗೇರಿ | | |
| ಮಠಕ್ಕಿರುವ ನಂಟು ಮತ್ತು ಕಿರು ವಿವರ | - ಬೈತಡ್ಕ ಜಾನಕಿ ಬೆಳ್ಯಪ್ಪ | 13 |
| ಕವನಗಳು | - | 15 |
| ಕೊಡಗಿನ ಅಭಿವೃದ್ಧಿಗೆ ಕ್ರಮ | - ಸಂಗಾತಿ | 16 |
| ಮನೋದ್ಯೈಹಿಕ ಕಾಯಿಲೆಗಳ ಬಗ್ಗೆ ಒಂದು ಸಣ್ಣ ಮಾಹಿತಿ | - ಉಳುವಾರನ ತನುಜ ಜನಾರ್ಧನ್ | 16 |
| ಹಾಲು ಹರಿದಿತ್ತು, ಮಗು ಹಸಿದಿತ್ತು | - ಬಾರಿಯಂಡ ಜೋಯಪ್ಪ | 17 |
| ರಾಷ್ಟ್ರದ ಸಂಸ್ಕೃತಿಯನ್ನು ಗೌರವಿಸಿ ಕಾಪಾಡುವುದೇ ನಿಜವಾದ ರಾಷ್ಟ್ರಭಕ್ತಿ | - ಬೈನೆರವನ ಚಿತ್ರಾ | 18 |
| ಸಂಗಾತಿ ಭವಿಷ್ಯ | - ಜ್ಯೋತಿಷ್ ಗಿರೀಶ್ ಕುಮಾರ್ | 20 |
| **ಅರೆಭಾಷಿಕ ವಿಭಾಗ** | | |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 20 | - ಶಂಕರನ ಬಸಪ್ಪ | 05 |
| ಕೊತ್ತಿಗೆ ಕಲ್ಪಿದ ಪಾಠ | - ತುಂತಜೆ ಚೆಟ್ಟ್ಯಪ್ಪ ಕೃತಿ ಕುಮಾರ್ | 08 |


| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಕಲಬೆರಕೆ ಭಾಷೆಗಳು

*ಪ್ರತಿಯೊಬ್ಬ ತನ್ನ ಮಾತೃಭಾಷೆಯನ್ನು ಕಲಿತಿರಲೇಬೇಕು. ಮಾತೃಭಾಷೆಯ ಮುಖಾಂತರ ಕಲಿತ ವಿದ್ಯೆಯು ಒಬ್ಬ ವ್ಯಕ್ತಿಯ ಜೀವನ ಪರಿಯಂತರವೂ ತನ್ನೊಡನೆ ಬರುವ ವಿದ್ಯೆ. ಒಬ್ಬ ವ್ಯಕ್ತಿ ಪರಕೀಯ ಭಾಷೆಯಲ್ಲಿ ಎಷ್ಟೇ ವಿದ್ವಾಂಸನಾಗಿದ್ದರೂ ತನ್ನ ಮಾತೃ ಭಾಷೆಯಷ್ಟು ಸರಾಗವಾಗಿ ನಿರ್ಗಳವಾಗಿ ಮಾತಾಡುವುದಕ್ಕಾಗಲೀ ಯೋಚಿಸಲು ಸಾಧ್ಯವಿಲ್ಲವೆಂಬುದು ಎಲ್ಲಾ ಭಾಷೆ ಜ್ಞಾನಿಗಳ ಹಾಗೂ ಮನಶಾಸ್ತ್ರಜ್ಞರ ಅಭಿಪ್ರಾಯ.*

*ಆದರೆ ನವ ನಾಗರೀಕತೆಯನ್ನು ಹೊಂದಿದವರು ತಾನು ವಿದ್ಯಾವಂತನೆಂದು ತೋರಿಸಿಕೊಳ್ಳಲು ಆದರಲ್ಲಿ ಇಂಗ್ಲೀಷನ್ನು ಕಲಿತವನು ತನ್ನ ಮಕ್ಕಳೊಡನೆ ಹಾಗೂ ತನ್ನ ಇನ್ನಿತರ ಕುಟುಂಬದ ಸದಸ್ಯರೊಡನೆ ಕನ್ನಡ ಅಥವಾ ಅರೆ ಭಾಷೆಯನ್ನು ಮಾತಾಡುವಾಗ ಇಂಗ್ಲೀಷ್ ಶಬ್ದವನ್ನು ಬಳಸುತ್ತಾನೆ. ಉದಾಹರಣೆಗೆ ಆ ಮಗುವಿನ ಶಾಲೆಯಲ್ಲಿ ಆಟೋಟಗಳ ಸ್ಪರ್ಧೆ ಇದ್ದರೆ ನಿಮ್ಮ School ಯಾ Collegeನಲ್ಲಿ Sports ಇಲ್ಲವೇ? ನಿಮ್ಮ ಶಾಲೆಯಲ್ಲಿ attendence ತೆಗೆಯುವುದಿಲ್ಲವೇ? ನಾನು Five Minutesನಲ್ಲಿ ಬಂದು ಬಿಡುತ್ತೇನೆ. ಈ ರೀತಿಯಾಗಿ ಮಾತಾಡಿದಾಗ ಮಗುವಿಗೆ ಕನ್ನಡದಲ್ಲಾಗಲೀ ಅರೆ ಭಾಷೆಯಲ್ಲಾಗಲೀ ಮೇಲೆ ಕಾಣಿಸಿದ ಶಬ್ದಗಳಿಗೆ ಆ ಮಗುವಿನ ಮಾತೃಭಾಷೆಯಲ್ಲಿ ಯಾವ ಶಬ್ದವಿದೆ ಎಂದು ತಿಳಿಯದೇ ಹೋಗುತ್ತದೆ. ಇದು ಈಗಿನ ಸಮಾಜದಲ್ಲಿ ಸರ್ವ ವ್ಯಾಪ್ತಿಯಾಗಿರುವ ನಾಗರೀಕನೆಂದೆನಿಸಿ ಕೊಳ್ಳಲು ಪ್ರಯತ್ನಿಸುವ ಸಾಮಾಜಿಕ ಖಾಯಿಲೆಯಾಗಿದೆ. ಈ ಖಾಯಿಲೆಯನ್ನು ತಡೆಗಟ್ಟಲು ಸಮಾಜದ ಪ್ರಜ್ಞಾವಂತರು ಸಮಾಜವನ್ನು ಎಚ್ಚರಿಸಿ ಇದೂ ಹೆಚ್ಚಾಗಿ ಆವರಿಸದ ರೀತಿಯಲ್ಲಿ ತಡೆಗಟ್ಟಲು ಪ್ರಯತ್ನಿಸಬೇಕೆಂದು ಸಂಗಾತಿಯ ಆನಿಸುವಿಕೆ.*

## ಕೊಡಗು ಮತ್ತು ದ. ಕ. ಗೌಡ ಸಮ್ಮೇಳನದ ಅಧ್ಯಕ್ಷರಾಗಿ ಶ್ರೀ ದಂಬೆಕೋಡಿ ಚಿಣ್ಣಪ್ಪ



### ಫೆಬ್ರವರಿ 2001 ರ ಒಳಗಡೆ ಸಮ್ಮೇಳನ
### ಗೌಡ ಸಮ್ಮೇಳನಕ್ಕಾಗಿ ಪೂರ್ವಭಾವೀ ಸಭೆ

ಸುಳ್ಯದಲ್ಲಿ ಗೌಡ ಸಮ್ಮೇಳನ ನಡೆದು ಹಲವು ವರುಷಗಳೇ ಉರುಳಿವೆ. ಇಂದು ಕೊಡಗಿನಲ್ಲಿ ಗೌಡ ಜನಾಂಗದ ಇರುವಿಕೆಯ ನೆಲೆಯೇ ಶಿಥಿಲಗೊಂಡಿದೆ. ಆದುದರಿಂದ ಗೌಡ ಜನಾಂಗದ ಸಂಘಟನೆಯನ್ನು ಸಮರ್ಥಗೊಳಿಸಲು, ತಮ್ಮ ಇರುವಿಕೆಯನ್ನು ಜಗಜ್ಜಾಹೀರಗೊಳಿಸಲು ಬೃಹತ್‌ಗೌಡ ಸಮ್ಮೇಳನವನ್ನು ಮಡಿಕೇರಿಯಲ್ಲಿ ಸಂಘಟಿಸುವುದಕ್ಕಾಗಿ, ಅಕ್ಟೋಬರ್ 15ರಂದು ಮಡಿಕೇರಿಯ ಗೌಡ ಸಮಾಜದಲ್ಲಿ ಪೂರ್ವಭಾವಿ ಸಭೆ ನಡೆಯಿತು. ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಈ ಸಭೆಯನ್ನು ಆಯೋಜಿಸಿತ್ತು.

ಸಭೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಮುಕ್ತವಾಗಿ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡಲಾಯಿತು. ಸಭೆಯಲ್ಲಿ ಸಮ್ಮೇಳನದ ರೂಪುರೇಷೆಗಳ ಬಗ್ಗೆ ಸಹ ವಿವರ ಚರ್ಚೆ ನಡೆಯಿತು. ಕೆಲವರು ಸಂಪೂರ್ಣವಾಗಿ ಅರೆಭಾಷೆಯಿಂದಲೇ ಗೌಡ ಸಮ್ಮೇಳನ ನಡೆಯಬೇಕು ಎಂದು ಅಭಿಪ್ರಾಯಿಸಿದರು. ಆದರೆ ಕೊಡಗಿನ ವ್ಯಾಪ್ತಿಯಲ್ಲಿ ಗೌಡ ಜನಾಂಗ ಭೌಗೋಳಿಕ ಭಿನ್ನತೆಯಿಂದಾಗಿ ಬೇರೆ ಬೇರೆ ಭಾಷೆಯನ್ನು ಮಾತನಾಡುತ್ತಿದ್ದಾರೆ. ಆದರೆ ಅವರೆಲ್ಲರೂ ಕೊಡಗಿನ ಗೌಡರೇ. ನಾವು ಗೌಡ ಸಮ್ಮೇಳನ ಮಾಡುವಾಗ ಭಾಷೆಯ ಆಧಾರದ ಮೇಲೆ ಭಿನ್ನತೆಯನ್ನುತೋರಿಸದೆ ಎಲ್ಲಾ ಗೌಡ ಜನಾಂಗವನ್ನು ಸೇರಿಸಿ ಬೃಹತ್ ಸಮ್ಮೇಳನ ನಡೆಸಬೇಕು. ಇನ್ನೊಂದು ಜನಾಂಗಕ್ಕೆ ಪ್ರತಿಸ್ಪರ್ಧಿಯಾಗದೆ ಪೂರಕವಾಗಿ ಪ್ರಬಲತೆಯನ್ನು, ಸದೃಢತೆಯನ್ನು ಸಾಬೀತುಪಡಿಸಬೇಕೆಂದು ಎಲ್ಲರೂ ಒಮ್ಮತದ ಸಲಹೆ ನೀಡಿದರು.

ಗೌಡ ಸಮ್ಮೇಳನವನ್ನು ಗೌಡ ಜನಾಂಗದಲ್ಲಿ ಮೊದಲು ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದ ದಂಬೆಕೋಡಿ ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಬೇಕೆಂದು ಮಾಜಿ ಶಾಸಕ ದಂಬೆಕೋಡಿ ಮಾದಪ್ಪನವರು ಸಲಹೆ ಮಾಡಿದಾಗ ಅದನ್ನು ಎಲ್ಲರೂ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು. ನಂತರ ಸಮ್ಮೇಳನದ ಸಮಿತಿಯನ್ನು ರಚಿಸಲಾಯಿತು.

ಸಮ್ಮೇಳನದ ಗೌರವ ಅಧ್ಯಕ್ಷರಾಗಿ ತೋಟಂಬೈಲು ನಾಣಯ್ಯನವರು, ಕಾರ್ಯಾಧ್ಯಕ್ಷರಾಗಿ ತುಂತಜೆ ಗಣೇಶ್‌ನವರು, ಉಪಾಧ್ಯಕ್ಷರಾಗಿ ಎಲ್ಲಾ ಸಮಾಜದ ಅಧ್ಯಕ್ಷರು, ಗೌರವ ಕಾರ್ಯದರ್ಶಿಯಾಗಿ ಕೋಳುಮುಡಿಯನ ಅನಂತ್‌ಕುಮಾರ್, ಪ್ರಧಾನ ಕಾರ್ಯದರ್ಶಿಗಳಾಗಿ ಕೊಂಬನ ಬೋಪಯ್ಯನವರು, ಕಾರ್ಯದರ್ಶಿಗಳಾಗಿ ಕೋಡಿ ಚಂದ್ರಶೇಖರ್, ಪೈಕೆ ಅನಂತರಾಮ್, ಸೂರ್ತಲೆ ಸೋಮಣ್ಣನವರು ಆಯ್ಕೆಗೊಂಡರು. **14ನೇ ಪುಟಕ್ಕೆ**

# ಕೊಡಗು ಗೌಡ ವಿದ್ಯಾಸಂಘದ ಮುಂದಿನ ನಾಯಕರಾರು?

ಕುಯ್ಯಮುಡಿ ಪೂರ್ಣಯ್ಯ



92 ವರುಷಗಳ ಹಿಂದೆ ನಮ್ಮ ಗೌಡ ಜನಾಂಗ ಹೇಗಿದ್ದಿರ ಬಹುದೆಂದು ಅವಲೋಕಿಸಿದರೆ ನಮಗೆ ಅಂದಿನ ರಾಜನ ಆಳ್ವಿಕೆ, ಬ್ರಿಟಿಷರ ಹಾಗೂ ಇನ್ನಿತರ ಗುಲಾಮ ಗಿರಿಯೇ ಕಣ್ಣ ಮುಂದೆ ನಿಲ್ಲುತ್ತದೆ. ಅಂದಿನ ಜನ ತಮ್ಮ ಜೀವನವನ್ನು ಸಾಗಿಸಲು ಪಡುತ್ತಿದ್ದ ಕಷ್ಟಕಾಲಗಳನ್ನು ನೆನೆದರೆ ಇಂದು ನಾವು ಎಷ್ಟೋ ಉತ್ತಮ ರೀತಿಯಲ್ಲಿ ಇರುವುದನ್ನು ಕಾಣುತ್ತೇವೆ. ಹೀಗಿರುವ ಸಂದರ್ಭದಲ್ಲಿ ನಮ್ಮ ಜನಾಂಗದ ಅಂದಿನ ಹಿರಿಯರ ದೂರದೃಷ್ಟಿಯನ್ನು ಗಮನಿಸಿದರೆ ಅವರು ನಮಗೆ ನೀಡಿ ಬಿಟ್ಟು ಹೋಗಿರುವ 92 ವಸಂತವನ್ನು ಕಂಡ ನಮ್ಮ ವಿದ್ಯಾ ಸಂಘದ ಬಗ್ಗೆ ಚಿಂತಿಸಬೇಕು.

ಕೊಡಗು ಗೌಡ ವಿದ್ಯಾಸಂಘ 1908ರಲ್ಲಿ ಕುಂಬುಗೌಡನ ಕುಶಾಲಪ್ಪನವರ ನೇತೃತ್ವದಲ್ಲಿ ಜನಾಂಗದವರ ವಿದ್ಯೆಗೆ ಹಾಗೂ ಒಗ್ಗಟ್ಟಿನ ಉದ್ದೇಶ ಹೊಂದಿ ಸ್ಥಾಪನೆಯಾಯಿತು. ತದನಂತರ ಬಂದ ಅಧ್ಯಕ್ಷರುಗಳು ಅವರವರ ಕೈಲಾದ ಸೇವೆಯನ್ನು ವಿದ್ಯಾ ಸಂಘಕ್ಕೆ ಸಲ್ಲಿಸಿದ ಮಹಾನುಭಾವರಾಗಿದ್ದಾರೆ. ಕುದುಪಜೆ ಕೃಷ್ಣಪ್ಪನವರ ನಂತರ ವಿದ್ಯಾಸಂಘದ ಜವಾಬ್ದಾರಿಯನ್ನು ಯಾರು ಹೊರಬೇಕೆಂಬ ಪ್ರಶ್ನೆ ಉದ್ಭವಿಸಿದಾಗ ಅಂದು ಎಲ್ಲವರ ಕಣ್ಣಿಗೆ ಬಿದ್ದ ವ್ಯಕ್ತಿ ಕುಯ್ಯಮುಡಿ ಪೂರ್ಣಯ್ಯನವರು. ಆದರೆ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆರಿಸಿದ ನಂತರ ಕೆಲವರಿಗೆ ಪೂರ್ಣಯ್ಯನವರು ಈ ಅಧ್ಯಕ್ಷಗಿರಿಯನ್ನು ನಿಭಾಯಿಸುವರೆ? ಎಂಬ ಪ್ರಶ್ನೆ ಕಾಡತೊಡಗಿತು.

1995ರಲ್ಲಿ ಕೊಡಗು ಗೌಡ ವಿದ್ಯಾಸಂಘದ ಜವಾಬ್ದಾರಿಯನ್ನು ಹೊತ್ತ ವ್ಯಕ್ತಿಯ ಕಾರ್ಯತಂತ್ರ ನಮಗೆ ಸಂತೋಷವನ್ನು ತಂದು ಕೊಟ್ಟಿತು. ಇವರ ಅಧಿಕಾರವಧಿಯಲ್ಲಿ ವಿದ್ಯಾಸಂಘಕ್ಕೆ ಒಂದು ಕೊಳವೆ ಬಾವಿ ಮತ್ತು ಟ್ಯಾಂಕನ್ನು ನಿರ್ಮಿಸಿ ನೀರಿನ ಸಮಸ್ಯೆಯನ್ನು ಪರಿಹರಿಸಿರುತ್ತಾರೆ. ವಿದ್ಯಾಸಂಘದ ಆಸ್ತಿ ಪರಕೀಯರ ಪಾಲಾಗ ಬಾರದು ಎಂದು ಮುಂದಾಲೋಚನೆ ವಹಿಸಿ, ಆಸ್ತಿಯ ರಕ್ಷಣೆ ಗೋಸ್ಕರ ವಿದ್ಯಾಸಂಘದ ಒಂದು ಬದಿಯಲ್ಲಿ ತಡೆಗೋಡೆಯನ್ನು ಅಲ್ಲದೆ ತಂತಿ ಬೇಲಿಯನ್ನು ಹಾಕಿಸಿ ಆಸ್ತಿಯನ್ನು ಸಂರಕ್ಷಿಸಿರುತ್ತಾರೆ. ಒಳಗಡೆ ಊಟದ ವ್ಯವಸ್ಥೆಗೆ ಆಸನಗಳನ್ನು, ದಾನಿಗಳ ನೆರವಿನಿಂದ ಮುಖ್ಯದ್ವಾರಕ್ಕೆ ಕಬ್ಬಿಣದ ಗೇಟನ್ನು ಅಲ್ಲದೆ ಇನ್ನಿತರ ಅಭಿವೃದ್ಧಿ ಕೆಲಸಗಳಿಗೆ 6ಲಕ್ಷಕ್ಕೂ ಮಿಕ್ಕಿ ಖರ್ಚು ಮಾಡಿರುತ್ತಾರೆ. ಇದು ಅಲ್ಲದೆ ಶ್ರೀಯುತರ ಅವಧಿಯಲ್ಲಿ ಮೈಸೂರಿನಲ್ಲಿರುವ ವಿದ್ಯಾರ್ಥಿ ಭವನಕ್ಕೆ ಸುಮಾರು 2ಲಕ್ಷ ರೂಪಾಯಿ ಖರ್ಚಿನಲ್ಲಿ ಅಡುಗೆ ಮನೆಯ ನಿರ್ಮಾಣವೂ ಸಹ ಆಗಿರುತದೆ. ಮೈಸೂರಿಗೆ ಅಥವಾ ಇನ್ನಿತರ ಕಡೆ ಮೀಟಿಂಗ್ ತಮ್ಮ ಆಡಳಿತ ಮಂಡಳಿಯ ಜೊತೆ ತಮ್ಮ ಸ್ವಂತ ಕಾರಿನಲ್ಲೆ ತೆರಳುತ್ತಿದ್ದುದ್ದು ಅಲ್ಲದೆ ಕಾರಿನ ಬಾಡಿಗೆ ಯಾಗಿ ಕೇವಲ ಡಿಸೇಲ್‌ನ ಖರ್ಚನ್ನು ಮಾತ್ರ ಸ್ವೀಕರಿಸುತ್ತಿರುತ್ತಾರೆ.

ಮೇಲುಸ್ತುವಾರಿಯ ನ್ಯೂನತೆಯಿಂದ ಸೋರಿ ಹೋಗುತ್ತಿದ್ದ ಆದಾಯಕ್ಕೆ ಕಡಿವಾಣ ಹಾಕಿ ಸುಮಾರು 8ಲಕ್ಷ ರೂಪಾಯಿಯ ಅಭಿವೃದ್ಧಿ ಕೆಲಸ ಮಾಡಿ 1995ರಲ್ಲಿ ಇದ್ದ ಸುಮಾರು 1,85,000/- (ಒಂದು ಲಕ್ಷದ ಎಂಭತ್ತೈದು ಸಾವಿರ) ರೂಪಾಯಿಯನ್ನು ಇಂದಿಗೆ ಸುಮಾರು 18,00,000/- (ಹದಿನೆಂಟು ಲಕ್ಷ) ರೂಪಾಯಿ ವಿದ್ಯಾ ಸಂಘದಲ್ಲಿ ಉಳಿಯುವಂತೆ ಮಾಡಿದ ಹೆಗ್ಗಳಿಕೆ ಅವರದು. ಈ ಹಣದಲ್ಲಿ ಸುಮಾರು 2,00,000/- (ಎರಡು ಲಕ್ಷ) ರೂಪಾಯಿ ವಿದ್ಯಾ ನಿಧಿಯಾಗಿ ಇರುವುದು ಶ್ಲಾಘನೀಯವಾಗಿದೆ. ಜನಾಂಗದ ಹಿತದೃಷ್ಟಿಯಿಂದ ಕಾರ್ಯ ಚಟುವಟಿಕೆ ನಡೆಯುವಂತೆ ಯುವಕರನ್ನು ಬೆನ್ನು ತಟ್ಟಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಉದಯಕ್ಕೆ ಕಾರಣ ಕರ್ತರಾದುದ್ದೆ ಅಲ್ಲದೆ, ಇಂದೂ ನಡೆಯುವ ಜನಾಂಗದ ಕಾರ್ಯ ಚಟುವಟಿಕೆಯಲ್ಲಿ ಯುವಕರಷ್ಟೇ ಉತ್ಸಾಹಕ ರಾಗಿರುತ್ತಾರೆ ಅಲ್ಲದೆ, ಕೊಡಗು ಗೌಡ ಮಹಿಳಾ ಒಕ್ಕೂಟದ ಸ್ಥಾಪನೆಗೂ ಸಹ ಪ್ರೇರಣೆ ನೀಡಿರುತ್ತಾರೆ. ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಹಾಗೂ ಕೊಡಗು ಗೌಡ ಮಹಿಳಾ ಒಕ್ಕೂಟದ ಉದಯದೊಂದಿಗೆ ನಮ್ಮ ಜನಾಂಗದ ಕಾರ್ಯ ಚಟುವಟಿಕೆಗಳು ಬೇರೆ ಯಾರೀಗೂ ಕಮ್ಮಿಯಿಲ್ಲವೆಂದು ತೋರಿಸಿ ಕೊಟ್ಟಿವೆ.

ಕೆಲ ದಿನಗಳ ಹಿಂದೆ ಶ್ರೀಯುತರನ್ನು ವಿದ್ಯಾಸಂಘದ ಬಗ್ಗೆ ಕೇಳಿದಾಗ ಅವರ ಕೆಲವು ಕನಸುಗಳಲ್ಲಿ ಒಂದಾದ ಅಂದರೆ ಮುಂದೆ ನಡೆಯುವ ಚುನಾವಣೆಯಲ್ಲಿ ಗೆದ್ದು ಬಂದರೆ ವಿದ್ಯಾ ಸಂಘದ ಜಾಗದಲ್ಲಿ ಸುಮಾರು 35 ರಿಂದ 40 ಲಕ್ಷ ರೂಪಾಯಿನಲ್ಲಿ ಒಂದು ಸಮುದಾಯ ಭವನ ನಿರ್ಮಿಸುವುದಲ್ಲದೆ ಇಂದು ನಮ್ಮ ಜನಾಂಗದ ಹೆಸರನ್ನು ಸಂಸ್ಕೃತಿ, ಸಂಪ್ರದಾಯ ಹಾಗೂ ಇನ್ನಿತರ ಕ್ಷೇತ್ರದಲ್ಲಿ ಎತ್ತಿಹಿಡಿದಿರುವ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಹಾಗೂ ಕೊಡಗು ಗೌಡ ಮಹಿಳಾ ಒಕ್ಕೂಟಕ್ಕೆ ಒಂದೊಂದು ಕಾರ್ಯಾಲಯ ಕೊಠಡಿಯನ್ನು ನಿರ್ಮಿಸಿ ಕೊಡುವ ಅಭಿಪ್ರಾಯವನ್ನು ಹೊಂದಿರುತ್ತಾರೆ. ಹೀಗಿರುವ ಸಂದರ್ಭದಲ್ಲಿ ಮುಂಬರುವ ವಿದ್ಯಾಸಂಘದ ಅಧ್ಯಕ್ಷರ ಚುನಾವಣೆಗೆ ಸ್ಪರ್ಧೆ ಏರ್ಪಟ್ಟರೆ ಸ್ಪರ್ಧಿಸಿ ಗೆಲ್ಲುವ ವಿಶ್ವಾಸವನ್ನು ಸಹ ಹೊಂದಿರುತ್ತಾರೆ. ಈ ಸನ್ನಿವೇಶಗಳಲ್ಲಿ ಗುಂಪುಗಾರಿಕೆ, ಪೈಪೋಟಿ ಬರುವುದು ಸಹಜ ವಿದ್ದರೂ ಅದನ್ನು ಚುನಾವಣೆಗೆ ಮಾತ್ರ ಸೀಮಿತವಾಗಿಡ ತಕ್ಕದೆಂದು ಅವರ ಅನಿಸಿಕೆ. ಕೊಡಗು ಗೌಡ ವಿದ್ಯಾಸಂಘದ ಆಸ್ತಿ ಮತ್ತು ಈ ಬಾರಿ ಮೊತ್ತವನ್ನು ಯಾರಿಗೆ ವಹಿಸಬೇಕೆಂಬುದು ಈಗಿನ ಸಂಘದ ಸದಸ್ಯರ ಕೈಯಲ್ಲಿದೆ. ಈ ಮೇಲಿನ ವಿಷಯವನ್ನು ಅವಲೋಕಿಸಿದಾಗ ಈಗಿನ ಹಾಲಿ ಅಧ್ಯಕ್ಷರಾದ ಕುಯ್ಯಮುಡಿ ಪೂರ್ಣಯ್ಯನವರೇಸೂಕ್ತ ವ್ಯಕ್ತಿಯೆಂದೆ ನನ್ನ ಅನಿಸಿಕೆಯಾಗಿದೆ.

ಟಿ. ಪಿ. ಕುಮಾರಜಯ

ಗುಣಕ್ಕೆ ಮತ್ಸರ ಇರಬಾರದು




✦ ಕೌಂಡಿನ್ಯ

**ಧಾರವಾಹಿ -41**

ಪೂಜಾರಿ ಯುವಕ ನರೇಂದ್ರನಾಯಕ ಈಗ ರಹಸ್ಯವಾಗಿ ಸರ್ಪಗಂಧ ತಯಾರಿಸಿದ್ದಾನೆ !

ಆದರೆ ಮೀನಳ ಆಯಸ್ಸು ಮುಗಿದಿತ್ತು !

ಮೀನಳ ಮನೆ ದೇವಸ್ಥಾನದ ಹತ್ತಿರವೇ ಇತ್ತು. ಅವಳಿಗೆ ಪೂಜಾರಿಯ ಬಗ್ಗೆ ಸಂದೇಹ ಬಂದು ಹಿಂಬಾಲಿಸಿಕೊಂಡು ಹೋಗಿದ್ದಳು. ಸರ್ಪಗಂಧದ ರಹಸ್ಯ ಗೊತ್ತಾಗಿತ್ತು !

- ಇದನ್ನು ಪೂಜಾರಿ ಕಂಡಿದ್ದನು !

ಸೇಡು ತೀರಿಸಿಕೊಳ್ಳಲು ಪ್ರಾರಂಭದಲ್ಲೇ ಅಡ್ಡಿ ! ಅದಕ್ಕೆ ಮೀನಳನ್ನು ಮುಗಿಸಲು ಪ್ರಯತ್ನಿಸಿದ.

ಸರ್ಪಗಂಧದ ಪ್ರಯೋಗ !

ಮೀನ ಕಾರಣ ಇಲ್ಲದೆ ಕೇವಲ ರಹಸ್ಯ ತಿಳಿದಿದ್ದರಿಂದ ದುರಂತಕ್ಕೆ ಬಲಿಯಾಗಿದ್ದಳು.

> ಇಲ್ಲಿಯವರೆಗೆ.........
>
> ಪೂಜಾರಿ ಯುವಕ ಪ್ರಸನ್ನನ ದೇಹಕ್ಕೆ ಸರ್ಪಗಂಧ ಸವರಲು ಪ್ರಯತ್ನಿಸುವಾಗ ರೇವತಿ, ಶ್ರೀಕಂಠ ಬಂದು ಕಾಪಾಡುತ್ತಾರೆ. ಪೂಜಾರಿ ತನ್ನ ಸೇಡಿನ ಕತೆಯನ್ನು ಹೇಳಲಾರಂಭಿ[illegible]ನೆ.
>
> ...........

ಸೇಡಿನ ಬೇಟೆ ಪ್ರಾರಂಭವಾಯಿತು.

ಮೊದಲು ಅರುಂಧತಿಯ ಗಂಡನಿಗೆ, ನಂತರ ಅರುಂಧತಿಗೆ ಸರ್ಪಗಂಧ ಬಳಿದನು.

ಮೂರನೆಯ ಬಲಿ ಲಿಂಗಯ್ಯ ! ಅವನನ್ನು ಬಂಗಲೆಯಿಂದ ಅಪಹರಿಸಿ ಕೊಂಡು ಬಂದು ಹುತ್ತದ ಬಳಿ ಮಲಗಿಸಿ ಸರ್ಪಗಂಧ ಸವರಿದ್ದನು. ವೀರಭದ್ರನನ್ನು ಅಡ್ಡಗಟ್ಟಿ ನಿಂತು ಈ ಸರ್ಪಗಂಧ ಬಳಿದಿದ್ದನು.

- ಕೊನೆಯ ಪ್ರಯತ್ನ ಪ್ರಸನ್ನ !

ಆದರೆ ಶ್ರೀಕಂಠ, ರೇವತಿ ಸಮಯಕ್ಕೆ ಸರಿಯಾಗಿ ಬಂದು ಪ್ರಸನ್ನನ್ನು ಕಾಪಾಡಿದ್ದರು.

ಪೂರ್ತಿ ಸೇಡು.

ಕೊಲೆ ಎಂದು ಆರೋಪ ಬರದಂತೆ ಅಪಾಯಕಾರಿ ಪ್ರಯತ್ನದಿಂದ ಸೇಡು ತೀರಿಸಿಕೊಂಡಿದ್ದನು. ಈ ನರೇಂದ್ರನಾಯಕ !

ನರೇಂದ್ರನಾಯಕ ಈಗ ಪೋಲಿಸರಿಗೆ ಶರಣಾಗಿ ನ್ಯಾಯಾಲಯ ವಿಧಿಸಿರುವ ಶಿಕ್ಷೆ ಅನುಭವಿಸುತ್ತಿದ್ದಾನೆ !

* * *

ಈಗ ಹಾವುಗಳು ದಂಡಿ, ದಂಡಿಯಾಗಿ ಹುತ್ತದಿಂದ ಹೊರಬರುತ್ತಿಲ್ಲ !

ಮನುಷ್ಯರ ದೇಹಕ್ಕೆ ಸುತ್ತಿಕೊಳ್ಳುತ್ತಿಲ್ಲ !

ಸರ್ಪಗಂಧದ ಸೇಡಿನ ಕತೆ ಮುಗಿದಿದೆ !

ಪ್ರಸನ್ನ ನಿಧಿಯಲ್ಲಿ ಎಂಭತ್ತು ಭಾಗವನ್ನು ಈ ಮೊದಲೇ ಸರ್ಕಾರಕ್ಕೆ ಒಪ್ಪಿಸಿದ್ದನು.

ಬಡ ಬಗ್ಗರಿಗೆ ಸಹಾಯ ಮಾಡಿದ್ದನು. ರೇವತಿ ಈ ಊರಿಗೆ ಬಂದಿದ್ದು ಪ್ರಸನ್ನನನ್ನು ಮದುವೆ ಆಗಲು ! ಪ್ರಸನ್ನ ನಿರಪರಾಧಿ !

ಅವನ ಒಳ್ಳೆಯತನದ ಅರಿವಾಗಿ ರೇವತಿ ಅವನಿಗೆ ಒಲಿದಿದ್ದಾಳೆ !

ಸರ್ಪಗಂಧದ ಕತೆ ಮುಗಿದು ಎಡತೊರೆ ಬಂಗಲೆಯಲ್ಲಿ ಸುಖ ಸಂಸಾರದ ಕತೆ ಪ್ರಾರಂಭವಾಗಿದೆ.

(ಮುಗಿಯಿತು)

---

## ಸ್ತ್ರೀ ಪರಿಸರ

"ಸ್ತ್ರೀ" ನೀನು ಪರಿಸರ,
ಪರಂಪರೆಯಿಂದ ಇದನ್ನೆ ಹೇಳುತಿದೆ ಲೋಕ ಗಿಳಿ ಪಾಠ
ರಿಯಾಯಿತಿ ಇಲ್ಲ ನಿನಗೆ ಯಾವುದೆ ಕಷ್ಟ, ಕಾರ್ಪಣ್ಯದಲ್ಲಿ. ಗಂಡಸಿಗೆ ಸಮಾ.
ಸನ್ಯಾಸಿನಿಯಂತೆ ಎಲ್ಲಾ ತ್ಯಾಗದಲು ಮುಂದು. ನೀ ಕೊಡುವೆ
ಬೆಳಕ ನಿನ್ನಲ್ಲಿ ನೀ ಬೆಂದು.
ರಸ ತೆಗೆದ ಕಬ್ಬಾದ ಮೇಲೆ, ಕೇಳುವರು ನಿನ್ನಿಂದ ಏನಾಯಿತು.
ಹೃದಯ ಹೀನರು ಭೂತಕಾಲದಲಿ ಭೂತಗಳಾಗಿ ಕಾಡಿದರು
ತೃಪ್ತಿಯಿಲ್ಲ ಈ ಹಾಳು ಜನರಿಗೆ.
ಸುಖ ಕಾಣಲಿಲ್ಲ ಕಂದಳಿರುವಾಗ ತಬ್ಬಲಿಯಾದೆ ಪ್ರೀತಿಯಿಲ್ಲದೆ.
ಸುಖ ಕಾಣಲಿಲ್ಲ ಮಗುವಿನಲ್ಲಿ ಕೂಲಿಯ ಆಳಾದೆ.
ಸುಖ ಕಾಣಲಿಲ್ಲ ಯೌವನದಲ್ಲಿ ಕಾಮ ತೋಳಗಳಿಂದ ನಿನ್ನನ್ನು
ನೀ ಕಾದಿರಿಸಿಕೊಂಡೆ.
ಸುಖ ಕಾಣಲಿಲ್ಲ ಹೆಂಡತಿಯಾಗಿ ಹೆಂಡ ಕುಡುಕ ಗಂಡನಿಂದ
ಸುಖ ಕಾಣಲಿಲ್ಲ ತಾಯಿಯಾಗಿ ತಾಯಿ ಬೆಲೆ ಅರಿಯದ ಮಕ್ಕಳಿಂದ.
ಆದರೆ ಸುಖ ಕಂಡರು ನಿನ್ನಿಂದ ನಿನ್ನ ಸವೆಸಿದವರು.
ಕೇಳುವರು ಏನಾಯಿತು? ಏನಾಯಿತು ! ನಮಗೆ ನಿನ್ನಿಂದ
"ಸ್ತ್ರೀ" ನೀನು ಪರಿಸರ ಬರಿ ಕೊಡುವೆ ಪಡೆಯಲಾರೆ ನೀ ಏನನ್ನೂ
ಈ ಹಾಳು ಹೃದಯವಿಲ್ಲದ ಲೋಕದಿಂದ.

ಶಂಕರನ ಜ್ಯೋತಿ ಬಸಪ್ಪ

---

**ಸತ್ತ ಎಮ್ಮೆಗೆ ಹತ್ತು ಕುತ್ತಿ ಹಾಲು**

# ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

ಲೇಖಕ : ಶಂಕರನ ಬಸಪ್ಪ

ಧಾರಾವಾಹಿ - 20

ಹಿಂದೆ ನಡದದ್.......

ಈ ಹಿಂದೆ Mr. ರಾಜುಗೆ ನೋಟ್‌ಗಳನ್ನ ಪ್ರಿಂಟ್ ಮಾಡ್ಸ ಬ್ಯಾಂಕ್‌ಲಿ ಹಣ್ ಸಿಕ್ಕದೇ ಇದ್ರೂ ಬಾಂಬೆ ರೆಡಿಮೇಡ್ ಗಾರ್ಮೆಂಟ್ಸ್ ಫ್ಯಾಕ್ಟರಿಲಿ C.B.I. ಇನೆಸ್ಪೆಕ್ಟರ್ ಆಗಿ ಚೆಕಿಂಗ್‌ಗೆ ಹೋಗಿದಕ್ಕೆ ಒಳ್ಳೆ ಹಣ ಸಂಪಾದನೆ ಆಗಿ ಹೋತ್. ಆ ಗೋಲ್‌ಮಾಲ್ ಲೆಕ್ಕ ಮಾಡ್ಸಿದ ಆ ಫ್ಯಾಕ್ಟರಿ ಸಾಹುಕಾರ ಈ C.B.I. ಇನಸ್ಪೆಕ್ಟರ್‌ನ ಸ್ಟೈಲ್‌ನ ನೋಡಿ ಕ್ಲೀನ್ ಬೋಲ್ಡ್ ಆಗಿ ಹೋಗಿತ್. ತಂಗೆನ ಮದ್ವೆ ದಿನ ಹತ್ರ ಬಂದ್‌ದರಂದ. Mr. ರಾಜು ತನ್ನ ಬಾವ ಅಬ್ಕಾರಿ ಇನ್‌ಸ್ಪೆಕ್ಟರ್ ಅರಸಿಕೆರೆಲಿ ಇರುವವರನ ನೋಡಿಕೆ ಹೊರಟದೆ............

ಮುಂದಕೆ...........

ಒಂದು ಚೂರು ಸಂಪಾದನೆ ಜಾಸ್ತಿ ಆಗಿಬುಟ್ಟರೆ ಆ ಮನುಷ್ಯಂಗೆ ಸ್ವಲ್ಪ ಆಲಸ್ಯ ಜಾಸ್ತಿ ಆಗಿ ಬುಟ್ಟದೆ ಹಂಗೇ ಆತ್ ಈ ರಾಜುನ ಕಥೆ ಇಂದಂಗೆ ನೆನ್ನೆ ದಿನ ಬರೀ ಒಂದು ಗಂಟೆಲಿ 25,000 ರೂಪಾಯಿ ಸಂಪಾದನೆ ಆಗಿ ಹೋಗಿತ್. ಹಂಗಾಗಿ ಇಂದ್ ಬೆಳಿಗ್ಗೆ ಎಳಿಕೆ ಬಹಳ ತಡ ಸುತೆಲ್ಲಾ ದೂಳು ತುಂಬಿಕಂಡ್ ಜೇಡರ ಹುಳ ಅದರ ಖುಷಿ ಇರುವಷ್ಟು ಕಡೆಗಳಲೆಲ್ಲಾ ತನ್ನ ಬಲೆನ ಹೆಣ್ಡ್ ಇಟ್ಟಿತ್. ಈ ರಾಜು ಯಾಗೋಳು ಮಧ್ಯರಾತ್ರಿಗೆ ಬಂದ್ ಈ ಕೊಂಬರೆ ಒಳಗೆ ಸೇರಿಕಂಬೋದು. ಬೆಳಿಗ್ಗೆ ಬೇಗ ಎದ್ದ್ ಹೊರಗಡೆಗೆ ನಡೆಯದು. ಹಂಗಾಗಿ ಇಂದ್ ಈ ಕೊಂಬರೆ ಸನೆಲ್ಲಾ ಕ್ಲೀನ್ ಮಾಡಿಕೆ ಆ ಲಾಡ್ಜ್‌ನ ಕೆಲ್ಸದ ಮಾಲಿನ ಕರ್ಕೊಂಡ್‌ಬಾತ್. ಆ ರೂಂ ಒಳಗೆ ಎಲ್ಲಾ ಅಚ್ಚುಕಟ್ಟಾಗಿ ಕ್ಲೀನ್ ಆಕೆ ಒಂದ್ ಗಂಟೆ ಸಮಯ ಹಿಡ್ತ್.

ಆಗ ಈ ರಾಜು ಮಂಜಂಗೆ ತನ್ನ ಸೋದರ ಬಾವ. ಅಬಕಾರಿ ಇನಸ್ಪೆಕ್ಟರ್, ಎಂ.ಎಂ. ಮಂದಣ್ಣ್ ಇವರ ನೋಡಿಕೆ ಗ್ಯಾನ ಆತ್. ಅವು ಈಗ ಅರಸಿಕೆರೆಲಿ ಅಲ್ಲೇ ದೊಡ್ಡ ಕ್ವಾರ್ಟರ್ಸ್‌ಲಿ ಅವರ ವಾಸಗಡ. ಹಂಗಾಗಿ ಇಂದ್ ರಾಜು ಸ್ವಲ್ಪ ಟ್ರಿಂ ಆಗಿ ಬಟ್ಟೆ ಹಾಕಂಡ್. ಇಂದ್ ನನ್ನ ಬಾವಂಗೆ ಸರಪರೈಸ್ ವಿಸಿಟ್ ಕೊಟ್ಟ್ ಹಂಗೇ ತಂಗೆ ಶೋಭಳ ಮದ್ವೆ ವಿಚಾರನ ತಿಳ್ಸಿಕ್ಕುತಾ ಗ್ಯಾನ್ ಮಾಡಿಕಂಡ್ ಅಲ್ಲಿಂದ ಸಬರ್ಬನ್ ಬಸ್‌ಸ್ಟಾಂಡ್ ಕಡೆಗೆ ಹೊರಟತ್.

ಇನ್ನೂ ಗಂಟೆ ಮೂರು ಅಷ್ಟೇ ಆಗ ಅರಸಿಕೆರೆಗೆ ಒಂದ್ ಲಕ್ಷುರಿ ಸಾಹುಕಾರಿ ಬಸ್ಸು ಹೊರಟ್ ನಿಂತಿತ್. ಅದರಲ್ಲಿ ನೆಟ್ಟಂಗೆ ಅರಸಿಕೆರೆಗೆ ಹೊರಟತ್. ಇವರ ಬಸ್ಸ್ ರಾತ್ರಿ 6½ - 7 ಗಂಟೆಗೆಲ್ಲಾ ಅರಸಿಕೆರೆಗೆ ಮುಟ್ಟುದು. ಬಾವನ ಹತ್ರ ಇದೇ ಫಸ್ಟ್ ಟೈಂ ಹೊರಟದ್. ಅವರ ಅಡ್ರಾಸ್ ಕೂಡಾ ಸರಿಯಾಗಿ ಗೊತಿಲೆಲ್ಲಾ ಅಲ್ಲಿ ಹೋಗಿ ಈ ಅಬ್ಕಾರಿ ಆಫೀಸ್‌ನವರ ಕ್ವಾರ್ಟರ್ಸ್‌ಲಿ ವಿಚಾರಿಸಿರೆ ಇವರ ಅಡ್ರಾಸ್ ಸಿಕ್ಕಿದೆ. ಯಾಕೆತ್ತೇಳಿರೆ ಇವು ಇವರ ಇಲಾಖೆಲಿ ಒಳ್ಳೆ ಹೆಸರ್ ಪಡ್ಕಂಡ ಒಬ್ಬ ನಿಷ್ಠ ಅಧಿಕಾರಿಯಾಗಿಯೊಳೊ.

ಬಸ್ ಸಲೀಸಾಗಿ ಅಲ್ಲಿಂದ ಹೊರಟ್ ಅರಸಿಕೆರೆ ಟರ್ನ್ ಮದ್ಯ ಬಂದ್ ನಿಂತತ್. ಈಗ ಆ ಅರಸಿಕೆರೆ ಟೌನ್ ಆಗಿದ್ದ್ ದೊಡ್ಡ ಸಿಟಿ ಆಗಿ ಹೋಗುಟ್ಟು. ಇದ್ N.H.4. ಹೈವೇ ರೋಡ್. ಆಗಿದ್ದರಂದ ಇಲ್ಲಿ ಸರ್ಕಾರಿ ಬಸ್ಸುಗ-ಸಾಹುಕಾರಿ ಬಸ್ಸ್‌ಗ, ಹಲವಾರು ಮಾಡಲ್‌ಗಳ ಕಾರ್‌ಗಳ ಓಡಾಟ ಬಹಳ ಜೋರಾಗಿ ನಡೀತಾ ಉಟ್ಟು. ರಸ್ತೆಯ ಎರಡೂ ಕಡೆಗಳಲ್ಲಿ ಎಲ್ಲಿ ನೋಡಿರೂ ಜಗಜಗಿಸುವ ಲೈಟ್ ಬೆಳಕಿನ ಹೊಟೆಲ್‌ಗ, ಸ್ವೀಟ್ಸ್ ಸ್ಟಾಲ್‌ಗ ಆದೂ ಇದೂ ಶೋ ರೂಂಗ ಎಲ್ಲಾ ಬಹಳ ಮಾರ್ಡನ್ ವ್ಯಾಪಾರದ ಮಳಿಗೆಗ ಆಗಿದ್ದೊ. ವ್ಯಾಪಾರಕ್ಕೆ ಇಲ್ಲಿ ಹಗಲು ರಾತ್ರಿ ತ್ತೇಳುವ ವ್ಯತ್ಯಾಸನೇ ಇತ್‌ಲೆ. ಯಾಕೆತ್ತೇಳಿರೆ ಬೆಂಗಳೂರು, ಬೊಂಬೆಯ ಹೈವೇ ರಸ್ತೆ ಪಾಸಾಗುವ ಈ ಅರಸಿಕೆರೆ ಒಳ್ಳೆ ಒಂದ್ ವ್ಯಾಪಾರದ ಕೇಂದ್ರ ಆಗುಟ್ಟು.

ಅಲ್ಲಿ ಒಂದ್ ಕಡೆ ಮೊದಲಿನ ಸರ್ಕಲ್ ಬಜಾರ್ ರೋಡ್‌ಲಿ ಕೇಂದ್ರ ಗಣಪತಿ ಉತ್ಸಾವಕ್ಕೆ ಬಹಳ ಬೊಂಬಾಟಾಗಿ ವ್ಯವಸ್ತೆ ಮಾಡಿದ್ದೊ. ತುಂಬಾ ವಿಸ್ತಾರವಾದ ತೆಂಗಿನಗರಿ ಚಪ್ಪರದ ಎದುರುಗಡೆಲಿ ಬಹಳ ಎತ್ತರಕ್ಕೆ ಕೈಲಾಸ ಪರ್ವತ ಮಾದರಿನ ಅಲ್ಲಿನ ಕಲಾಕಾರಂಗ ರೆಡಿ ಮಾಡಿದ್ದೊ. ಈ ಹಿಮ ಪರ್ವತದ ಒಂದು ಬೆಟ್ಟದ ಮೇಲೆ ಶಿವಪಾರ್ವತಿ ಮೂರ್ತಿನ ನಿಲ್ಲಿಸಿದ್ದೊ. ಆದ್ರೇ ಪೂಜಾ ಮೂರ್ತಿ ಆದ ಗಣೇಶನ ಮೂರು ಆಳು ಎತ್ತರದ ವಿಗ್ರನ ಬಹಳ ಲಾಯಕ್ಕಾಗಿ ಆ ಜಾಗಲೇ ರೆಡಿ ಮಾಡಿ ನಿಲ್ಲಿಸಿದ್ದೊ. ಇಂತಹ ಭವ್ಯವಾದ ಅಪೂರ್ವ ಈ ದೇವರ ಸನ್ನಿಧಿಗೆ ಭಕ್ತರ ಗುಂಪಂತೂ ಹೇಳಿಕೆ ಬೊತ್ತದಷ್ಟ್ ಬಂದ್ ಸೇರಿದ್ದೊ. ಅಲ್ಲದೆ ಅಲ್ಲಿ ಒಂದೊಂದು ದಿನಾನೂ ಪ್ರಖ್ಯಾತ ಕಲಾವಿದರ ಪ್ರೋಗ್ರಾಂಗ ಲಕ್ಷಾಂತರ ರೂಪಾಯಿ ಖರ್ಚಿಂದ ನಡೆಯುತಿತ್.

ಇದರೆಲ್ಲಾ Mr. ರಾಜು ಒಂದ್ ಸರ್ತಿ ದೂರದಿಂದ್ಲೇ ನೋಡಿಕಂಡ್ ಆ ವಿಘ್ನನಿವಾರಕ ಗಣಪಂಗೆ ಮನ್ಸ್‌ಲೇ ತಲೆಬಾಗಿ ನಮಸ್ಕರಿಸಿತ್. ಯಾಕೆತ್ತೇಕ್ರೆ ಮೊದ್ಲ್ ಇವನ ಬಾವ ಮಂದಣ್ಣನವರ ಅಡ್ರಾಸ್ ಹಿಡ್ದ್ ಅವರ ಬೇಟಿ ಆದ ಮೇಲೆ ಪುನಃ ಇಲ್ಲಿನ ಈ ಪ್ರೋಗ್ರಾಂಗೆ ಬರೋಕುತಾ ಗ್ಯಾನ ಮಾಡಿಕಂಡ್ ಅಬ್ಕಾರಿ ಆಫೀಶರ್ಸ್‌ಗಳ ಕ್ವಾರ್ಟರ್ಸ್ ಕಡೆಗೆ ಕಾಲ್ ಹಾಕಿತ್. ಅಲ್ಲಿ ಇಲ್ಲಿ ಕೇಳಿಕಂಡ್ ಬಂದು ದೊಡ್ಡ ಬಂಗಲೆನ ಎದುರಿಗೆ ಬಂದ್ ನಿಂತತ್. ಅಲ್ಲಿ ಒಬ್ಬ ಅಬ್ಕಾರಿ ಆಫೀಸ್ ಕಡೆಯವ Gaurd ಗೇಟ್ ಹತ್ರ ನಿಂತಿತ್. ಸ್ವಾಮಿ ನಾನು ರಾಜು ಅಂತ. ಇನ್‌ಸ್ಪೆಕ್ಟರ್ ಮಂದಣ್ಣನವರಿಗೆ ಬಾವಮೈದ ಆಕು. ಅವರನ್ನ ಕಾಂಬಕ್ಕೆ ನಾನ್ ಕೊಡಗ್‌ಂದ ಬಂದೊಳೆ. ಅವರ ಮನೆ ಇದೇ ತಾನೆತ ಕೇಳ್ತ್.

ಅಯ್ಯೋ ಸ್ವಾಮಿ ನೀವು ಅಷ್ಟ್ ದೂರುಂದ ಬಂದೋಳಿರಲ್ಲಾ. ಛೇ ಪಾಪ. ಸಾಹೇಬರು ಅವರ ಸಂಸಾರ ಸಮೇತ ನಾಲ್ಕು ಗಂಟೆಗೆ ಬೆಂಗಳೂರಿಗೆ ಅವರ ಜೀಪಲ್ಲೇ ಹೋಗ್ಯೋಳೊ. ನಾಳೆ ಸಾಯಂಕಾಲಕ್ಕೆ

ಬನ್ನಿ ಆಗ ಅವು ಬಂದಿದ್ದವೆ ತೇಳ್ತ್. ಒಹ್. ಮೈಗಾಡ್ ! ಈಗ ನಾನೆಲ್ಯಪ್ಪಾ ಈ ಕತ್ತಲೆಲೀ ಉಳ್ಕೊಂಬೋದು? ರ್‍ರೀ. ಯಜ್‌ಮಾನ್ರೇ ಇದೊಂದು ರಾತ್ರಿ ನಾನ್ ಇಲ್ಲೇ ಉಳ್‌ಕಂಡನೆ. ನನ್ನ ಬಾವ ಇಲ್ಲಿ ಇರುವ್ರೋ ತ್ತೇಳುವ ಭರವಸಿಂದ ಬಂದುಬುಟ್ಟೆ. ಈಗ ನಾನ್ ಎನು ಮಾಡ್ದು ಹೇಳಿ ಪ್ಲೀಸ್ ತಾ ಕೇಳ್ತ್.

ಸ್ವಾಮಿ ನೀವು ಬೇರೆ ಎಲ್ಲಾದ್ರೂ ಹೋಗಿ ಮಲಗಿಕೊಳ್ಳಿ, ನಾನ್ ಮಾತ್ರ ಸಾಹೇಬ್ರ ಅಪ್ಪಣೆ ಇಲ್ದೆ ಯಾರನ್ನೂ ಹತ್ರ ಸೇರ್ಸುದಿಲ್ಲೆ. ಹೋಗಿ ನೀವು ನಾಳೆ ಬನ್ನಿತ್ತೇಳಿ ಹೇಳಿಕಂಡ್ ಒಂದ್ ಬೀಡಿಗೆ ಬೆಂಕಿ ಹಚ್ಚಿಕಂಡ್ ತಿರ್ಗಿ ನಿಂತ್‌ಕಂಡಿತ್.

ರಾಜು, ಉಪ್‌ಪ್ಪಾ !!ತ್ತೇಳಿ ಒಂದ್ ನಿಟ್ಟುಸಿರು ಬುಡ್ತ್. ಆಗಲಿ ಇಂದ್ ಯಾವುದಾದರೂ ಲಾಡ್ಜ್‌ಲಿ ಮಲಗಿದ್ದ್ ನಾಳೆ ಸಾಯಂಕಾಲ ಬನ್ನೆತ್ತೇಳಿ ಬೇಜಾರ್‌ಲಿ ಅಲ್ಲಿಂದ ಹೊರಟತ್. ತುಂಬಾ ಬೇಜಾರಾದ ರಾಜುಗೆ ಈ ಗಣಪತಿ ಉತ್ಸವನ ನೊಡಿಕೊ ಇಷ್ಟ ಆತ್‌ಲ್ಲೆ. ಇಲ್ಲಿ ರಾತ್ರಿ ಲಾಡ್ಜ್‌ಲೀ-ಉಳ್‌ಕಂಬಕೊ ಇಷ್ಟ್ ಆಗದೆ ಹಂಗೇ ಬೇಜಾರ್‌ಲಿ ವಾಪಾಸ್‌ಬಾತ್. ಪಕ್ಕದಲ್ಲೇ ಒಂದೇ ಪಾಸ್ಟ್‌ಪುಡ್ ಅಂಗಡಿಗೆ ನುಗ್ಗಿತ್.

ಅರಸಿಕೆರೆಲಿ ಊಟ ತುಂಬಾ ಲಾಯಕ್ಕಿದ್ದದೆ ತಾ ಹೇಳಿ ಕಂಡ್ ಒಂದು ಮೆಸ ರೂಂ ಪಲಾವ್‌ಗೆ ಆರ್ಡರ್ ಮಾಡ್ತ್. ಅಣಬೆನ ಹುರ್ದ್ ಮಾಡಿದ ಪಲಾವ್‌ಗೆ ಬೇರೊಂದು ತರದ ಅಣಬೆದ್ ಪಲ್ಯ. ಅಲ್ಲದೆ ಜೊತೆಗೆ ಅಣಬೆದೇ ಸೂಪು ಕೂಡಾ. ಇದರ ಎಷ್ಟು ತಿಂದರೂ ತೃಪ್ತಿ ಆಗದೆ ಇನ್ನೂ ಒಂದ್ ಪ್ಲೇಟ್ ಮಸರೂಂ ಪಲಾವುನ ತರ್ಸಿಕಂಡ್ ತಿಂದ್ ಹೊರಗಡೆ ಬಂದ್ ಸ್ವೀಟ್ ಬೀಡಾ ಬಾಯಿಗೆ ಹಾಕಂಡತ್.

ಆಗ ಹುಬ್ಬಳ್ಳಿ ಕಡೇಂದ ಒಂದು ಸುಪರ್ ಡಿಲಕ್ಸ್ ಲಕ್ಸುರಿ ಬಸ್ ಬಂದ್ ಅಲ್ಲಿ ಸ್ಟಾಪ್ ಮಾಡ್ತ್. ಅದರ ಒಳಗಡೇಂದ ಕೆಲವು ಜನ ಕೆಳಗೆ ಇಳ್ದ್. ಇದೇ ಪಾಸ್ಟ್‌ಪುಡ್ ಮಳಿಗೆಗೆ ನುಗ್ಗಿದೊ. 10 ನಿಮಿಷಗಳ ಒಳಗೆ ಇಳ್ದ ಜನ ಲೈಟ್ ಪುಡ್ ತಕಂಡ್ ತಮಿಗೆ ಬೇಕಾದ ಅದೂ ಇದೂ ಸಾಮಾನ್‌ಗಳನ್ನ ಪರ್ಚೆಸ್ ಮಾಡಿಕಂಡೊ. ಪುನಃ ವಾಪಸ್ಸ್ ಬಸ್ಸಿಗೆ ಹತ್ತಿದೊ. ಸರಿ ಇಲ್ಲಿ ನನ್ನ ಬಾವ ಇಲ್ದೇ ಇದ್ದ ಮೇಲೆ ಇನ್ ಈ ಅರಸಿಕೆರೆ ಸಹವಾಸ ಸಾಕ್‌ತ್ತೇಳಿ ರಾಜು ಕೂಡ ಈ ಬಸ್ ಒಳಗೆ ಬಂದ್ ಖಾಲಿ ಸೀಟ್‌ನ ಹಿಡ್ದ್ ಕುದ್ದ್‌ಕಂಡತ್.

ಗಂಟೆ 10 ಆಗಿರ್ದು. ಬೊಂಬಾಯಿ ಲಕ್ಷುರಿ ಬಸ್ ಚನ್ನರಾಯಪಟ್ಟಣನ ದಾಟಿ ಕಿಕ್ಕೇರಿ ಹತ್ರಕ್ಕೆ ಬರ್ತಾಇತ್. ಡ್ರೈವರ್ ಒಳಗಡೆ ಇದ್ದ ಮಂದ ಬೆಳಕ್‌ನೆಲ್ಲಾ ಆಪ್ ಮಾಡ್ತ್. ವಿದುವಾದ ಸದ್ದ್‌ಲಿ ಹಿಂದಿ ಹಾಡ್ ಮಾತ್ರ ನಡೀತಿತ್ -

ಮೈ ಕಿಲಾಡಿ..... ಹೈ........ ತೂ ಅನಾಡೀ....... ಇದರ ಕೇಳಿಕಂಡೇ ಕೆಲವು ಪ್ರಯಾಣಿಕರು ದೂ ರಂದ ಪ್ರಯಾಣ ಮಾಡ್ದ ಸುಸ್ತಾಗಿಯೋ ಕೆಲವುಕೆ ಹೊಟ್ಟೆ ತುಂಬಿ ಮೈ ಬಾರ ಆದದರಿಂದ ಎನೋ ಒಬ್ಬೊಬರಾಗಿ ಹಂಗೇ ಸೀಟ್‌ಗೆ ಒರಗಿ ಕಂಡ್ ನಿದ್ರೆ ಒಳಗೆ ಜಾರುತಿದ್ದೊ. ಬಸ್ ಯಾವ ತೊಂದ್ರೆನೂ ಇಲ್ದೆ ಅದರ ಪಾಡಿಗೆ ಅದ್ ಕತ್ತಲೆನ ಸೀಳಿಕಂಡ್ ಮೈಸೂರು ಕಡೆಗೆ ಆ ಸಿಂಗಲ್ ರೋಡ್‌ಲಿ ನುಗ್ಗುತ್ತಿತ್ತ್.

(ಮುಂದ್‌ವರ್ದದೆ)

---

## ಕೈಲು ಮುಹುರ್ತ ನಿಮಿತ್ತ ಸಂತೋಷ ಕೂಟ

ಹೂಟ್‌ಗಳ್ಳಿ ಗೌಡ ಮಿತ್ರರ ಬಳಗದವರಿಂದ 15-10-2000ರಲ್ಲಿ ಸಂತೋಷ ಕೂಟವು ಶ್ರೀ ಮುಕ್ಕಾಟಿರ ಉಲ್ಲಾಸನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಶ್ರೀ ಪೂಜಾರಿ ಬೋಪಯ್ಯನವರು ಮತ್ತು ಪ್ರೊ॥ ಕೊಂಬಾರನ ಬಸಪ್ಪನವರು ಆಗಮಿಸಿದ್ದರು. ಶ್ರೀಮತಿ ಚೆರಿಯ ಮನೆ ನೀಲಮ್ಮ ಮತ್ತು ಮೊಳ್ಳೀರ ಬಸಪ್ಪನವರು ಕೈಲು ಮುಹುರ್ತ ಹಬ್ಬದ ವಿಶಿಷ್ಟತೆಯ ಬಗ್ಗೆ ಮಾತನಾಡಿದರು. ಆಟೋಟಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು.

ಕಾರ್ಯಕ್ರಮದ ಸಾರಥ್ಯವನ್ನು ಮೂಟೇರ ನಂಜಪ್ಪನವರು, ಚೆರಿಯ ಮನೆ ಉಮೇಶ್‌ರವರು, ನೆಕ್ಕಿಲ ಹರೀಶ್, ಚಿಕ್ಕೊಡಿ ರಮೇಶ್ ವಹಿಸಿದ್ದರು. ಅಧ್ಯಕ್ಷರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ವರದಿ : ಬೈನೆರವನ ಇಂದ್ರಕುಮಾರ

---

## ಶುಭ ವಿವಾಹ

- ಮಡಿಕೇರಿ ನಿವಾಸಿ ಕಾನತ್ತಿಲ್ ದೇವಯ್ಯನವರ ಮಗ ಜಯಪ್ರಕಾಶನಿಗೂ ಸೋಮವಾರಪೇಟೆ ತಾಲ್ಲೂಕು ಕೆದಂಬಾಡಿ ಎಸ್. ಬಾಲಕೃಷ್ಣನವರ ಮಗಳು ರೀಮಾಳಿಗೂ ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ದಿನಾಂಕ 12-10-2000ದಲ್ಲಿ ಬಾರಿ ವಿಜೃಂಭಣೆಯಲ್ಲಿ ಮದುವೆ ನಡೆಯಿತು.
- ಮಡಿಕೇರಿ ತಾಲೂಕು ಅರ್ವತ್ತೊಕ್ಲು ಗ್ರಾಮದ ಪೂಜಾರೀರ ಗೋಪಾಲನವರ ಮಗಳು ರೇವತಿಗೂ ಭಾಗಮಂಡಲ ಪದಕ್ಕಲ್ ಗ್ರಾಮದ ಚೆಟ್ಟಿ ಜನ ಸುಬ್ಬಯ್ಯನವರ ಮಗ ನಿತ್ಯಾಪ್ರಕಾಶ್‌ಗೂ ದಿನಾಂಕ 29-10-2000ರ್‍ಲಿ ಮಡಿಕೇರಿಯ ಮೇಲಿನ ಗೌಡ ವಿದ್ಯಾ ಸಂಘದ ಕಟ್ಟಡದಲ್ಲಿ ಬಾರಿ ಭರ್ಜರಿಯಾಗಿ ನೆರವೇರಿತೆಂದು ತಿಳಿದುಬಂದಿದೆ.

---

ನ್ಯಾಯವಿಲ್ಲದವ ನಾಯಿಗಿಂತ ಕಡೆ

# ಬೆಂಗಳೂರು ಉತ್ತರ ವಲಯದ ಅತ್ಯುತ್ತಮ ಶಿಕ್ಷಕಿ ಮತ್ತು ಡಬ್ಬಲ್ ಸ್ಟಾರ್ : ಶ್ರೀಮತಿ ಬಾರಿಕೆ ಜೋಯಪ್ಪ ಕುಸುಮಾವತಿ



ಕರ್ನಾಟಕದ 'ವೆಟರನ್ ಲಿವೆುಟಿಯರ್ ಅತ್ಲೆಟಿಕ್ ಅಸೋಷಿಯೇಷನ್' ಸಂಘದ ವತಿಯಿಂದ ರಾಜ್ಯ ಮಟ್ಟದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿತ್ತು. High Jump ಸ್ಪರ್ಧೆಯಲ್ಲಿ ಭಾಗವಹಿಸಲು ರಾಜ್ಯದ ನಾನಾ ಕಡೆಗಳಿಂದ ಆಗಮಿಸಿದ್ದ ಮಹಿಳೆಯರ ತಂಡ ಸಜ್ಜಾಗಿ ನಿಂತಿತ್ತು. ಕೊಂಚ ಸ್ಥೂಲಕಾಯ ಎನಿಸಬಹುದಾದಂತ ಸುಮಾರು 40ರ ಪ್ರಾಯದ ಮಹಿಳಾ ಸ್ಪರ್ಧಿಯೊಬ್ಬರನ್ನು ಗಮನಿಸಿದ ವೃದ್ಧ Coach ಒಬ್ಬರು ಕುಂಠಿ ನಗೆ ನಗುತ್ತಾ - "ಏನಮ್ಮಾ ನೀನೂ ಹಾರ್ತೀಯಾ ?" ಎಂದು ಕೇಳಿದರು.

"ಹೌದು ಸಾರ್" ಎಂದು ಮುಗುಳ್ನಕ್ಕರು ಆ ಮಹಿಳೆ.

"ಎಷ್ಟು ಮ್ಯಾಲೆ ಹಾರ್ತೀಯೋ !" ಎನ್ನುತ್ತಾ Coach ಮುನ್ನಡೆದರು.

ಆ ದಿನದ ಅಂತ್ಯದಲ್ಲಿ ಆ ಮಹಿಳೆಯೇ High Jump ಸ್ಪರ್ಧೆಯಲ್ಲಿ ಚಿನ್ನದ ಪದಕ ಗಿಟ್ಟಿಸಿಕೊಂಡು ಪ್ರೇಕ್ಷಕರನ್ನು ಚಕಿತಗೊಳಿಸಿದ್ದಲ್ಲದೆ, ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನದ ಪದಕ ಹಾಗೂ ಡಿಸ್‌ಕಸ್ ಥ್ರೋನಲ್ಲಿ ಕಂಚಿನ ಪದಕ ಗಿಟ್ಟಿಸಿಕೊಂಡು, ಭೂಪಾಲ್‌ನಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ನಡೆದ "22ನೇ ರಾಷ್ಟ್ರೀಯ ವೆಟರನ್ ಅತ್ಲೆಟಿಕ್ ಚಾಂಪಿಯನ್ ಷಿಪ್'ನಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸುವ ಅರ್ಹತೆಯನ್ನು ಪಡೆದರು. Technical Officials Clinic Diploma ತರಬೇತಿಯನ್ನು ಪಡೆದಿರುವ ಇವರನ್ನು ಈ ವರ್ಷದ ನವೆಂಬರ್ 5 ರಿಂದ ಪ್ರಾರಂಭವಾಗುವ ASIAD GAMES ಸಂದರ್ಭದಲ್ಲಿ 'Referee'ಯಾಗಿ ಆಯ್ಕೆ ಮಾಡಲಾಗಿದೆ.

ಬೆಂಗಳೂರಿನ ಜೆ. ಸಿ. ನಗರದ ಉರ್ದು ಮಾಡೆಲ್ ಪ್ರೈಮರಿ ಶಾಲೆಯಲ್ಲಿ ಫಿಸಿಕಲ್ ಎಜುಕೇಷನ್ [PE] ಟೀಚರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಬಾರಿಕೆ ಜೋಯಪ್ಪ ಕುಸುಮಾವತಿ - ಇವರು ಇಬ್ಬರು ಮಕ್ಕಳ ತಾಯಿ. 7ನೇ ತರಗತಿಯಲ್ಲಿ ಓದುತ್ತಿರುವ ಇವರ ಮಗ ದೀಕ್ಷಿತ್ ಮತ್ತು 9ನೇ ತರಗತಿಯಲ್ಲಿರುವ ಶ್ವೇತ ಇಬ್ಬರೂ Airforce Schoolನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಮಗಳು ಶ್ವೇತಾ L.K.G.ಯಿಂದ ಇಲ್ಲಿಯವರೆಗೆ CBSC Syllabus ಆದರೂ ಸತತವಾಗಿ ಮೊದಲನೇ ರ್‍ಯಾಂಕ್ ಪಡೆಯುತ್ತಿರುವ ಪ್ರತಿಭಾನ್ವಿತೆ. ಶ್ರೀಮತಿ ಕುಸುಮಾವತಿಯವರ ಪತಿ ಶ್ರೀ ಕೊರಗಪ್ಪ ಗೌಡ, ಇವರು GE Power Controls India Ltd., ಕಂಪೆನಿಯಲ್ಲಿ ಇಂಜಿನಿಯರ್ ಹುದ್ದೆಯಲ್ಲಿದ್ದಾರೆ.

ಶ್ರೀ ಬಾರಿಕೆ ಜೋಯಪ್ಪ ಹಾಗು ಮುತ್ತಮ್ಮ ದಂಪತಿಗಳ ಪುತ್ರಿಯಾದ ಕುಸುಮಾವತಿಗೆ ಸುಂಟಿಕೊಪ್ಪದ ಕೊಡಗರಹಳ್ಳಿಯ ಪ್ರಾಢಶಾಲೆಯ PE ಟೀಚರ್‌ರಾಗಿದ್ದ ಲಲಿತಾರವರು ಪ್ರತಿಯೊಂದು ಆಟೋಟಗಳಲ್ಲಿ ಭಾಗವಹಿಸಲು ಪ್ರೋತ್ಸಾಹವಿತ್ತರು. ಆಕೆಯ ಪ್ರಭಾವದಿಂದಾಗಿ ಇವರು ಮುಂದೆ ಕಾಲೇಜಿನಲ್ಲಿ ಕೂಡ ಪ್ರತಿಯೊಂದು ಆಟಗಳಲ್ಲಿ ಬಹುಮಾನಗಳನ್ನು ಪಡೆಯಲು ದಾರಿಯಾಯಿತು ಎಂದು ಕುಸುಮಾರವರು ಪ್ರೀತಿಯಿಂದ ನೆನೆಸಿಕೊಳ್ಳುತ್ತಾರೆ. ಇವರ ಪ್ರತಿಭೆಯನ್ನು ಗುರುತಿಸಿ ಇವರಿಗೆ National Sports Federation [NSF] Gwalior ವತಿಯಿಂದ ಡಬಲ್ ಸ್ಟಾರ್ ಲಭಿಸಿದೆ.

ಶ್ರೀಮತಿ ಕುಸುಮಾವತಿ ಸೇವಾದಳ ಟ್ರೈನಿಂಗ್ ಹಾಗು ಸ್ಕೌಟ್ಸ್ ಅಂಡ್ ಗೈಡ್ಸ್ ಟ್ರೈನಿಂಗ್ ಮುಗಿಸಿದ್ದಾರೆ. ಈ ತರಬೇತಿಗಳ ಸಹಾಯದಿಂದ S.I. ಆಗುವ ಬಲವಾದ ಹಂಬಲವಿರಿಸಿಕೊಂಡಿದ್ದ ಇವರ ಕನಸು ದುರದೃಷ್ಟವಶಾತ್ ಸಾಕಾರವಾಗಲಿಲ್ಲ. ಧೃತಿಗೆಡದ ಇವರು ಉದಾತ್ತ ಧ್ಯೇಯವುಳ್ಳ ಶಿಕ್ಷಕ ವೃತ್ತಿಯನ್ನು ಆರಿಸಿಕೊಂಡು ಅದರಲ್ಲೇ ತೃಪ್ತಿಯನ್ನು ಕಂಡುಕೊಂಡಿದ್ದಾರೆ.

ಕೈ ಕಸೂತಿ ಮತ್ತು ಪತ್ತೇದಾರಿ ಕಾದಂಬರಿಗಳನ್ನು ಓದುವುದರ ಜೊತೆಗೆ T.V.ಯಲ್ಲಿ WWF ಕಾರ್ಯಕ್ರಮವನ್ನು ತಪ್ಪದೇ ವೀಕ್ಷಿಸುವುದೆಂದರೆ ಇವರಿಗೆ ಎಲ್ಲಿಲ್ಲದ ಆಸಕ್ತಿ. "A good teacher explains, superior teacher demonstrates and a great teacher inspires" ಎನ್ನುವ ಹಾಗೆ, ಇವರಿಂದ ಪ್ರಭಾವಿತರಾದ ಇವರ ಶಾಲೆಯ ಮಕ್ಕಳು ರಾಷ್ಟ್ರಮಟ್ಟದಲ್ಲಿ Discuss Throw, Shot Phut ಮತ್ತು ಕುಸ್ತಿ ಪಂದ್ಯಗಳಲ್ಲಿ ಭಾಗವಹಿಸಿದ್ದಾರೆ. ಈ ವರ್ಷದ Sydney Olympicsನಲ್ಲಿ ಭಾಗವಹಿಸಲು ಮದ್ರಾಸಿನಲ್ಲಿ ಸೆಲೆಕ್ಷನ್ ನಡೆಯಿತು. ರಾಜ್ಯದ 26 ಮಂದಿ ಮಹಿಳೆಯರ ತಂಡದ 'Team Manager' ಆಗಿ ಶ್ರೀಮತಿ ಕುಸುಮಾರವರನ್ನು ಆಯ್ಕೆ ಮಾಡಿ ಮದ್ರಾಸಿಗೆ ಕಳುಹಿಸಲಾಗಿತ್ತು.

ಶ್ರೀಮತಿ ಕುಸುಮಾರವರ ಕಾರ್ಯನಿರ್ವಹಣೆಯನ್ನು ಗಣನೆಗೆ ತೆಗೆದುಕೊಂಡು ಬೆಂಗಳೂರು ಉತ್ತರ ವಲಯದ -'ಸಾರ್ವಜನಿಕ ಶಿಕ್ಷಣ ಇಲಾಖೆ'ಯ ವತಿಯಿಂದ ಆಯ್ಕೆಯಾಗಿದ್ದ 300 ಶಿಕ್ಷಕಿಯರ ಪೈಕಿ ಇವರಿಗೆ 2000-2001ನೇ ಸಾಲಿನ 'ಉತ್ತಮ ಶಿಕ್ಷಕಿ' ಪ್ರಶಸ್ತಿ ನೀಡಲಾಗಿದೆ.

8ನೇ ಪುಟಕ್ಕೆ

# ಕೊತ್ತಿಗೆ ಕಲ್ಸಿದ ಪಾಠ

ನೀವು ಎಷ್ಟೊ ರೀತಿಲಿ ಕೊತ್ತಿಗೆ ಪಾಠ ಕಲ್ಸಿದ್ ಕೇಳಿರ್ಪರಿ. ಬಿಸಿ ಹಾಲ್ ಮಡ್ಗಿ ಅದರ ಕುಡ್ಪ ಕೊತ್ತಿನ ನಾಲಿಗೆ ಬೆಂದದ್, ಬೆಸೆಗೆಲಿ ಮಡ್ಗಿದ ಹಾಲ್‌ನ ಕುಡಿಯಕನ ಚೊಂಬೊಳಗೆ ತಲೆಹುಕ್ಕಿ ಒಲೆಗೆ ಬಿದ್ದ್ ಕರಿಯಾದ್, ಇನ್ನ್ ಹೇಳಿಕೆ ಹೋದರೆ ಎಷ್ಟೊ ಉಟ್ಟು. ಅಂದರೆ ನನ್ನ ಕಥೆ ಬಾಕಿ ಆದು ಗ್ಯಾರಂಟಿ.

ಪಂಡ್‌ಕಾಲಲಿ ನಮ್ಮನೆ ದೊಡ್ಡವ್ವ ಒಂದು ಕಂಟಕೊತ್ತಿ ಸಾಕಿತ್. ಅದ್ ಅಂತಿಂತ ಕೊತ್ತಿ ಅಲ್ಲ. ಬಾರಿ ಉಪಾಯನ ಕೊತ್ತಿ. ಒಂದು ವಸ್ತ್‌ನ ಹೆಂಗೆ ಮಡ್ಗಿರು ಮಂಗಮಾಯ ಮಾಡಿ ಬುಡ್‌ತಿತ್ತ್.

ಬೆಸಗೆಲಿ ಮಡ್ಗಿದ ಕಾಯಿಗಡಿಂದ ಹಿಡ್ದ್, ಹಸಿ ಮೀನ್‌ವರೆಗೆ ಎಲ್ಲಾ ತಿಂದ್ ಕಾಲಿ ಮಾಡಿ, ಏಣಿ ಕೊಡೀಲಿ ಕುದ್ದ್‌ಕಂಡ್ ಮಿಯಾಂ, ಮಿಯಾಂ ತೇಳ್‌ತಿತ್ತ್, ಹಿಂಗಿರ್‌ಕನ ಒಂದು ದಿನ ನಮ್ಮ ಅಪ್ಪ ಮಡಿಕೇರಿಗೆ ಹೋಗಿ ಯಾಲಕ್ಕಿ ಮಾರಿ ಕಳ್ಳ್‌ಶಾಪ್‌ಗೆ ಹುಕ್ಕಿ ನೈಂಟಿ ಹಾಕಿ, ಹಿಂದಕ್ಕೆ ಬಂದ್ ಸಂತೆಗೆ ಹೋಗಿ ಒಂದು ಕೆ. ಜಿ. (K.G.) ಮೀನ್ ತಕ್ಕಂಡ್ ಮನೆಗೆ ಬಾತ್. ಅಪ್ಪ ಊಟ ಮುಗ್ಸಿಕಂಡ್ ಮೀನ್‌ನ ತಕ್ಕಂಡ್ ತೋಡಿಗೆ ಹೋಗಿ ಸೋಸಿ ತಂದ್ ಅವ್ವನ ಕೈಲಿ ಕೊಟ್ಟ್ ಲಾಯ್ಕ ಗೈಪು ಮಾಡ್‌ನೆ, ನಾನ್ ಹೋಗಿ ಗದ್ದೆ ನೀರ್ ನೋಡಿಕಂಡ್ ಬನ್ನೇ, ಸುಟ್ಟ ಯಸಂಡ್‌ಗ ಹೋಗುಳು ಮಾಡಿಬುಟ್ಟಳೊ ಅದರ ಮುಚ್ಚಿಕಂಡ್ ತ್ಯಾಟಕೆ ಬಂದ್ ಸುತ್ತಾಡಿಕಂಡ್ ಬನ್ನೆತಾ ಹೇಳಿ ಹೋತ್.

ಇಲ್ಲಿ ಅವ್ವ ಮೀನ್ ಬೆಸೆಗೆಲಿ ಮಡ್ಗಿ, ದನ ಕಟ್ಟಿಕೆ ಹೋತ್. ಅಷ್ಟೊತ್ತಿಗೆ ಇತ್ತ ಮೀನ್ ಕಾಲಿ, ಅವ್ವ ಹಟ್ಟಿಂದ ಬಂದ್ ಮೀನ್ ಸಾರಿಗೆ ಮಸಾಲ್ ಕಡ್ದ್ ಮೀನ್ ಪಾತ್ರೆಗೆ ಕೈ ಹಾಕಿರೆ, ಪಾತ್ರೆ ಹಗ್‌ರ ಮುಟ್ಟಿದೆ. ಇದೆಂತ ಆಶ್ಚರ್ಯ ಮೀನ್ ಖಾಲಿ. ಕೊತ್ತಿ ಮೀನ್‌ನ ಮಹಾರ ತಿಂದ್, ಏಣಿ ಕೋಡಿಲಿ ಕುದ್ಕಂಡ್ ಅವ್ವನೆ ನೋಡ್ದೆ. ಅವ್ವ ಚೀಪೆತಕಂಡ್, ನಿನ್ನ ದೊಂಡೆಕಟ್ಟಿ, ನಿನ್ನ ಹುಲಿ ಹೊರಿಕೆ ತೇಳಿಕಂಡ್ ಬೆರ್ಸಿತ್. ಅಷ್ಟೊತ್ತಿಗೆ ಗದ್ದೆಗೆ ಹೋದ ಅಪ್ಪ ತ್ಯಾಟಕ್ಕಾಗಿ ಮನೆಗೆ ಬಾತ್. ಅಪ್ಪಂಗೆ ವಿಷಯನೆಲ್ಲಾ ಅವ್ವ ಹೇಳ್ತ್. ಅಪ್ಪ ಕೊತ್ತಿಗೆ ಬಯ್ಕಂಡ್, ಇದ್ದ ತಂಗ್ಯನ್ನ ಸಾರ್‌ನ ತಿಂದ್ ಮಲ್ಗಿತ್. ಮಾರ್ಣೆ ದಿನ ಮನೆಲಿ ಹಂದಿ ಹೊಡ್ದೊ. ಅಪ್ಪ ಮಾಸತಂದ್ ಕೊಟ್ಟಿತ್. ಅವ್ವಂದ್ ಮಾಸಗೈಪು ಆತ್ ಅಷ್ಟೊತ್ತಿಗೆ ಅಪ್ಪಂಗೆ ಒಂದು ಉಪಾಯ ಹೊಳ್ತ್.

ಹಂದಿಗೈಪುಗೆ ಪಾಸಣ ಹಾಕಿ ಮಡ್ಗಿರೆ ಹೆಂಗೆತ. ಹಂಗೆ ಒಂದು ಚಿಪ್ಪಿಲಿ ಹಂದಿಗೈಪು ಹಾಕಿ ಪಾಸಣ ಹಾಕಿ ಮಡ್ಗಿತ್. ಕೊತ್ತಿ ನಮಿಗಿಂತ ಉಸಾರ್. ಅದರ್ನ ಮೂಸಿ ನೋಡಿ ಸುಮ್ಮನಾತ್. ನಾಕ್‌ದಿನ ಆದರೂ ಮುಟ್ಟಿತೇಲೆ ತೇಳಿ ಅಪ್ಪ ಅದರ್ನ ತಂದ್ ಬಿಸಾಕಿತ್. ಇದರ ಕಂಡ ಕೋಳಿಗ ಓಡಿ ಬಂದ್ ತಿಂದೊ. ತಿಂದ ಕೋಳಿಗ ಫಡ್ಚ. ಅಪ್ಪಂಗೆ ಅವ್ವನ ಕೈಯಿಂದ ಬೈಗೋಳೆ ಬೈಗೋಳು. ನಿಮ್ಮ ಸುಟ್ಟ ಕೆಲ್ಸನೋ ನೀವೊ. ಕೊತ್ತಿನ ಕೊಲ್ಲಿಕೆ ಹೋಗಿ ಮೊಟ್ಟೆ ಹಾಕೊ ಹ್ಯಾಂಟೆನು ಹೋತ್, ಬೆನ್ನ್ ಮೆಟ್ಟಿಕೆ ತೇಳಿ ಇದ್ದ ಹೂಂಜನು ಹೊತ್, ಹಿಂಗೆ ಹೇಳಿಕಂಡಿರ್‌ಕನ ನನ್ನ ಅಪ್ಪ ಕಾಳಿಂಗ ಹಕ್ಕಿ, ಚೋರೆಹಕ್ಕಿ, ಹೊಡ್ಕಂಡ್ ಬಾತ್. ಅದರ್ನ ತಂದ್ ಪಾರ್‌ಲಿ ಮಡ್ಗಿ ಕೋವಿ ಕರಿ ಎಳ್ದ್ ಬಾಕನ ಕೊತ್ತಿ ಹಕ್ಕಿನ ತಿಂದ್ ಮಿಯಾಂ ಮಿಯಾಂ ತೇಳಿಕಂಡ್ ಅವ್ವನ ಸೀರೆಗೊಮ್ಮೆ ಅಪ್ಪನ ಸುರಾಲಿಗೊಮ್ಮೆ ವರ್ಸಿಕಂಡ್ ಬಾತ್. ವಿಷಯ ಗೊತ್ತಾಗಿ ಈ ಕೊತ್ತಿಗೆ ಸಾಧಾರಣ ಪಾಠ ಕಲ್ಸಿರೆ ಆದುಲೆ. ಇದ್ಕೆ ವಳ್ಳ ಪಾಠ ಕಲ್ಸಕು ತೇಳಿ ಗ್ಯಾನ ಮಾಡ್ತ್. ಆಗ ನಮ್ಮ ಭಾವನು ಇದ್ದೊ. ಅಪ್ಪನ್ ಭಾವನು ಇಬ್ಬರು ಮಡಿಕೇರಿಗೆ ಹೋಗಿ ಮೀನ್ ತಕಂಡ್ ಸಂತೆ ಸಾಮಾನ್ ಮಾಡಿಕಂಡ್ ಬಂದೊ. ಭಾವನು ಅಪ್ಪನು ತೋಡಿಗೆ ಮೀನ್ ಸೋಸಿಕೆ ಹೋದೊ. ಮೀನ್ ಸೋಸಿಕೆ ಸುರ್‌ಮಾಡ್‌ಕನ ಪಾರ್‌ಕಲ್ಲ್ ಸೆರೆಂದ ಕರಿ ಕಕ್ಕಡೆ ಯಸಂಡ್‌ಗ ಹೋರ್ಟ್ ಕಂಡ್ ಬಂದೊ. ಒಂದೊಂದರ್ನ ಹಿಡ್ದ್ ಗುಡ್ಡೆ ಹಾಕಿದೊ. ಕಡೆಗೆ ಒಂದ್ ಕಕ್ಕಡೆ ಎಸಂಡ್ ಬಾತ್. ಅದರ್ನ ಕೊಂಬು ಮುರಿಯದೆ ಹಂಗೆ ಮನೆಗೆ ತಂದ್ ಒಂದು ಪಾತ್ರೆಲಿ ಹಾಕಿ ಅದ್ಕೆ 4 ಮೀನ್ ಹಾಕಿ ಮಡ್ಗಿದೊ. ಅಷ್ಟೊತ್ತಿಗೆ ಕೊತ್ತಿ ಎಲ್ಲಿ ಇತ್ತ್‌ತೆ ಗೊತ್ಲೆ. ಬಾಲನ ನೆಟ್ಟಂಗೆ ಮಾಡಿಕಂಡ್ ಬೆನ್ನ್ ಮೈ ಮುರ್ಕಂಡ್ ಬಾತ್. ಅವ್ವನ ಸೀರೆಗೊಮ್ಮೆ ವರ್ಸಿ ಪಾರಿಗೆ ಹತ್ತಿತ್. ಮೀನ್ ಪಾತ್ರೆಲಿ ಯಸಂಡ್‌ನ ಕಂಡ್. ಅದಕ್ಕೆ ಪಿಸ್ಸ್‌ತಾ ಹೆದ್‌ರ್ಸಿತ್. ಯಸಂಡ್ ಸ್ವಲ್ಪ ಕರೆಗೆ ಹೋದಂಗೆ ಕೊತ್ತಿ ಮೀನ್‌ಗೆ ಬಾಯಿ ಹಾಕಿತ್. ಯಸಂಡ್ ಕೊತ್ತಿನ ದುಂಡಿಗೆ ಲಾಯ್ಕ ಕಚ್ಚಿತ್. ಯಸಂಡ್ ಕಚ್ಚಿರೆ ಸುಲ್ಬ್‌ಲಿ ಬುಟ್ಟದೆನ. ಅದರ ಕೊಂಬು ಕೊತ್ತಿನ ದುಂಡ್‌ಲ್ಲಿ ಹಿಡ್ಕಂಡ್ ಇತ್ತ್. ಕೊತ್ತಿ ಕೊರ್ಚಿಕಂಡ್ ಉರ್ಚಿಕಂಡ್ ಹೋದ್ ಮತ್ತೆ ಮುಗ್ಚಿಬಾತ್‌ಲೆ. ಅಂದ್‌ಂದ ಕೊತ್ತಿನ ರಗಲೆ ಮುಗ್ತ್. ಬೇಕರೆ ನೀವು ಮಾಡಿ ನೋಡಿ. ಉಸರಾಗಿರಕು. ಯಸಂಡ್ ನಿಮಿಗೆ ಕಚ್ಚಿಬುಡ್ದು. ಎಚ್ಚರ.

— **ತುಂತಜೆ ಚೆಟ್ಟ್ಯಪ್ಪ ಕೃತಿ ಕುಮಾರ್**

---

7ನೇ ಪುಟದಿಂದ

'A sound mind in a sound body'- ಎನ್ನುವ ಹಾಗೆ ದೈಹಿಕವಾಗಿ ಮಕ್ಕಳು ಆರೋಗ್ಯವಾಗಿದ್ದರೆ, ಮಾನಸಿಕವಾಗಿ ಖಂಡಿತವಾಗಿ ಚುರುಕಾಗುತ್ತಾರೆ. ಆದ್ದರಿಂದ ದೈಹಿಕ ವ್ಯಾಯಾಮಕ್ಕೆ, ಅನ್ಯ ಶಿಕ್ಷಣಕ್ಕೆ ಕೊಡುವಷ್ಟೇ ಪ್ರಾಧಿನ್ಯತೆ ಕೊಡಬೇಕು. 'ಆಟಗಳಲ್ಲಿ ಭಾಗವಹಿಸುವುದು ಮುಖ್ಯ - ಬಹುಮಾನಗಳಲ್ಲ' ಎನ್ನುತ್ತಾ ಸದಾ ತನ್ನ ವಿದ್ಯಾರ್ಥಿಗಳನ್ನು ಹುರಿದುಂಬಿಸುವ ಶ್ರೀಮತಿ ಕುಸುಮಾವತಿಯವರಂತಹ ಆದರ್ಶ ಶಿಕ್ಷಕಿಗೆ 'ಈ ವರ್ಷದ ಅತ್ಯುತ್ತಮ ಶಿಕ್ಷಕಿ' ಪ್ರಶಸ್ತಿ ದೊರೆತಿರುವುದಕ್ಕಾಗಿ 'ಕೊಡಗು ಸಂಗಾತಿ' ಜನಾಂಗದ ಪರವಾಗಿ ಕುಲದೇವ್ರು ವೆಂಕಟ ರಮಣನ ಮತ್ತು ತಾಯಿ ಶಾರದಾಂಬೆಯನ್ನು ನೆನೆಸಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

- **ಎಡಿಕೇರಿ ಸುಧರ್ಶನ್, ಬೆಂಗಳೂರು**

---

**ಏನನ್ನು ತಪ್ಪಿಸಿದರೂ ಗ್ರಹಚಾರವನ್ನು ತಪ್ಪಿಸಲಾಗದು.**

# ಗೃಹ ಸಂಗಾತಿ : ವನಿತಾ ಲೋಕ

## ಪೂರಿ, ಹಾಲು ಪೂರಿ

**ಬೇಕಾಗುವ ಸಾಮಾನು :** 100 ಗ್ರಾಂ ಮೈದಾ ಹಿಟ್ಟು, 100 ಗ್ರಾಂ ಸಕ್ಕರೆ, 25 ಗ್ರಾಂ ದ್ರಾಕ್ಷಿ, 25 ಗ್ರಾಂ ಗೋಡಂಬಿ, 4 ಏಲಕ್ಕಿ, ಅರ್ಧ ಲೀಟರ್ ಹಾಲು, ಕರಿಯಲು ಎಣ್ಣೆ ಅಥವಾ ತುಪ್ಪ.

**ವಿಧಾನ :** ಮೈದಾ ಹಿಟ್ಟು ಕಲಸಿ ಪೂರಿ ಲಟ್ಟಿಸಿ ಕರಿಯಿರಿ. ದ್ರಾಕ್ಷಿ, ಗೋಡಂಬಿಯನ್ನು ಕರಿದಿಟ್ಟುಕೊಳ್ಳಿ. ಹಾಲು ಕಾಯಲು ಇಟ್ಟು ಚೆನ್ನಾಗಿ ಕಾದ ಮೇಲೆ ಸಕ್ಕರೆ ಹಾಕಿ. ನಂತರ ದ್ರಾಕ್ಷಿ, ಗೋಡಂಬಿ, ಕರಿದ ಪೂರಿಗಳನ್ನು ಹಾಲಿಗೆ ಹಾಕಿ ಐದು ನಿಮಿಷ ಕುದಿಸಿ. ಏಲಕ್ಕಿ ಪುಡಿ ಹಾಕಿ ಕೆಳಗಿಳಿಸಿ.

## ಮೆಂತೆ ಸೊಪ್ಪಿನ ಪೂರಿ

**ಬೇಕಾಗುವ ಸಾಮಾನು :** 2 ಪಾವು ಜೋಳದ ಹಿಟ್ಟು, 2 ಕಟ್ಟು ಮೆಂತೆ ಸೊಪ್ಪು, 8 ಹಸಿ ಮೆಣಸಿನಕಾಯಿ, ಹಿಂಗು, ಉಪ್ಪು, 1 ಊ. ಚ. ಜೀರಿಗೆ.

**ವಿಧಾನ :** ಮೆಂತೆ ಸೊಪ್ಪನ್ನು ಹಸಿ ಮೆಣಸಿನಕಾಯಿ ಯೊಂದಿಗೆ ರುಬ್ಬಿ, ಇದರ ಜೊತೆ ಜೋಳದ ಹಿಟ್ಟು, ಹಿಂಗು, ಉಪ್ಪು, ಜೀರಿಗೆ ಸೇರಿಸಿ ಕಲಸಿ. ನಿಂಬೆಗಾತ್ರದ ಉಂಡೆ ಮಾಡಿಕೊಂಡು ಪ್ಲಾಸ್ಟಿಕ್ ಹಾಳೆಯ ಮೇಲೆ ತಟ್ಟಿ, ಕಾದ ಎಣ್ಣೆಯಲ್ಲಿ ಕರಿಯಿರಿ.

## ಬಟಾಟೆ ಪೂರಿ

**ಬೇಕಾಗುವ ಸಾಮಾನು :** ¼ ಕಿ. ಗ್ರಾಂ. ಮೈದಾ ಹಿಟ್ಟು, 250 ಗ್ರಾಂ ಆಲೂಗಡ್ಡೆ (ಬಟಾಟೆ), ಒಣ ಹುರಿದ ಸ್ವಲ್ಪ ಜೀರಿಗೆ ಪುಡಿ, 2 ಟೀ. ಚ. (ಅಥವಾ ರುಚಿಗೆ ಬೇಕಾಗುವಷ್ಟು) ಉಪ್ಪು, ಕರಿಯಲು ತುಪ್ಪ ಅಥವಾ ಎಣ್ಣೆ.

**ವಿಧಾನ :** ಆಲೂಗಡ್ಡೆಯನ್ನು ಬೇಯಿಸಿ ಸಿಪ್ಪೆ ಸುಲಿದು ನುಣ್ಣಗೆ ಜಜ್ಜಿ. ಅದಕ್ಕೆ ಜೀರಿಗೆ ಪುಡಿ ಮತ್ತು ಮೈದಾ ಹಿಟ್ಟು (ಗಾಳಿಸಿ) ಹಾಕಿ, ಸ್ವಲ್ಪ ಸ್ವಲ್ಪ ಬಿಸಿ ನೀರು ಸೇರಿಸುತ್ತಾ ಚೆನ್ನಾಗಿ ಹಿಸುಕಿ ನಾದಿ. ಅದರಿಂದ ಸ್ವಲ್ಪ ಸ್ವಲ್ಪ ಕಣಕ ತೆಗೆದು ಪೂರಿಗಳನ್ನು ಲಟ್ಟಿಸಿ. ಎಣ್ಣೆ ಇಲ್ಲವೆ ತುಪ್ಪ ಕಾಯಿಸಿ. ಅದರಲ್ಲಿ ಪೂರಿಗಳನ್ನು ಹಾಕಿ ಮುಳುಗಿಸಿ ಎರಡೂ ಬದಿಗಳನ್ನು ಮಗುಚಿ ಕರಿಯಿರಿ. ಕಂದು ಬಣ್ಣಕ್ಕೆ ಬರುವಾಗ ಬಸಿದು ತೆಗೆಯಿರಿ. ಗೆಣಸಿನ ಪೂರಿಗಳನ್ನು ಕೂಡಾ ಇದೇ ತರ ತಯಾರಿಸಬಹುದು.

## ಉದ್ದಿನ ಬೇಳೆಯ ಪೂರಿ

**ಬೇಕಾಗುವ ಸಾಮಾನು :** 4 ಕಪ್ ಗೋಧಿ ಹಿಟ್ಟು ಅಥವಾ ಮೈದಾ ಹಿಟ್ಟು, 1 ಊ. ಚ. ತುಪ್ಪ, 1½ ಕಪ್ ನೀರು, 1 ಟೀ. ಚ. (ರುಚಿಗೆ ಬೇಕಾಗುವಷ್ಟು) ಉಪ್ಪು, ¾ ಕಪ್ ಉದ್ದಿನ ಬೇಳೆ, ½ ಟೀ. ಚ. ಗರಂ ಮಸಾಲೆ ಪುಡಿ, ½ ಟೀ. ಚ. ಒಣ ಮೆಣಸಿನ ಪುಡಿ, ಕರಿಯಲು ಎಣ್ಣೆ ಅಥವಾ ತುಪ್ಪ.

**ವಿಧಾನ :** ಉದ್ದಿನ ಬೇಳೆಯನ್ನು ಮುಂಚಿನ ರಾತ್ರಿ ನೆನೆ ಹಾಕಿ. ಮರು ದಿವಸ ಬೆಳಿಗ್ಗೆ ಅದನ್ನು ಬಸಿದು ಅರೆಯಿರಿ. ಅದಕ್ಕೆ ಗರಂ ಮಸಾಲೆ, ಒಣ ಮೆಣಸಿನಪುಡಿ ಮತ್ತು ಒಂದು ಚಿವುಟು ಉಪ್ಪು ಸೇರಿಸಿ ಬೆರೆಸಿ. ಹಿಟ್ಟನ್ನು ಗಾಳಿಸಿ. 1 ಊ. ಚ. ತುಪ್ಪಕ್ಕೆ 1½ ಟೀ. ಚ. ಉಪ್ಪು ಸೇರಿಸಿ ಅದನ್ನು ಹಿಟ್ಟಿಗೆ ಹಾಕಿ ಸ್ವಲ್ಪ ಸ್ವಲ್ಪ ನೀರು ಸೇರಿಸುತ್ತಾ ನಾದಿ ಗಟ್ಟಿಯಾದ ಕಣಕ ಮಾಡಿ. ಈ ಕಣಕದಿಂದ ಸಣ್ಣ ಸಣ್ಣ ಉಂಡೆ ತಯಾರಿಸಿ 4 ಅಂಗುಲದಷ್ಟು ಅಗಲ ಪೂರಿಗಳಾಗಿ ಲಟ್ಟಿಸಿ. ಒಂದೊಂದು ಪೂರಿಯ ನಡುವಿನಲ್ಲಿ ಬೇಳೆಯ ಸ್ವಲ್ಪ ಮಿಶ್ರಣವನ್ನು ಇಟ್ಟು ಪಸರಿಸಿ. ಅದರ ಮೇಲೆ ಇನ್ನೊಂದು ಪೂರಿ ಇಟ್ಟು ಬದಿಗಳನ್ನು ಒತ್ತಿ ಅಂಟಿಸಿ ಮೆಲ್ಲಗೆ ಲಟ್ಟಿಸಿ. ಅದನ್ನು ಎಣ್ಣೆ ಅಥವಾ ತುಪ್ಪದಲ್ಲಿ (ಮುಳುಗಿಸಿ) ಕರಿದು ಕಂದು ಬಣ್ಣಕ್ಕೆ ಬರುವಾಗ ಬಸಿದು ತೆಗೆಯಿರಿ.

---

# ಗುಡ್ಡಗಾಡು ಓಟದಲ್ಲಿ ಅರಳುತ್ತಿರುವ ಪ್ರತಿಭೆ



ಭಾಗಮಂಡಲ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿ ಪಾಂಡಿ ಮನೆ ಅರುಣ್‌ಕುಮಾರ್‌ನವರು ಇತ್ತೀಚೆಗೆ ಭಾಗಮಂಡಲದಲ್ಲಿ ನಡೆದ ಗುಡ್ಡಗಾಡು ಓಟದಲ್ಲಿ 5ನೇ ಸ್ಥಾನವನ್ನು, ತಾಲ್ಲೋಕು ಮಟ್ಟದ ಗುಡ್ಡಗಾಡು ಓಟದಲ್ಲಿ ದ್ವಿತೀಯ ಸ್ಥಾನವನ್ನು, 5000 ಮೀಟರ್ ಜಿಲ್ಲಾಮಟ್ಟದ ಓಟದಲ್ಲಿ ದ್ವಿತೀಯರಾಗಿ ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ. ಇವರು ಭಾಗಮಂಡಲದ ತಣ್ಣಿಮಾನಿ ಗ್ರಾಮದ ಪಾಂಡಿಮನೆ ಬಾಲಕೃಷ್ಣ ಮತ್ತು ಮಾಚಮ್ಮ ದಂಪತಿಗಳ ಪುತ್ರರಾಗಿದ್ದಾರೆ.

**ವರದಿ ಸೂರ್ತಲೆ ಜಯಂತ್**

---

## ಗುಡ್ಡಗಾಡು ತಂಡಕ್ಕೆ ಆಯ್ಕೆ

ಮುಂಬೈ ವಿ. ವಿ. ಆಶ್ರಯದಲ್ಲಿ ಜರುಗಲಿರುವ ಅಖಿಲ ಭಾರತ ವಿ. ವಿ.ಗಳ ಗುಡ್ಡಗಾಡು ಓಟದ ಸ್ಪರ್ಧೆಗೆ ಪಾಲ್ಗೊಳ್ಳುವ ಬೆಂಗಳೂರು ವಿ. ವಿ. ತಂಡಕ್ಕೆ ಮಡಿಕೇರಿ ಫಿ. ಮಾ. ಕಾರ್ಯಪ್ಪ ಕಾಲೇಜಿನ ವಿದ್ಯಾರ್ಥಿ ಕರ್ಣಯ್ಯನ ಎ. ಈಶ್ವರ ಅವರು ದ್ವಿತೀಯ ಬಾರಿಗೆ ಆಯ್ಕೆಯಾಗಿದ್ದಾರೆ.

**- ಸಂಗಾತಿ**

---

ಮಾತಿಗೆ ತಕ್ಕ ನಡೆಯಿರಬೇಕು, ನಡತೆಗೆ ತಕ್ಕ ಮಾತು ಇರಬೇಕು

# ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆ ಸಂಘಟಿತ ಶಕ್ತಿಯೇ ಸಮುದಾಯದ ಏಳಿಗೆಯ ಮೂಲ

**ಸ್ವರ್ಣ ಜಯಂತಿ ಶಹರಿ ಯೋಜನೆ ಎಂದರೇನು ?**

ಪಟ್ಟಣದಲ್ಲಿ ಬಡತನ ರೇಖೆಗಿಂತ ಕೆಳಗಡೆ ವಾಸಿಸುತ್ತಿರುವ (ಕಡುಬಡವರು) ಕುಟುಂಬಗಳಿಗೆ ಸಾಂಘಿಕ ವ್ಯವಸ್ಥೆ ಮೂಲಕ ಆರ್ಥಿಕ ಬಲ ನೀಡಿ ಆ ಮೂಲಕ ಸಮುದಾಯದ ಅಭಿವೃದ್ಧಿ ಸಾಧಿಸುವ ಯೋಜನೆ ಇದು. ಈ ಯೋಜನೆ 1-12-1997 ರಿಂದ ರಾಷ್ಟ್ರಾದ್ಯಂತ ಜಾರಿಯಲ್ಲಿದೆ.

**ಈ ಯೋಜನೆಯ ಫಲಾನುಭವ ಪಡೆಯಲು ಯಾರು ಅರ್ಹರು ?**

ಪಟ್ಟಣದಲ್ಲಿ ವಾರ್ಷಿಕ ವರಮಾನ 23,124 ರೂ.ಗಳಿಗಿಂತ ಕಡಿಮೆ ಇರುವ ಎಲ್ಲ ಕುಟುಂಬಗಳೂ ಈ ಯೋಜನೆಯ ಸವಲತ್ತು ಪಡೆಯಲು ಅರ್ಹವಾಗಿದೆ.

**ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯಲ್ಲಿ ಯಾವ ಉಪಯುಕ್ತ ಯೋಜನೆಗಳಿವೆ ?**

ನಗರ, ಪಟ್ಟಣ, ಪುರಗಳಲ್ಲಿ ಬಡತನ ರೇಖೆಗಿಂತ ಕೆಳಗೆ ಬದುಕುತ್ತಿರುವ ಕುಟುಂಬಗಳ ನೆರವಿಗಾಗಿ ಈ ಯೋಜನೆ ಮೂಲಕ ಆರು ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ. ಅವು ಈ ಕೆಳಗಿನಂತಿವೆ.

ಅ. **ಸಣ್ಣ ಉದ್ದಿಮೆ ಯೋಜನೆ:** ಈ ಯೋಜನೆಯಡಿ ನಗರಗಳಲ್ಲಿ ಹೆಚ್ಚು ಬೇಡಿಕೆ ಇರುವ ಉದ್ದಿಮೆ ಹಾಗೂ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ನಗರವಾಸಿ ನಿರುದ್ಯೋಗಿಗಳಿಗೆ ನೆರವು ನೀಡಲಾಗುವುದು. ಪ್ರತಿ ಉದ್ಯಮದ ಗರಿಷ್ಠ ಘಟಕದ ವೆಚ್ಚ 50,000 ರೂ. ಇದರಲ್ಲಿ ಗರಿಷ್ಠ 7,500 ರೂ. (ಶೇ. 15) ಸಹಾಯ ಧನ ನೀಡಲಾಗುವುದು. ಫಲಾನುಭವಿ ಶೇ. 5ರಷ್ಟು ಮಾರ್ಜಿನ್ ಹಣ ನೀಡಬೇಕು. ಉಳಿದ ಶೇ. 80ರಷ್ಟು ಯೋಜನಾ ಮೊತ್ತವನ್ನು ಸಾಲದ ರೂಪದಲ್ಲಿ ನೀಡಲಾಗುವುದು.

ಆ. **ಬಡ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ :** ಈ ಯೋಜನೆಯಡಿ ನಗರವಾಸಿ ಬಡ ಮಹಿಳೆಯರ ಸಮಾನ ಕೌಶಲ್ಯ, ತರಬೇತಿ ಹಾಗೂ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ 7 ರಿಂದ 10 ಸದಸ್ಯರ ಒಂದು ಗುಂಪನ್ನು ರಚಿಸಲಾಗುವುದು. ಈ ಗುಂಪುಗಳು ಉದ್ಯಮಗಳನ್ನು ಸ್ಥಾಪಿಸಲು ಯೋಜನಾ ಮೊತ್ತದ ಶೇ. 50ರಷ್ಟು ಅಥವಾ ಗರಿಷ್ಠ 1,25,000 ರೂ.ಗಳನ್ನು ಸಹಾಯಧನ ಪಡೆಯಬಹುದು. ಗುಂಪುಗಳು ಸ್ವಂತವಾಗಿ ಶೇ. 5ರಷ್ಟು ಮಾರ್ಜಿನ್ ಹಣವನ್ನು ಬ್ಯಾಂಕುಗಳ ಮೂಲಕ ಸಾಲವಾಗಿ ಪಡೆಯಬಹುದು.

ಇ. **ನಗರ ವೇತನಾಧಾರಿತ ಮಜೂರಿ ಉದ್ಯೋಗ ಯೋಜನೆ :** ನಗರ ಪ್ರದೇಶದಲ್ಲಿ ಉಪಯುಕ್ತ ಸಾರ್ವಜನಿಕ ಆಸ್ತಿಗಳನ್ನು ನಿರ್ಮಿಸುವಾಗ, ನಗರವಾಸಿ ನಿರುದ್ಯೋಗಿಗಳಿಗೆ ವೇತನಾಧಾರಿತ ಉದ್ಯೋಗಗಳನ್ನು ನೀಡಿ ಪ್ರಚಲಿತ ಕನಿಷ್ಠ ವೇತನಗಳನ್ನು ಆಧರಿಸಿ ವೇತನ ನೀಡಲಾಗುವುದು.

ಈ. **ನಿರಂತರ ಉಳಿತಾಯ ಯೋಜನೆ :** ನಗರ ಪ್ರದೇಶದಲ್ಲಿ ನಿರಂತರ ಉಳಿತಾಯ ಯೋಜನೆಯ ಗುಂಪುಗಳನ್ನು ರಚಿಸಿ ಉಳಿತಾಯ, ಸಾಲ ನೀಡಿಕೆ ಮುಂತಾದ ಆರ್ಥಿಕ ಚಟುವಟಿಕೆಗಳಿಗೆ ಪೂರಕ ವಾತಾವರಣ ನಿರ್ಮಿಸುವ ಯೋಜನೆ ಇದಾಗಿದೆ. ಕಡುಬಡವರೆಂದು ಗುರುತಿಸಲ್ಪಟ್ಟ ಕುಟುಂಬದ ಸಮಾನ ಮನಸ್ಕರಾದ 10 ರಿಂದ 20 ಮಹಿಳಾ ಸದಸ್ಯರು ಒಂದುಗೂಡಿ ಉಳಿತಾಯ ಗುಂಪನ್ನು ಪ್ರಾರಂಭಿಸಬಹುದು. ಒಂದು ವರ್ಷದ ಕಾಲಾವಧಿ ನಂತರ ಈ ಗುಂಪಿನ ಪ್ರತಿ ಸದಸ್ಯರಿಗೆ ಒಂದು ಸಾವಿರ ರೂ. ನಂತೆ 25,000 ರೂ. ರಿವಾಲ್ವಿಂಗ್ ಫಂಡ್ ಹಣವನ್ನು ನೀಡಲಾಗುವುದು. ನಿರಂತರ ಉಳಿತಾಯ ಗುಂಪುಗಳು ಸಾಲ ನೀಡುವ ಸಂಸ್ಥೆಗಳಿಂದ, ಇತರ ಲಭ್ಯ ಮೂಲಗಳಿಂದ ಸಾಲಗಳ ನಿಯಮ ನಿಬಂಧನೆಗಳ ಮೂಲಕ ತೆಗೆದುಕೊಳ್ಳಬಹುದು.

ಉ. **ತರಬೇತಿ ಹಾಗೂ ಮೂಲ ಸೌಕರ್ಯ ಯೋಜನೆ :** ಫಲಾನುಭವಿಗಳ ಪರಿಣತಿಯನ್ನು ಹೆಚ್ಚಿಸಲು ವಿವಿಧ ಸೇವಾಧಾರಿತ ಹಾಗೂ ಕೈಗಾರಿಕಾ ಉದ್ಯಮಗಳಲ್ಲಿ ಸ್ಥಳೀಯ ಕಸುಬು, ವೃತ್ತಿಗಳಲ್ಲಿ ಸೂಕ್ತ ತರಬೇತಿ ನೀಡುವ ಯೋಜನೆಯಿದು. ತರಬೇತಿ ಪಡೆಯುವ ಪ್ರತಿಯೊಬ್ಬ ಫಲಾನುಭವಿಯು, ತರಬೇತಿಗಾಗಿ ರೂ. 2000/-ಗಳನ್ನು ವ್ಯಯ ಮಾಡಲು ಅನುಮತಿ ಇರುತ್ತದೆ. ಫಲಾನುಭವಿಯ ಉತ್ಪಾದಿತ ಸರಕುಗಳ ಮಾರಾಟ ಇತ್ಯಾದಿ ಹಾಗೂ ಇತರ ಸೇವೆಗಳಿಗಾಗಿ ಸೇವಾ ಕೇಂದ್ರಗಳನ್ನು ನಿರ್ಮಿಸಲಾಗುವುದು.

ಊ. **ಸಾಮಾಜಿಕ ಸೇವೆಗಳ ಯೋಜನೆ :** ವಿವಿಧ ಸರ್ಕಾರಿ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಕೈಗೊಳ್ಳುವ ತಾಯಿ ಮಗುವಿನ ಆರೋಗ್ಯ ಶಿಬಿರ, ಪೌಷ್ಠಿಕ ಆಹಾರ ನೀಡಿಕೆ, ವಯಸ್ಕರ ಶಿಕ್ಷಣ, ಉದ್ಯೋಗಾಧಾರಿತ ತರಬೇತಿ ಇತ್ಯಾದಿ ಸಾಮಾಜಿಕ ಸೇವೆಗಳನ್ನು ಫಲಾನುಭವಿಗಳಿಗೆ ಒದಗಿಸಲಾಗುವುದು.

**ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯನ್ನು ಯಾರು ಜಾರಿಗೊಳಿಸುತ್ತಾರೆ ?**

ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಯೋಜನೆಯು ಪೌರಾಡಳಿತ ನಿರ್ದೇಶನಾಲಯಕ್ಕೆ ಒಳಪಟ್ಟಿದೆ. ರಾಜ್ಯದ 215 ನಗರಸಭೆ, ಪುರಸಭೆ,ಪಟ್ಟಣ ಪಂಚಾಯಿತಿಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ.

---

**ಕೋಪ ಇರಬಾರದು, ಮಾತಿಗೆ ತಪ್ಪಬಾರದು**

---

**ಈ ಯೋಜನೆಯಲ್ಲಿ ಸಹಾಯ ಪಡೆಯಲು ಯಾರನ್ನು ಸಂಪರ್ಕಿಸಬೇಕು ?**

ಪ್ರತಿಯೊಂದು ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಸರ್ಕಾರ ನೇಮಿಸಿರುವ 'ಯೋಜನಾಧಿಕಾರಿ ಯನ್ನಾಗಲೀ 'ಸಮುದಾಯ ಸಂಘಟಕ'ರನ್ನಾಗಲೀ ಸಂಪರ್ಕಿಸಬಹುದು.

ಕೊಡಗು ಜಿಲ್ಲೆಯಲ್ಲಿ ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನಾಧಿಕಾರಿಗಳಾಗಿ ಕೊಡಗಿನ 3 ತಾಲೂಕುಗಳಿಗೆ ಮೂರು ಜನ ಯೋಜನಾಧಿಕಾರಿಗಳನ್ನು 3 ಜನ ಸಮುದಾಯ ಸಂಘಟಕರನ್ನೂ ಸರ್ಕಾರ ನೇಮಿಸಿದೆ. ಮಡಿಕೇರಿ ತಾಲೂಕಿನ ಯೋಜನಾಧಿಕಾರಿಯಾಗಿ ಶ್ರೀ ಬೈತಡ್ಕ ಬಿ. ನಂಜಪ್ಪನವರು ಮತ್ತು ಸಮುದಾಯ ಸಂಘಟಕರಾಗಿ ಅಮೆ.ಜಿ.ರೇಖಾನವರು ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೆಯೇ ವೀರಾಜಪೇಟೆ ತಾಲೂಕಿನ ಯೋಜನಾಧಿಕಾರಿಣಿಯಾಗಿ ಮೂಟೇರ ಚಂಗಪ್ಪ ಶೈಲಾನವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂತೆಯೇ ಸೋಮವಾರ ಪೇಟೆ ತಾಲೂಕಿನ ಯೋಜನಾಧಿಕಾರಿಣಿಯಾಗಿ ಕೋರನ ಜಿ.ರೂಪನವರು ಅಧಿಕಾರಿಣಿಯಾಗಿದ್ದಾರೆ. ಸರ್ಕಾರ ಇವರುಗಳನ್ನು ನೇಮಕ ಮಾಡಿರುವುದಲ್ಲದೆ ಹೆಚ್ಚಿನ ಮಾಹಿತಿಯನ್ನು ಇವರಿಂದ ಪಡೆಯಬಹುದಾಗಿದೆ.

"ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯ ಸೌಲಭ್ಯ ಪಡೆದು ಕುಟುಂಬದ ಆದಾಯ ಹೆಚ್ಚಿಸಿರಿ"

- ವರದಿ : ಸಂಗಾತಿ

---

## ಮೈಸೂರಿನಲ್ಲಿ ಕೈಲು ಮುಹೂರ್ತ ಸಾಂಸ್ಕೃತಿಕ ಕಾರ್ಯಕ್ರಮ

ದಿನಾಂಕ 1-10-2000 ಐಂದು ಮೈಸೂರಿನಲ್ಲಿರುವ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ಕೈಲು ಮುಹೂರ್ತ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಕಾವೇರಿನಾಡಿನ ಸಂಸ್ಥಾಪಕ ಶ್ರೀ ಅಮ್ಮಾಜೀರ ಪೊನ್ನಪ್ಪನವರು ಆಗಮಿಸಿದ್ದರು. ಇನ್ನೊಬ್ಬ ಅತಿಥಿ ಮೈಸೂರಿನಲ್ಲಿ ವಾಸವಾಗಿರುವ ನಿವೃತ್ತ ಡಿ.ವೈ.ಎಸ್.ಪಿ. ಕೂಡಕಂಡಿ ಸೋಮಣ್ಣನವರು ಭಾಗವಹಿಸಿದ್ದರು. ಮಗದೊಬ್ಬ ಅತಿಥಿಯಾಗಿ ಶ್ರೀ ಹುದೇರಿ ರಾಜೇಂದ್ರನವರು ಆಗಮಿಸಿದ್ದರು. ಬೆಳಿಗ್ಗೆ ಕ್ರೀಡಾ ಚಟುವಟಿಕೆಗಳು ನಡೆದವು. ಮಧ್ಯಾಹ್ನಕ್ಕೆ ಕೊಡಗಿನ ವಿಶೇಷವಾದ ಊಟದ ವ್ಯವಸ್ಥೆ ಇತ್ತು.

ಊಟದ ನಂತರಸಭೆ ಪ್ರಾರಂಭವಾಯಿತು. ಸಭೆಯ ಅಧ್ಯಕ್ಷತೆಯನ್ನುಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ಬಾಳೆಡಿರ ಉತ್ತಯ್ಯನವರು ವಹಿಸಿದ್ದರು. ಹಾಗೂ ವೇದಿಕೆಯಲ್ಲಿ ಮುಖ್ಯ ಅತಿಥಿಗಳು ಆಸೀನರಾಗಿದ್ದರು. ಈ ವರ್ಷದ ಕಾರ್ಯಕ್ರಮವು ಸಾಂಗವಾಗಿ ನೆರವೇರಿತು. ಮಹಿಳಾ ಸಂಘಟನೆಯ ಅಧ್ಯಕ್ಷೆ ದಂಬೆಕೋಡಿ ಭಾಗೀರಥಿಯವರು ಅರೆಭಾಷಿಕ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರು ಮತ್ತು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಆದ ತಡಿಯಪ್ಪನ ಕುಮಾರ ಜಯನವರು ಹಾಗೂಕೊಡಗು ಸಂಗಾತಿಯ ಸಂಪಾದಕಿ ಗೌರವ ಸಂಪಾದಕ ಶ್ರೀಮತಿ ಮತ್ತು ಶ್ರೀ ಪಟ್ಟಡ ಪ್ರಭಾಕರನವರ ಸಹಯೋಗದಿಂದ ನಡೆಯಿತು. ಅಲ್ಪ ಸಮಯದಲ್ಲೆ ನಡೆದ ಈ ಕಾರ್ಯಕ್ರಮವು ತುಂಬಾ ಚೆನ್ನಾಗಿ ನಡೆಯಿತು.

ಕಾವೇರಿ ನಾಡಿನ ಅಮ್ಮಾಜೀರ ಧೃತಿಪೊನ್ನಪ್ಪನವರಿಂದ ನೃತ್ಯ ಕಾರ್ಯಕ್ರಮವಿತ್ತು. ಕ್ರೀಡೆಯಲ್ಲಿ ಜಯಶೀಲರಾದವರಿಗೆ ಬಹುಮಾನವನ್ನು ಅತಿಥಿಗಳು ನೀಡಿದರೆ ಕೂಡಕಂಡಿ ಭರತ್ ಮತ್ತು ದಂಬೆಕೋಡಿ ಭರತ್‌ರವರ ಶ್ರಮವನ್ನು ಶ್ಲಾಘಿಸಲಾಯಿತು ಹಾಗೆಯೇ ಗೌಡ ವಿದ್ಯಾರ್ಥಿನಿಲಯದ ವ್ಯವಸ್ಥಾಪಕರ ಕಾರ್ಯ ಸಾಧನೆಯು ಪ್ರಶಂಸೆಗೆ ಪಾತ್ರವಾಯಿತು. ಮತ್ತು ನಿಲಯದ ವಿದ್ಯಾರ್ಥಿಗಳ ಸಹಕಾರ ಅನುಕರಣೀಯ. ನೆರೆದ ಬಾಂಧವರನ್ನು ಬಾಳಾಡಿ ಉತ್ತಯ್ಯನವರು ಸ್ವಾಗತಿಸಿದರೆ ದಂಬೆಕೋಡಿ ಭರತ್ ವಂದಿಸಿದರು ನೈಯ್ಯಣಿರ ರಂಜು ಕಾರ್ಯಕ್ರಮವನ್ನು ನಿರೂಪಿಸಿದ್ದರು.

ದೇವಜನ ಕೇಶವ, ಮೈಸೂರು

---

## ಮೈಸೂರಿನಲ್ಲಿ ಕಾವೇರಿ ತೀರ್ಥ ಪ್ರಸಾದ ವಿತರಣೆ : ಮಾಜಿ ಸೈನಿಕರ ಪ್ರಾಯೋಗಿಕ ಪ್ರಯತ್ನ ಜಯಪ್ರದ

ಮೈಸೂರಿನ ಜಯಲಕ್ಷ್ಮಿ ಪುರಂನಲ್ಲಿರುವ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ಶ್ರೀ ಕಾವೇರಿ ತೀರ್ಥ ಮತ್ತು ಪ್ರಸಾದವನ್ನು ದಿನಾಂಕ18-10-2000ರಲ್ಲಿ ವಿತರಿಸಲಾಯಿತು. ಈ ಕಾರ್ಯ ಕ್ರಮವು ವಿಘ್ನ ನಿವಾರಕ ವಿಘ್ನೇಶ್ವರನನ್ನು ನೆನೆಯುವುದರೊಂದಿಗೆ ಪ್ರಾರಂಭವಾಗಿ ಪ್ರಸಾದ ಮತ್ತು ತೀರ್ಥವನ್ನು ಬೆಳಿಗ್ಗೆ 8-00 ಗಂಟೆಯಿಂದ ಸಂಜೆ 5-30ರ ತನಕ ವಿತರಿಸಲಾಯಿತು.

ದಿನಾಂಕ 17ರ ಮಧ್ಯಾಹ್ನ 12-31ಕ್ಕೆ ಕಾವೇರಿ ಕುಂಡಿಕೆಯಲ್ಲಿ ತುಲಾ ಲಗ್ನದಲ್ಲಿ ತೀರ್ಥೋದ್ಭವವಾಯಿತು. ಕಾವೇರಿಯಲ್ಲಿ ಜನ ಸಂದಣಿ ಕಿಕ್ಕಿರಿದು ತುಂಬಿತ್ತು. ತಲ ಕಾವೇರಿಯಿಂದ ತೀರ್ಥವನ್ನು ಶ್ರೀ ಪಟ್ಟಡ ಪ್ರಭಾಕರನವರು ವಿಧಿವತ್ತಾಗಿ ಪೂಜಾಕ್ರಮದೊಂದಿಗೆ ತಂದಿದ್ದರು. ಜನಾಂಗದ ಹಿರಿಕಿರಿಯರು, ಸಾರ್ವಜನಿಕರು, ಸರ್ಕಾರಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದು ಸುಮಾರು 500 ಮಿಕ್ಕಿ ಭಕ್ತಾದಿಗಳು ತೀರ್ಥ ಪ್ರಸಾದ ಸ್ವೀಕರಿಸಿ ಕಾವೇರಿ ದೈವ ಕೃಪೆಗೆ ಪಾತ್ರರಾಗಿದ್ದಾರೆ.

ಇದೇ ಪ್ರಥಮ ಬಾರಿಗೆ ಮಾಜಿ ಸೈನಿಕರು ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದ್ದು ಇನ್ನೂ ಮುಂದಕ್ಕೆ ಪ್ರತಿ ವರ್ಷವೂ ವಿತರಿಸಲಾಗುವುದೆಂದು ಮಾಜಿ ಸೈನಿಕರ ಅಧ್ಯಕ್ಷ ಶ್ರೀ ತಡಿಯಪ್ಪನ ಕುಮಾರ ಜಯನವರು ತಿಳಿಸಿದ್ದಾರೆ.

ವರದಿ : ಸಂಗಾತಿ

---

**ಮಾತು ಚಿನ್ನದ ತೂಕದ ಹಾಗಿರಬೇಕು**

# ಪತ್ರ ವಿಭಾಗ :



ಪ್ರೀತಿಯ ಸಂಗಾತಿಗೆ,

ಕೊಡಗು ಸಂಗಾತಿ ಅಕ್ಟೋಬರ್ 16 ರಿಂದ 31, 2000 ನನ್ನನ್ನು ಬರಿಯಲು ಪ್ರೇರೇಪಿಸಿತು.

ನಿಮ್ಮ ಸಂಪಾದಕೀಯ ಆಧುನಿಕ ಕೃಷಿ ತಂತ್ರಜ್ಞಾನದಲ್ಲಿ, ಸ್ವಾರ್ಥತೆಗಾಗಿ ಶುಂಠಿ ಬೆಳೆ ಹಾಗೂ ಗದ್ದೆ ಮೀನು ಮತ್ತು ಗದ್ದೆಯ ಏಡಿ ಇವುಗಳ ರುಚಿ ನೋಡದೆ ನನಗೆ ಹಲವು ವರ್ಷಗಳಾದವು. ಇನ್ನು ಯಾವುದನ್ನೆಲ್ಲ ನಾವು ಕಳೆದುಕೊಳ್ಳ ಬೇಕೋ ತಿಳಿಯದು. ಇಂತಹುಗಳನ್ನು ನೆನೆಪಿಸಿ ಕೊಡುವುದು ನಿಜವಾಗಿಯೂ ಸ್ವಾಗತಾರ್ಹ. ಇಂತಹ ವಿಚಾರಗಳನ್ನು ಆದಷ್ಟು ಹೆಚ್ಚಾಗಿ ಪ್ರಕಟಿಸಿ.

ಕರ್ನಲ್ ಮೊಟ್ಟೇರ ನಂಜಪ್ಪ ಪುರುಷೋತ್ತಮ ಇಂತಾ ದೇಶ ಸೇವೆ ಮಾಡುವವರನ್ನು ನಾನು ಇವರೊಬ್ಬ ಒಂದು ಜನಾಂಗದವರೆಂದು ಭಾವಿಸುವುದಿಲ್ಲ. ಜನಾಂಗವನ್ನು ನಾವು ಮಾಡಿಕೊಂಡೆವು. ಆದರೆ ಕಾವೇರಿ ಮಣ್ಣಿನಲ್ಲಿ ಭಗವಂತನು ಅವರನ್ನು ಜನಿಸುವಂತೆ ಮಾಡಿದೆ ಈ ಮಣ್ಣಿನ ಸೌಭಾಗ್ಯ. ಅವರು ಕೊಡಗಿನ ನಿಧಿ.

ಅವರು ಯುವಕರಿಗೆ ನೀಡಿದ ಸಂದೇಶ ಸ್ತುತಿ ಅರ್ಹವಾದದ್ದು. Be true to yourself and do the best. ಇದು ನಮ್ಮ ಯುವ ಹೃದಗಳು ಪಾಲಿಸಿದರೆ ಒಳ್ಳೇದು. ನಾವು ಜನಾಂಗ ಜನಾಂಗ ಎಂದು ದೂರ ಸರಿಯುವ ಕೆಟ್ಟ ಚಾಳಿಯನ್ನು ಕತ್ತರಿಸಿ ಬಿಸಾಕಬೇಕು. ಹೊಟ್ಟೆಯಲ್ಲಿ ಮಗುವಾದರೆ ರಕ್ಷಿಸುತ್ತೇವೆ. ಅದೇ ಹೊಟ್ಟೆಯಲ್ಲಿ ಗೆಡ್ಡೆ ಬೆಳೆದರೆ ದಯ ದಾಕ್ಷಿಣ್ಯವಿಲ್ಲದೆ ಕತ್ತರಿಸಿ ಬಿಸಾಕುತ್ತೇವೆ. ಹಾಗೆಯೇ ಜನಾಂಗ ಜನಾಂಗ ಎಂಬ ಬೇಡದ ವಿಷಪೂರಿತ ಗಡ್ಡೆಯನ್ನು ನಾವು ಎಸೆಯಬೇಕು. ನನ್ನ ಜೀವಮಾನದಲ್ಲಿ ನಮ್ಮ ಎರಡು ಜನಾಂಗ ಒಂದಾಗುವುದನ್ನು ನೋಡುವ ಸುಸಂದರ್ಭ ಬರುವುದೋ ಏನೋ? ಆದರೂ ಆ ದಿವಸ ಬಂದೇ ಬರುವುದೆಂಬ ಆಸೆ ನನಗಿದೆ.

ಕರ್ನಲ್ ಪುರುಷೋತ್ತಮರವರ ವಿಷಯದಲ್ಲಿ ನಾನು ಸ್ಮರಿಸುತ್ತಿರುವುದು ಅವರ ತಾಯಿಯನ್ನು. ಹೆತ್ತ ಮಕ್ಕಳ ಉನ್ನತಿ ಅವನತಿಗೆ ಮುಖ್ಯ ಕಾರಣ ತಾಯಿ (ಅವ್ವ). ತಂದೆ ಪ್ರೇರಕ. ತಾನು ಹಡೆದ ಮಕ್ಕಳನ್ನು ಎತ್ತಿ ಮುದ್ದಾಡಿ, ಕಲಿಸಿ, ತಿದ್ದಿ, ಸಮಾಜಕ್ಕಾಗಿ, ದೇಶಕ್ಕಾಗಿ ತಯಾರು ಮಾಡುವ ಹೊಣೆಗಾರಿಕೆ ತಾಯಿಯದು. ತಮ್ಮ ಸ್ವಾರ್ಥಕ್ಕಾಗಿ ಮಕ್ಕಳನ್ನು ಸಾಕುವುದು ಪಾಪಕರ. ತನ್ನ ಮಕ್ಕಳನ್ನು ದೇಶಕ್ಕೆ ಅರ್ಪಿಸಿದ ತಾಯಿ, ಮಹಾ ತಾಯಿ, ಅವರಿಗೆ ನಾನು ತಲೆ ಬಾಗಿಸಬೇಕು. ಸ್ಮರಿಸಬೇಕು.

ಇವರ ತಾಯಿ ಆ ಮಹಾಮಾಯಿ ಅಕ್ಕಯ್ಯನವರಿಗೆ ನನ್ನ ಅನಂತ ಪ್ರಣಾಮಗಳು. ಇಂಥಾ ತಾಯಂದಿರ ಸಂಖ್ಯೆ ಹೆಚ್ಚಾಗಿ ಬೆಳೆಯಲಿ. ನಿಮ್ಮ ಪತ್ರಿಕೆ ಮೂಲಕ ನಾನು ನನ್ನ ಅಕ್ಕಯ್ಯನಿಗೆ ವಂದನೆಗಳನ್ನು ಅರ್ಪಿಸುತ್ತೇನೆ.

ಕವಿಗೋಷ್ಠಿಯಲ್ಲಿ ನಾನು ಓದಿ ಮೆಚ್ಚುಗೆ ಪಡೆದ ಕೊಡವ ಭಾಷಾ ಕವನ 'ಕೋಟೆಲ್ ಓಬವ್ವ' ಕವನದ ಕಡೇಭಾಗವನ್ನು ಇಲ್ಲಿ ಬರೆಯಲು ಸಂತೋಷಿಸುತ್ತೇನೆ. ಇದು ತಾರೀಕು 14-11-1996ರಲ್ಲಿ ಬರೆದದ್ದು.

"ಇಂದಿಲ್ಲೆ ಓಬವ್ವ, ಉಂಡ್‌ಮಕ್ಕಡ ಅವ್ವ
ನಂದಾಯಿತ್ ಚಾಕಿ ಮಕ್ಕಳ, ದೇಶಕ್ಕಾಯಿತ್ ನೂಕಿ
ದೇಶಕ್ಕಿಲ್ಲತ ಮಕ್ಕ ಇಂಜಿತ್ತೆನ್ಸ್ ಪಕ್ಕ
ಓಬವ್ವಂಡ ಕೇಳಿಲ್ ನಂದಾಯಿತ್ ಬಾಳಿ."

ಯಾವದಾದರೊಂದು ಉನ್ನತಿಯ ಕೆಲಸ ಮಾಡಿದ ನಮ್ಮ ಜಿಲ್ಲೆಯ ಮಕ್ಕಳ ಹೆಸರು ಭಾವಚಿತ್ರ, ವರ್ಣನೆ ಕಂಡರೆ ಮೊಟ್ಟ ಮೊದಲು ನನಗೆ ನೆನಪಾಗುವುದು ಅವರನ್ನು ಹಡೆದ ತಾಯಿಯರನ್ನು.

ಕರ್ನಲ್ ಮೊಟ್ಟೇರ ನಂಜಪ್ಪ ಪುರುಷೋತ್ತಮರನ್ನು ತಯಾರು ಮಾಡಿದ ತಾಯಿಯಂತೆ ನಮ್ಮ ಜನಾಂಗದ ಇಂದಿನ ಪೀಳಿಗೆ, ಮುಂದಿನ ಪೀಳಿಗೆಯಲ್ಲಿ ತಾಯಂದಿರು ಕಡಿಮೆ ನಾಲ್ಕು ಮಕ್ಕಳನ್ನಾದರೂ (ನಮಗೆ ಸಂತಾನ ನಿಯಂತ್ರಣ ಅತೀ ಹೆಚ್ಚಾಯಿತು) ಹಡೆದು ಬುದ್ಧಿ, ಜ್ಞಾನವಂತರನ್ನಾಗಿ ಮಾಡಿ ಜನಾಂಗಕ್ಕೂ ದೇಶಕ್ಕೂ ನೆರವಾಗುವ ಮಕ್ಕಳನ್ನು ಪಡೆಯಲಿ.

ಪುರುಷೋತ್ತಮರ ಮಾತೆಗೆ ಮತ್ತೊಮ್ಮೆ ನನ್ನ ಅನಂತ ಭಾವನಾತ್ಮಕ ವಂದನೆಗಳು, ಅಭಿನಂದನೆಗಳು.

ಶ್ರೀ ಪುರುಷೋತ್ತಮನವರು ಸದ್ಯದಲ್ಲಿಯೇ ಬ್ರಿಗೇಡಿಯರಾಗುತ್ತೆನೆಂದರು. ಇದು ಸಾಲದು, ಅವರು ಅತೀ ಉನ್ನತ ಸ್ಥಾನಕ್ಕೇರಬೇಕು. ಅವರು ಸೈನ್ಯದ ಅತೀ ಉನ್ನತ ಹುದ್ದೆಗೆ ಏರಿ ಕೊಡಗಿನ ಕೀರ್ತಿ ಪತಾಕೆಯನ್ನು ಹಾರಿಸಲೆಂದು ಆಶೀರ್ವದಿಸುತ್ತೇನೆ. ನನ್ನ ಆಶೀರ್ವಾದವನ್ನು ಭಗವಂತನು ದಯಪಾಲಿಸಲೆಂದು ಸಂಗಾತಿ ಮೂಲಕ ನನ್ನ ಪ್ರಾರ್ಥನೆ

**ಚೇಂದ್ರಿಮಾಡ ಗ. ಮುತ್ತಪ್ಪ, ಕುಶಾಲನಗರ**

## ಬಹುಮಾನ ಪಡ್ಡೊ

ಕುಯ್ಯಂಗೇರಿ ಕಾವೇರಿ ನಾಡ್ ಮಹಿಳಾ ಸಮಾಜ ತಂಡ ಆಯುಧ ಪೂಜೆ ದಿನದಂದ್ ಸಿದ್ದಾಪುರಲಿ ವಾಹನ ಮಾಲೀಕರ್ ಮತ್ತೆ ಚಾಲಕರ ಸಂಘದ ಪತಿಯಿಂದ ನಡೆದ ಆಯುಧ ಪೂಜೆ ಸಮಾರಂಭಲಿ ಕೋಲಾಟ ಡ್ಯಾನ್ಸ್‌ಗೆ ಪ್ರಥಮ ಬಹುಮಾನ ಪಡ್ದ್ ಕಂಡ್ ಬಂದೊಳೊ. ಅಲ್ಲದೆ ಅದರ ಜೊತೆಗೆ ಪ್ರೋತ್ಸಾಹಕರ ಬಹುಮಾನತೇಳಿ ಆಂದೋಲನ ಪತ್ರಿಕೆ ವರದಿಗಾರರಾದಂತಹ ಅಂಚೆಮನೆ ಸುಧಿ ಮತ್ತೆ ನೆಲ್ಲಿ ಹುದಿಕೇರಿಯ ದೇವಿ ನರ್ಸರಿಯ ಮಾಲೀಕ ಎ. ಕೆ. ರಾಘವ ನಗದ್ ರೂಪಲಿ ಬಹುಮಾನ ಕೊಟ್ಟೊಳೊ. ಅಲ್ಲದೆ ಚೆರಿಯಮನೆ ಪೆಮ್ಮಯ್ಯ (ವಿಜಯ) ನವ್ರು ಪ್ರೋತ್ಸಾಹಕರ ಬಹುಮಾನತೇಳಿ ಶೀಲ್ಡ್ ಕೊಟ್ಟೊಳೊ. ನಮ್ಮ ಅರೆಭಾಷೆ ಹಾಡ್‌ನ ಕುಯ್ಯಂಗೇರಿ ಮಹಿಳಾ ಸಮಾಜದವು ತುಂಬಾ ಪ್ರಚಾರ ಮಾಡ್‌ತ ಒಳೊ. ಹಂಗೆನೆ ಅವ್ವಕೆ ಪ್ರೋತ್ಸಾಹನು ಕೂಡ ಸಿಕ್ಕ್‌ತಾ ಉಟ್ಟು.

ವರದಿ : ಕೆ. ಯಂ. ತಮ್ಮಯ್ಯ

**ದಂಡಿಗೇ ಮೇಲೆ ನಾಯಿ ಕುಂಡ್ರಿಸಿದರೆ ಹೇಲು ಕಂಡು ಹಾರಿತು**

# ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಜನಾಂಗದವರ ಶೃಂಗೇರಿ ಮಠಕ್ಕಿರುವ ನಂಟು ಮತ್ತು ಕಿರು ವಿವರ

ಸನಾತನ ಧರ್ಮ ಅಂದರೆ ಹಿಂದೂ ಧರ್ಮವನ್ನು ರಕ್ಷಿಸಲು ಭಾರತದ 4 ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಲಾಯ್ತು. ಭಾರತದ ದಕ್ಷಿಣ ಭಾಗವಾದ ಶೃಂಗೇರಿಯಲ್ಲಿ ಜಗದ್ಗುರು ಶಂಕರಾಚಾರ್ಯರು ನೆಲೆಸಿದರು. ಹಾಗೂ ಮೊದಲ ಧರ್ಮದ ಪೀಠ ಶೃಂಗೇರಿಯಾಯ್ತು.

ಶೃಂಗೇರಿ ಕನ್ನಡ ನಾಡಿನವರಿಗೆಲ್ಲಾ ಪವಿತ್ರವಾದ ತೀರ್ಥ ಕ್ಷೇತ್ರವಾಗಿರುತ್ತದೆ. ಸದಾ ಹಸಿರಿನಿಂದ ಕೂಡಿದ ಶೃಂಗೇರಿಯಲ್ಲಿ ತುಂಗಾ ನದಿ ಹರಿಯುತ್ತಾ ಗಂಗಾಸ್ನಾನ-ತುಂಗಾಪಾನವೆಂಬ ಗಾದೆಯಂತೆ. ಅಂದರೆ ತುಂಗಾ ನದಿ ನೀರು ಬಹಳ ರುಚಿಕರವೆಂಬ ಗಾದೆಯನ್ನು ಹಿರಿಯರು ಮಾಡಿದ್ದಾರೆ.

ಹಿಂದೆ ಇದು ಋಷಿ ಮುನಿಗಳ ಬೀಡಾಗಿದ್ದು ಪವಿತ್ರ ನೆಲವಾಗಿರುತ್ತದೆ ಹಾಗೂ ಗೌಡ ಜನರು ಕಾಣಿಕೆಯನ್ನು ಅರ್ಪಿಸುವ ಮೂಲ ಸ್ಥಳವೂ ಆಗಿದ್ದು ಇಂದಿಗೂ ಅರೆ ಭಾಷೆ ಗೌಡರ ಮದುವೆಯಲ್ಲಿ ಶೃಂಗೇರಿ ಮಠಕೆ ಹರಿಕೆ ಹಣ ಕಟ್ಟುವ ಕ್ರಮ ಪದ್ಧತಿ ಚಾಲ್ತಿಯಲ್ಲಿರುತ್ತದೆ. ಶೃಂಗೇರಿಯ ಜಗದ್ಗುರುಗಳು ನಮ್ಮಗೆಲ್ಲರಿಗೂ ಹಿಂದೂ ಗುರುಗಳಾಗಿದ್ದರೆಂದು ನಾವೆಲ್ಲರು ತಿಳಿಯಬೇಕಾದುದು ಅವಶ್ಯವಾಗಿರುತ್ತದೆ.

ಶಂಕರಾಚಾರ್ಯರು ದೇಶ ಸಂಚಾರ ಮಾಡುತ್ತಾ ಶೃಂಗೇರಿಗೆ ಬರುವಾಗ ಅಲ್ಲಿನ ಬೆಟ್ಟಗಳು ಋಷಿವರ್ಯರು ತಪಸ್ಸು ಮಾಡುತ್ತಿರುವಂತೆ ಕಂಡಿತಂತೆ. ಅವರಿಗೆ ಈ ಸ್ಥಳವು ತುಂಬಾ ಇಷ್ಟವಾಗಿ ತುಂಗಾನದಿಯಲ್ಲಿ ಸ್ನಾನ ಮಾಡಲು ತೆರಳಿದಾಗ ಉರಿ ಬಿಸಿಲಿನಲ್ಲಿ ಬಸುರಿ ಕಪ್ಪೆಯೊಂದು ಪ್ರಸವ ವೇದನೆಯಿಂದ ಬಳಲುತ್ತಿದ್ದು- ಅದರ ರಕ್ಷಣೆಗಾಗಿ ನಾಗರ ಹಾವೊಂದು ತನ್ನ ಹೆಡೆ ಬಿಚ್ಚಿ ನೆರಳಾಗಿ ನಿಂತಿರುವುದನ್ನೂ ಕಂಡರಂತೆ. ಇದನ್ನು ಕಂಡ ಶಂಕರರು ಧರ್ಮರಕ್ಷಣೆಗಾಗಿ ಇದು ಪ್ರಶಾಂತವಾದ ಸ್ಥಳವೆಂದು ಅದೇ ಸ್ಥಳದಲ್ಲಿ ಮಠ ಸ್ಥಾಪನೆಗೆ ಕಾರಣ ಕರ್ತರಾದರು.

ಆದಿಶಂಕರರು ಮೊದಲು ಸ್ಥಾಪಿಸಿದುದು ಶೃಂಗೇರಿಯಲ್ಲಿ ಶಾರದಾ ಪೀಠವನ್ನು ತುಂಗಾ ತೀರದಲ್ಲಿ ಕಲ್ಲು ಬಂಡೆಯ ಮೇಲೆ ಶ್ರೀ ಚಕ್ರವನ್ನು ಬರೆದು ಪೂಜಿಸಿದರು. ಅಲ್ಲಿಯೆ ಶಾರದಾ-ದೇವಿಯನ್ನು ಪ್ರತಿಷ್ಠೆ ಮಾಡಿದರು. ಪೀಠದ ರಕ್ಷಣೆಗಾಗಿ ಪೀಠದ ಪೂರ್ವಕ್ಕೆ ಕಾಲಭೈರವ (ಕೆಂಚರಾಯ) ದಕ್ಷಿಣಕ್ಕೆ ದುರ್ಗೆ (ಸಬ್ಬಮ್ಮ)ಳನ್ನು ಪಶ್ಚಿಮಕ್ಕೆ ಆಂಜನೇಯ ಮತ್ತು ಉತ್ತರಕ್ಕೆ ಮಹಾಕಾಳಿ (ಕೆಂಚಮ್ಮ) ಎಂಬ ದೇವತೆಗಳನ್ನು ಪ್ರತಿಷ್ಠಾಪಿಸಿ ಅಷ್ಟ ದಿಗ್ಬಂಧನ ಮಾಡಿ ಪೂಜಿಸಲಾರಂಭಿಸಿದರು.

ತದ ನಂತರ ಇಲ್ಲಿನ ಗುರುಗಳೆ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದರು. 16-17ನೇ ಶತಮಾನದಲ್ಲಿ ಅನೇಕ ಗ್ರಂಥಗಳನ್ನು ಪುಸ್ತಕಗಳನ್ನು ಬರೆದರು. ಅಂದಿನ ಪದ್ಧತಿಯನ್ನೇ ಗೌಡ ಜನರು ಇಂದಿನ ತನಕ ಅನುಸರಿಸುತ್ತಾ ಬಂದಿರುವುದು ವಿಶೇಷವಾಗಿದೆ.

ಹೀಗೆ ಶೃಂಗೇರಿಯ ಶಾರದಾಂಬೆ ಸನಾತನ ಧರ್ಮದಲ್ಲಿ ಮೊದಲ ವಿದ್ಯಾ ದೇವಿಯಾಗಿ ಶೃಂಗೇರಿಯಲ್ಲಿ ಶಂಕರಾಚಾರ್ಯರಿಂದ ಪೂಜಿಸಲ್ಪಟ್ಟರು. ನವರಾತ್ರಿಯ ದಿನ ವಿಶೇಷವಾಗಿ ಶೃಂಗೇರಿಯಲ್ಲಿ ಶಾರದಾದೇವಿಯನ್ನು ಪೂಜಿಸುತ್ತಾರೆ. ಮುಂದೆ ಗೌಡ ಜನರು ಆ ಪ್ರದೇಶದಿಂದ ಜೀವನೋಪಾಯಕ್ಕಾಗಿ ಮುಂದೆ ಪಸರಿಸಿದಾಗ ಗುರುಗಳು ಪ್ರತಿಯೊಂದು ತಂಡದವರಿಗೂ ಆಶೀರ್ವದಿಸಿ ತನ್ನ ಕೈಗೆ ಸಿಕ್ಕಿದ ದೇವತೆಯನ್ನು ಎತ್ತಿ ಕೊಟ್ಟು ಕುಲದೇವರನ್ನಾಗಿ ಪೂಜಿಸಲು ತಿಳಿಸಿದರಂತೆ; ಹೀಗೆ ಗೌಡ ಜನರು ಶ್ರೀ ವೆಂಕಟ ರಮಣ, ಸಬ್ಬಮ್ಮ, ಕೆಂಚಮ್ಮ ಮತ್ತು ಆಂಜನೇಯ ಎಂಬ ನಾಲ್ಕು ದೇವತೆಗಳನ್ನೂ ಮನೆದೇವರಾಗಿ ಸ್ವೀಕರಿಸಿದರು. ಅಂತೆಯೇ ಗೌಡ ಜನರು ಇಕ್ಕೇರಿ, ದಕ್ಷಿಣ ಕನ್ನಡ ಜಿಲ್ಲೆ, ಐಗೂರು ಸೀಮೆ ಮತ್ತು ಕೊಡಗಿನ ಕಡೆಯಲ್ಲಿ ಹೆಚ್ಚಾಗಿ ನೆಲೆಸಿದರು. ಇವರು ಒಂದು ಕಟ್ಟುಬದ್ಧಿನ ಶಿಸ್ತಿನ ಕಟ್ಟು ಕಟ್ಟಳೆಯನ್ನೂ ಮಾಡಿಕೊಂಡು ಕಟ್ಟೆ ಮನೆ ಸ್ಥಾನದ ಸುಪರ್ಧಿಗೆ ವಹಿಸಿದರು. ಇದೇ ಮುಂದೆ ಹತ್ತು ಕುಟುಂಬ ಹದಿನೆಂಟು ಗೋತ್ರದ ನುಡಿಕಟ್ಟುಗಳಾದವು.

ಈಗಲೂ ಸಹ ಮದುವೆ ಶುಭ ಕಾರ್ಯಗಳಲ್ಲಿ ಹತ್ತು ಕುಟುಂಬ ಹದಿನೆಂಟು ಗೋತ್ರ ದೇವ ಸಭೆ ಸಂಗಡ ಕೇಳಿ...... ಅನ್ನುವ ನುಡಿಮುತ್ತುಗಳು ಈಗಲೂ ಸಹ ಚಾಲ್ತಿಯಲ್ಲಿವೆ. ಹಿಂದೆ ಊರು ಗೌಡ, ನಾಡ್‌ಗೌಡ, ದೇಶಗೌಡ ಎಂಬ ನಾಮಾಂಕಿತದಿಂದ ಗೌಡರು ಕ್ರಮಬದ್ಧವಾಗಿ ತಂತಮ್ಮ ಕಾರ್ಯಗಳಲ್ಲಿ ನಿರತರಾಗಿ ತಮ್ಮ ಮದುವೆ ಕಾಣಿಕೆಯನ್ನು ತಿರುಪತಿಗೂ ಮತ್ತು ಸಬ್ಬಮ್ಮ ಅಂದರೆ ಶಾರದಾ ಪೀಠಕ್ಕೂ ಒಪ್ಪಿಸುವ ಪರಿವಾರ ಇತ್ತು. ಈಗೀಗ ಬಹು ಕಮ್ಮಿಯಾಗಿದೆ. ಸಬ್ಬಮ್ಮ ದೇವತೆಗೆಂದು ತೆಗೆದಿಟ್ಟ ಹಣವನ್ನು ಈಗೀನ ಸಂತತಿಯವರು ತಿರುಪತಿಗೆ ಒಪ್ಪಿಸುತ್ತಿದ್ದಾರೆ. ಶೃಂಗೇರಿ ತಾಯಿಗೆ ಕಳುಹಿಸಿಕೊಡುವ ಪರಿಪಾಠ ನಿಂತಿದೆ. ಸಬ್ಬಮ್ಮಳನ್ನು ಮರೆಯದೆ ಪ್ರೀತಿಸಿ ಭಕ್ತಿಯಿಂದ ನೆನೆದರೆ ತಮ್ಮ ಇಷ್ಟಾರ್ಥವು ನೆರವೇರುವುದೆಂಬ ಮಾತು ಹಿರಿಯರಿಂದ ಕೇಳಿದ್ದೇವೆ.

ಮುಂದೆ ಕನ್ನಡ ಜಿಲ್ಲೆಯಲ್ಲಿ ನೆಲೆಸಿದ ಗೌಡ ಸ್ತ್ರೀಯರು ಕನ್ನಡ ಸೀರೆಯನ್ನು, ಗಂಡಸರು ಹಾರು ಕಚ್ಚೆ, ಕೋಟು, ಶಾಲು ಮುಂತಾದವುಗಳನ್ನು ಧರಿಸಿದರು. ಆದರೆ ಕೊಡಗಿನಲ್ಲಿ ನೆಲೆಸಿದ ಗೌಡರು ಕೊಡಗು ರಾಜನ ಪ್ರಭಾವದಿಂದ ಗಂಡಸರು ಬಿಳಿ ಕುಪ್ಪಸ, ದಟ್ಟಿ, ರುಮಾಲು ಅನ್ನೂ, ಹೆಂಗಸರು ಮಲೆನಾಡಿನ ಪದ್ಧತಿಯಂತೆ ಸೀರೆ ಅಡ್ಡ ಕಟ್ಟುವುದು. ಅಂದರೆ ಗೇಂಟೆ ರೀತಿಯಲ್ಲಿ ಕಟ್ಟಲು ಪ್ರಾರಂಭಿಸಿದರು. ರಾಜನ ಆಸ್ಥಾನಕ್ಕೆ ಬರಬೇಕಾದಾಗ ಪ್ರತಿಯೊಬ್ಬ ಗಂಡಸು ಜಾತಿ ಲೆಕ್ಕವಿಲ್ಲದೆ ಬ್ರಾಹ್ಮಣರಿಂದ ಹಿಡಿದು ಅಂತ್ಯಜನ ತನಕ ಕುಪ್ಪಸ ದಟ್ಟಿಯ ಪದ್ಧತಿಯಲ್ಲಿಯೇ ಬರುವುದು ರೂಢಿಯಲ್ಲಿತ್ತು. ಅಂದಿನ ಪದ್ಧತಿ ಪ್ರಕಾರ ಉಡುಪುಗಳೆಲ್ಲಾ ದೇಶದ ನಾನಾ ಭಾಗಗಳಲ್ಲಿ ಕೆಲವೊಂದು ಚಿಕ್ಕ ಪುಟ್ಟ ಬದಲಾವಣೆಯೊಂದಿಗೆ ಸರ್ವೆ ಸಾಮಾನ್ಯವಾಗಿತ್ತು.

ಜಾತಿಗೆ ಜಾತಿ ಹಗೆ, ನಾಯಿಗೆ ನಾಯಿ ಹಗೆ

ಗೇಂಟಿ ಸೀರೆ ಉಡುಪನ್ನು ಧರಿಸುವ ಸ್ತ್ರೀಯರನ್ನು ಈಗಲೂ ಸಹ ಶಿವಮೊಗ್ಗದ ಆಸು ಪಾಸಿನಲ್ಲಿ ಹೇರಳವಾಗಿ ಕಾಣಸಿಗುತ್ತಾರೆ. ಆದ್ದರಿಂದ ಗೇಂಟಿ ಉಡುಪು ಯಾವುದೇ ಒಂದು ಜಾತಿಯ ಅಥವಾ ಜನಾಂಗದ ಉಡುಪಾಗಿರದೆ ಪ್ರಾದೇಶಿಕ ಅನಿವಾರ್ಯತೆಯಿಂದ ನಡೆದುಬಂತೆಂದು ತಿಳಿಯಬಹುದು. ಸಮಾಜದ ಬಿಗಿ ನಿಲುವಿನಿಂದ ಅನುಸ್ಥಾನಕ್ಕೆ ತಂದವರಿಂದು ತಮ್ಮದೆಂದು ವಾದಿಸಿಕೊಳ್ಳಬಹುದಷ್ಟೆ.

ಹಳೇ ಕೊಡಗು ಅಂದರೆ 1834ರ ಹಿಂದೆ ಇದ್ದಂತಹ ಕೊಡಗಿನ ಭಾಗಗಳಾದ ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಸುಬ್ರಮಣ್ಯ, ಪಿರಿಯಾಪಟ್ಟಣ, ಐಗೂರು ಸೀಮೆ, ಅರಕಲ ಗೂಡು, ಮಂಜರಾಬಾದ್ ಹಾಗೂ ಈಗಿನ ಕೊಡಗು ಜಿಲ್ಲೆಯ ಮಡಿಕೇರಿ, ವೀರಾಜಪೇಟೆ, ಸೋಮವಾರಪೇಟೆ ತಾಲೂಕುಗಳಲ್ಲಿ ಒಂದು ಅಂದಾಜಿನಂತೆ ಸುಮಾರು 5 ಲಕ್ಷಕ್ಕಿಂತಲೂ ಹೆಚ್ಚು ಅರೆಭಾಷೆ ಗೌಡರಿರುವರೆಂದು 1985ರಷ್ಟು ಹಿಂದೆಯೇ ಸುಳ್ಯದಲ್ಲಿ ನಡೆದ "ಗೌಡ ಸಮ್ಮೇಳನದಲ್ಲಿಯೇ ಅಂದಾಜಿಸಲಾಗಿದೆ. ಈಗ ಕೊಡಗಿನ ಮಡಿಕೇರಿ ತಾಲ್ಲೂಕಿನಲ್ಲಿ ಗೌಡರ ಪ್ರಾಬಲ್ಯ ವಿದ್ದರೆ ಸೋಮವಾರಪೇಟೆಯಲ್ಲಿ ಒಕ್ಕಲಿಗರ ಪ್ರಾಬಲ್ಯವನ್ನು ನಾವಿಂದು ಕಾಣುತ್ತೇವೆ.

ನಮ್ಮಲ್ಲಿ ಉಪ ಜಾತಿಗಳಿಲ್ಲ. ನಾವೆಲ್ಲ ಒಂದೇ ಮರದಡಿಯಲ್ಲಿ ಬರುವ ಗೌಡರು. ನಮ್ಮಲ್ಲಿ ಭಿನ್ನಾವಿಭಿನ್ನತೆಗಳಿಗೆ ಆಸ್ವಾದವಿರಬಾರದು. ನಮ್ಮ ಹಿಂದಿನ ಪದ್ಧತಿಯನ್ನೇ ಅನುಸರಿಸಿ ಕೊಂಡು ದೇಶದ ಜನವಾಹಿನಿಯಲ್ಲಿ ಪ್ರಗತಿ ಪಥದತ್ತ ಸಾಗುವುದು ನಮಗೆಲ್ಲರಿಗೂ ಶ್ರೇಯಸ್ಕರ. ನಮ್ಮತನ, ತನ್ನತನ, ಸ್ವಂತಿಕೆಯನ್ನು ಉಳಿಸಿಕೊಂಡು ದೇಶದ ಅಭಿವೃದ್ಧಿಗೆ ಸಹಭಾಗಿಗಳಾಗಬೇಕು.

**ಬರಹ : ಬೈತಡ್ಕ ಜಾನಕಿ ಬೆಳ್ಯಪ್ಪ, ಮಡಿಕೇರಿ**

---

## ವಿಶ್ವ ಮಾನವರ ದೃಷ್ಟಿಯಲ್ಲಿ ನಾರಿ

1. ಪುರುಷನಿಗೆ ನಾರಿಯಂತಹ ಸರಿ ಸಮಾನ ಬಂದು ಇನ್ನೊಬ್ಬನಿಲ್ಲ. **- ಮಹಾಭಾರತ**
2. ನಾರಿಯ ಉನ್ನತಿ ಇಲ್ಲವೆ ಅವನತಿಯ ಮೇಲೆ ರಾಷ್ಟ್ರದ ಉನ್ನತಿ ಮತ್ತು ಅವನತಿ ಅವಲಂಬಿಸಿದೆ. **- ಅರಸ್ತು**
3. ಸೇಡು ತೀರಿಸಿಕೊಳ್ಳುವಲ್ಲಿ ಮತ್ತು ಪ್ರೇಮಿಸುವಲ್ಲಿ ಸ್ತ್ರಿಯು ಪುರುಷನಿಗಿಂತಲೂ ಅಧಿಕ ನಿರ್ದಯಿ. **- ನೀತ್ಸ**
4. ತಾರೆಗಳು ಆಕಾಶದ ಕವಿತೆಯಾಗಿದ್ದರೆ ಸ್ತ್ರಿಯು ಭೂಮಿಯ ಕಾವ್ಯ. **- ಹಾರ್‌ಗ್ರೇಟ್**
5. ನಾರಿಗೆ ಅಬಲೆ ಎನ್ನುವುದೆಂದರೆ ಅವಳಿಗೆ ಅಪಮಾನ ಮಾಡಿದಂತೆ. **- ಮಹಾತ್ಮ ಗಾಂಧಿ**
6. ಸುಂದರ ಸ್ತ್ರೀಯು ಮೂರ್ಖಳಾಗುತ್ತಾಳೆ. ಇಲ್ಲವೇ ಅಭಿಮಾನಿಯಾಗುತ್ತಾಳೆ. **- ಸ್ಪೇನ್ ನಾಣ್ಣುಡಿ**
7. ಸ್ತ್ರಿಯು ತನ್ನ ಇಚ್ಛೆಯ ವಿರುದ್ಧ ಎಂದಿಗೂ ಸಾಗಲಾರಳು. **- ಸುದರ್ಶನ**

**ಸಂಗ್ರಹ : ಕೆದಂಬಾಡಿ ಪುಷ್ಪ ತಿಮ್ಮಯ್ಯ, ಕುಂದಚೇರಿ**

---

## ತಾಯಿ ಚಾಮುಂಡೇಶ್ವರಿ

ಬೆಟ್ಟದ ಮೇಲಿರುವಳು ತಾಯಿ ಚಾಮುಂಡಿ
ನಮಿಸುವೆವು ಪ್ರತಿದಿನವೂ ನಿನ್ನನ್ನು ನೋಡಿ
ನಿನ್ನ ಕರುಣೆಯೊಂದೇ ಪ್ರತಿದಿನ ನಮಗೆ
ನಿನ್ನ ಧ್ಯಾನವೊಂದೇ ಬರುವುದು ನಮಗೆ.
ನಿನ್ನ ದರ್ಶನಕ್ಕೆ ಬರುವರು ಭಕ್ತರು ಹಲವು
ನಿನ್ನ ದರ್ಶನಕ್ಕೆ ಬರುವರು ಅಶಕ್ತರು ಕೆಲವು
ಅವರಿಗೆಲ್ಲ ಕೊಡುವೆ ನೀನು ದಿವ್ಯ ದರ್ಶನ
ಆಗುವುದು ಅಲ್ಲಿಗೆ ಅವರ ಜನ್ಮ ಪಾವನ.
ಎದುರಿನಲ್ಲೇ ಸಿಗುವುದು ಮಹಿಷಾಸುರ ಮರ್ದನ
ಕೆಲವರಿಗೆ ನೋಡಲು ಭಯಂಕರ ದರ್ಶನ
ಮಕ್ಕಳಿಗೆ ನೋಡಲು ಅದು ಭಯದ ಭೀತಿ
ಅಪ್ಪ-ಅಮ್ಮ ಹೇಳುವರು ಇದಾ ಕಥೆಯ ರೀತಿ.
ಬೆಟ್ಟದ ತುಸು ಕೆಳಗಡೆಯೇ ನಂದಿ ದರ್ಶನ
ಹೋಗಿ ಬರುವ ಜನತೆಗಿದು ಮಹಾ ದರ್ಶನ
ಬೆಟ್ಟದ ಮೇಲಿಂದ ಪೂರ್ಣ ನಗರದ ನೋಟ
ಏನು ಸೋಜಿಗವೋ ಈ ವಿಹಂಗಮ ನೋಟ.
ನೀವು ನಿಮ್ಮ ಗೆಳೆಯರೆಲ್ಲ ಸೇರಿ ಹೊರಡಲು
ಬನ್ನಿ ಒಮ್ಮೆ ಮೈಸೂರಿಗೆ ತಾಯಿ ನೋಡಲು
ಏನು ಅಂದ ಏನು ಚೆಂದ ನಮ್ಮ ತಾಯಿಯೂ
ಬೆಟ್ಟದ ಮೇಲಿರುವಳು ತಾಯಿ ಚಾಮುಂಡೇಶ್ವರಿಯು.

**ಕುಂಟುಪುಣಿ ರಾಮಕೃಷ್ಣ, ಗೋಣಿಮರೂರು**

---

**2ನೇ ಪುಟದಿಂದ**

ವೇದಿಕೆಯಲ್ಲಿ ಮಡಿಕೇರಿ ಗೌಡ ಸಮಾಜದ ಅಧ್ಯಕ್ಷ ತೋಟಂಬೈಲು ನಾಣಯ್ಯನವರು, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷ ಕೋರನ ಪೂಣಚ್ಚ, ಮಾಜಿ ಶಾಸಕರಾದ ದಂಬೆಕೋಡಿ ಮಾದಪ್ಪನವರು, ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷ ಕುಯ್ಯುಮುಡಿ ಪೂರ್ಣಯ್ಯನವರು, ಮರಗೋಡು ಗೌಡ ಸಮಾಜದ ಅಧ್ಯಕ್ಷ ಬೈಮನ ಪೊನ್ನಪ್ಪನವರು, ಚೇರಂಬಾಣೆ ಗೌಡ ಸಮಾಜದ ಅಧ್ಯಕ್ಷರಾದ ಮುಕ್ಕಾಟಿ ಕರುಂಬಯ್ಯನವರು, ಹಿರಿಯ ಗೌಡ ಮುಖಂಡ ಎನ್. ಎಸ್. ದೇವಿಪ್ರಸಾದ್, ಮೈಸೂರು ಗೌಡ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ತಡಿಯಪ್ಪನ ಕುಮಾರ ಜಯನವರು, ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಚೀಯಂಡಿ ರಾಧ ಯಾದವನವರು ವೇದಿಕೆಯಲ್ಲಿ ಉಪಸ್ಥಿತರಿದ್ದು, ಇವರೆಲ್ಲರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಮಣಿಂದ್ರ ರೇಖಾ ಉಲ್ಲಾಸರವರು ಪ್ರಾರ್ಥನೆ ಮಾಡಿದರು. ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್ ಸ್ವಾಗತಿಸಿದರೆ, ಕಾರ್ಯದರ್ಶಿ ಕೋಡಿ ಚಂದ್ರಶೇಖರ್ ವಂದಿಸಿದರು.

ವರದಿ : ಪಟ್ಟಡ ಶಿವಕುಮಾರ್

---

**ಕದ್ದು ತಿನ್ನುವುದಕ್ಕಿಂತ ಬೇಡಿ ತಿನ್ನುವುದೊಳ್ಳೆಯದು**

## ಹುತಾತ್ಮರ ಸ್ಮರಣೆ (1837)

ಸ್ವಾತಂತ್ರಕೆ ಹೋರಾಡಿದ ನೂರಾರು ಜನ ।
ಹುತಾತ್ಮರು ಅರ್ಪಿಸಿದರು ಅವರ ಪ್ರಾಣಾನಾ.... ।
ಭಾರತದಲಿ ಇದ್ದರು ಇಂತವರು ಬಹಳ ಜನ ।
ಗುಡ್ಡೆಮನೆ ಅಪ್ಪಯ್ಯನ ಕುರಿತು ಹೇಳುವೆ ಸ್ವಲ್ಪನ ನಾ ॥

ಚಿಕ್ಕವೀರರಾಜ ಕೊಡಗಿನ ಆಖಿರಿ ರಾಜಾ..... ।
ಗುಳ್ಳೆನರಿ ಬುದ್ಧಿಯ ಆಂಗ್ಲರು ಇಲ್ಲಿ ಬಿತ್ತಿದರು ವಿಷ ಬೀಜ ।
ಅವು ಕೊಡಗನ್ನು ಗೆದ್ದು, ಮಡಿಕೇರಿಗೆ ಬಂದರು ।
ರಾಜನ ಕಳುಹಿದರು ದೂರದ ಕಾಶಿಗೆ ॥

ಕೊಡಗಿನಲ್ಲಿ ಇಲ್ಲದಾಯ್ತು ದೊರೆತನ ।
ಬ್ರಿಟಿಷರು ನೇಮಿಸಿದರು ಇಲ್ಲಿಗೆ ಸೂಪರಿಂಡೆಂಟ್‌ನ ।
ಕ್ಯಾಪ್ಟನ್ ಲಿಹಾರ್ಡಿಂತೇಳುವ ಕೆಂಪು ಮುಖದವನ ।
ಪ್ರಜೆಗಳಿಗೆ ಆಗುತ್ತಿರಲಿಲ್ಲಾ ಇವನ ತಲೆ ಕಂಡ್ರೆ ॥

ಆಗಲೂ ಇದ್ದರು ದೊಡ್ಡ ದೊಡ್ಡ ಜನ ನಮ್ಮಲ್ಲಿ ।
ಗುಡ್ಡೆ ಅಪ್ಪಯ್ಯ ಕೆದಂಬಾಡಿ ರಾಮಗೌಡ ಅಣ್ಣಿಗೌಡರುಂತೇಳಿ ।
ಎಲ್ಲರು ಒಂದಾಗಿ ಸೇರಿದರು ಸುಳ್ಯದಲಿ ।
ಕೆಂಪು ಮುಖದವನ ಓಡಿಸುವ ಒಂದೆ ಹಟದಲಿ ॥

ಪುಷ್ಪಗಿರಿಯ ಪುಟ್ಟಬಸಪ್ಪ ಕಲ್ಯಾಣಸ್ವಾಮಿ ಆದ ।
ಕೊಡಗಿನ ರಾಜ ಪ್ರತಿನಿಧಿ ಎಂದು ಜನರೆಲ್ಲ ಗೊತ್ತಾಯ್ತು ।
ಕೊಡಗಲ್ಲಿ ದಂಡನಾಯಕ ಗುಡ್ಡೆಮನೆ ಅಪ್ಪಯ್ಯ ।
ಕಲ್ಯಾಣಸ್ವಾಮಿನ ಹಿಂದೆ ರಾಮಗೌಡ, ನಂಜಯ್ಯ ಸೋಮಯ್ಯ ॥

ಮಾಪು ಮಾಡಿದ್ದರು ಸುಂಕನ ಉಪ್ಪುಗೆ ಹೊಗೆಸೊಪ್ಪುಗೆ ।
ಇದರಿಂದ ಸೇರಿದರು ಸಾವಿರಾರು ಜನ ಸೈನ್ಯಕೆ ।
ಕಲ್ಯಾಣ ಸ್ವಾಮಿನ ದಂಡು ಹೊರಟಿತು ಮಂಗಳೂರಿಗೆ ।
ಚೆಟ್ಟಿಕುಡಿಯ ಕರ್ತು ಕುಡಿಯ ದಳಪತಿಗಳು ಜೊತೆಗೆ ॥

ದಿವಾನ ಲಕ್ಷ್ಮೀನಾರಾಯಣನ ತಮ್ಮಂದು ಆಗ ಭಾರಿ ಆರ್ಭಟ ।
ಸುಳ್ಯದ ಜನಗಳಿಗೆ ಕೊಡುತಿದ್ದ ಇಂವ ಕಾಟ ।
ಕಲ್ಯಾಣಪ್ಪನ ದಂಡು ಮುರಿಯಿತು ಇಂವನ ಸೊಂಟ ।
ಸುಬೇದಾರ ತಿಮ್ಮಪ್ಪಯ್ಯ ಆದ ಅಲ್ಲಿಗೆ ಭಂಟ ॥

ಬೆಳ್ಳಾರೆ ಪುತ್ತೂರು ಆಯ್ತು ಇಂವನ ಕೈವಶ ।
ಮತ್ತೂ ಹೆಚ್ಚಾಯ್ತು ಇಂವನ ಆರ್ಭಟ ।
ಓಡಿದರು ನೋಡಿ ! ಮಂಗ್ಳೂರ್‌ನಿಂದ ಬ್ರಿಟಿಷರು ತಲಚೇರಿಗೇ ।
ಕುಡ್ಲದ ಖಜಾನೆ ಸುಲಭದಲಿ ಬಂತು ಇವರ ಜೇಬಿಗೆ ॥

ಗುಡ್ಡೆಮನೆ ಅಪ್ಪಯ್ಯ ಕೊಡಗಿನ ಗಂಡು, ।
ಸಾವಿರ ಸಾವಿರ ಸೈನಿಕರು ಇಂವನ ದಂಡು. ।
ಕತ್ತಿ ಕೋವಿ ಹಿಡಿದು ಬಿದ್ದರು ಬ್ರಿಟಿಷರ ಮೇಲೆ ।
ಕೆಂಪು ಮುಖದವನ ತಲೆ ಎಲ್ಲಾ ನೆಲದ ಮೇಲೆ ॥

ಬ್ರಿಟಿಷರು ತೋರಿಸಿದರು ಪುನಃ ನರಿಬುದ್ಧಿ ।
ಅನ್ಯಾಯ ಮಾಡುವುದೇ ಅವರ ನೀತಿ, ।
ಕೊಡಗರನ್ನ ಗೌಡರನ್ನ ಬೇರೆ ಬೇರೆ ಮಾಡಿದರು ।
ಫಿರಂಗಿ ತಂದು ಇಬ್ಬರಿಗೂ ಗುಂಡು ಹೊಡೆದರು ॥

ಗುಡ್ಡೆಮನೆ ಅಪ್ಪಯ್ಯ ಭಾರಿ ಶೂರತನದಲಿ ಹೋರಾಡಿ ।
ಕಡೆ ಕಡೆಗೆ ಸೋಲಾಗಿ ಸೆರೆ ಸಿಕ್ಕಿ ಬಿದ್ದ ।
ಕಲ್ಯಾಣಪ್ಪ ರಾಮಗೌಡರದೂ ಇದೇ ರೀತಿ ಆಯ್ತು ।
ಸೂರ್ಯ ಚಂದ್ರ ಇರುವವರೆಗೂ ಇವರ ಹೆಸರು ಉಳಿಯಿತು ॥
ಅಕ್ಟೋಬರ್ ೩೧... ಸಾವಿರದ... ಎಂಟುನೂರ... ಮೂವತ್ತೇಳು ।
ಗುಡ್ಡೆಮನೆ ಅಪ್ಪಯ್ಯನಿಗೆ ಅಂದು ಆಯ್ತು ಗಲ್ಲು ।
ಸ್ವಾತಂತ್ರಕೆ ಹೋರಾಡುವ ದೀಪನ ಹೊತ್ತಿಸಿ ।
ಸಣ್ಣವರಿಗೆ ತೋರ್ಸಿದ ಹೀಗೆ ದಾರಿ ಬೆಳಕು ॥

**ಸಂಗಾತಿ : ಸಂಗ್ರಹ**

---

## ಕಾವೇರಿಯ ವೀರಪುತ್ರರು

ಎಷ್ಟು ಧನ್ಯಳೋ ನಮ್ಮ ತಾಯಿ ಕಾವೇರಿ
ಅಷ್ಟು ಮಾನ್ಯರು ಅವಳೆರಡು ಕುವರರು
ಕಾರ್ಯಪ್ಪ ತಿಮ್ಮಯ್ಯರೆಂಬ ಹೆಸರಿಟ್ಟು
ಕಾರ್ಯಕ್ಕೆ ಭಾರತಾಂಬೆಯಲಿ ಬೆಳೆಯ ಬಟ್ಟೆ

ಭಾರತ ಸೇವೆಯಲಿ ಸೇನಾನಿಗಳಿವರು
ಭರದಿಂದ ಸಾಗಿದರು ದೇಶ ಸಂರಕ್ಷಣೆಗೆ
ಭಾರತಾಂಬೆಗೆ ನೀಡಿದರು ತಾರಕ ಮಂತ್ರ
ಕರ್ತವ್ಯ ಸಮರ್ಪಣೆ ಶಿಸ್ತೊಂದೇ ಮಂತ್ರ

ಯಂತ್ರ ತಂತ್ರಗಳಿಗೆ ಹೆಸರಾದ ಸೇನಾ ರೀತಿ
ಜಾತಿ ಭಾಷೆಗಳಿಗಿಲ್ಲ ಇಲ್ಲಿ ರಿಯಾಯಿತಿ
ನೀತಿ, ಧರ್ಮ ಖ್ಯಾತಿ ನಡತೆಗಳೇ ಇಲ್ಲಿ ನೀತಿ
ಜ್ಯೋತಿಯೇ ಕರ್ತವ್ಯ ಅರ್ಪಣೆಯೇ ಸಮರ್ಪಣೆ.

ಭಾರತ ಸೇನೆ ವೀರ ಪರಂಪರೆಗೆ ಖ್ಯಾತಿ
ಭರದಿಂದ ಮುನ್ನುಗ್ಗಿ ಸಾಗಿದರು ವೀರ ಯೋಧರು
ಕೆಚ್ಚೆದೆಯ ಹೆಚ್ಚೆಯಲಿ ಕೊಚ್ಚಿದರು ಧಾಳಿಕಾರರ
ಕಾರ್ಯಪ್ಪ ತಿಮ್ಮಯ್ಯರೆಂದರೆ ಮೆಚ್ಚಿದರು ಸೈನಿಕರು.

ಇಂತಾ ವೀರ ಸುಪುತ್ರರ ಪಡೆದ ಜನನೀ ಜನ್ಮಭೂಮಿ
ಕೊಡಗಿನ ಕಾವೇರಿಗ್ನುತಪ್ಪರ ತಪೋಭೂಮಿ
ಪುಣ್ಯ ಪುರುಷರ ಗಣ್ಯ ಕರ್ಮಭೂಮಿ
ಇದೇ ಕೊಡಗಿನ ಕಾವೇರಿ ವೀರಭೂಮಿ.

ನೂರು ವರುಷದ ಬಾಳಲ್ಲಿ ನೂರಾಗಲಿಲ್ಲ
ನೂರು ಬರುವಲ್ಲಿಯೇ ನುಚ್ಚು ನೂರಾಯಿತು
ಹಚ್ಚುವೆವು ನಮ್ಮ ಹಣೆಗೆ ವೀರ ಯೋಧರ ಭಸ್ಮವನು
ಕಾರ್ಯಪ್ಪ ತಿಮ್ಮಯ್ಯರ ಕರ್ತವ್ಯ, ಸಮರ್ಪಣೆ
ನಮ್ಮುಸಿರಾಗಲಿ.

ಚೇಂದ್ರಿಮಾಡ ಗ. ಮುತ್ತಪ್ಪ
ಕುಶಾಲನಗರ

---

ಕಳ್ಳ ಒಂದಲ್ಲ ಒಂದು ದಿನ ಸಿಕ್ಕಿ ಬೀಳದಿರನು

# ಕೊಡಗಿನ ಅಭಿವೃದ್ಧಿಗೆ ಕ್ರಮ

ಕರ್ನಾಟಕ ರಾಜ್ಯದ ಕೆಲವು ಭಾಗಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆಯದೆ ಇರುವ ಹಿನ್ನೆಲೆಯಲ್ಲಿ ಸಹಜವಾಗಿ ಅಲ್ಲಿಯ ಜನ ಚಳುವಳಿಯ ಮಾರ್ಗ ಹಿಡಿಯುವುದು ಹೊಸದೇನಲ್ಲ. ಇಂಥ ಪ್ರದೇಶಗಳಲ್ಲಿ ಕೊಡಗು ಜಿಲ್ಲೆಯೂ ಒಂದು. ಇಲ್ಲಿ ಮುಖ್ಯವಾಗಿ ಕುಡಿಯುವ ನೀರು ಮತ್ತು ವಿದ್ಯುತ್ತಿನದೇ ಸಮಸ್ಯೆ. ಜತೆಗೆ ರಸ್ತೆಗಳ ಅಭಿವೃದ್ಧಿಯೂ ಆಗಬೇಕಾಗಿದೆ. ಈ ಸಂಬಂಧದಲ್ಲಿ ಆ ರಾಜ್ಯದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧ ಮತ್ತು ಇದಕ್ಕಾಗಿ ವಿಶೇಷ ಗಮನ ಹರಿಸಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಹೇಳಿರುವುದು ಆಶಾಭಾವನೆಗೆ ಕಾರಣವಾಗಿದೆ. ಹಿಂದೆ ವೀರಪ್ಪ ಮೊಯಿಲಿ ಅವರ ಕಾಲದಲ್ಲಿ ಈ ಜಿಲ್ಲೆಯ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಯೋಜನೆ ರೂಪಿಸಲಾಗಿತ್ತು. ಅದಕ್ಕೆ ಈಗ ಚಾಲನೆ ನೀಡುವುದಾಗಿ ಕೃಷ್ಣ ಅವರು ಪ್ರಕಟಿಸಿದ್ದಾರೆ. ಆದರೆ ಮೊಯಿಲಿ ಸರ್ಕಾರ ರೂಪಿಸಿದ್ದ ಯೋಜನೆ ಹಲವಾರು ವರ್ಷಗಳಾದರೂ ಇದುವರೆಗೆ ಕಾರ್ಯಗತವಾಗಿಲ್ಲ ಎಂಬುದು ಶೋಚನೀಯ. ಇದಕ್ಕೆ ಕಾರಣಗಳೇನು ಎಂಬುದು ಪರಿಶೀಲನಾರ್ಹ. ಮುಖ್ಯವಾಗಿ ಮೇಲಿಂದ ಮೇಲೆ ಸರ್ಕಾರಗಳು ಬದಲಾಗುವುದು ಹಿಂದಿನ ಸರ್ಕಾರಗಳು ಯೋಜನೆಗಳನ್ನು ಹೊಸ ಸರ್ಕಾರಗಳು ಮೂಲೆಗುಂಪು ಮಾಡುವುದು. ಆಡಳಿತಗಾರರಲ್ಲಿ ರಾಜಕೀಯ ಸಂಕಲ್ಪ ಶಕ್ತಿ ಇಲ್ಲದಿರುವುದು ಇದಕ್ಕೆ ಕಾರಣಗಳೆಂದರೆ ತಪ್ಪಾಗದು.

ಕಳೆದ ವರ್ಷ ಪ್ರತ್ಯೇಕ ಕೊಡಗು ರಾಜ್ಯ ರಚನೆಗಾಗಿ ಒಂದು ಕೂಗು ಎದ್ದಿತ್ತು. ಈ ಬೇಡಿಕೆ ಸಹಜವಾಗಿಯೇ ಅಭಿವೃದ್ಧಿ ಕಾರ್ಯಗಳು ನಡೆಯದೇ ರೋಸಿದ ಜನರಿಂದ ಬಂದಿದ್ದು. ಜಿಲ್ಲೆಯ ಅಭಿವೃದ್ಧಿ ಕಾರ್ಯಗಳನ್ನು ನಿರ್ಲಕ್ಷಿಸಲಾಗಿದೆ ಎಂಬ ದೂರು ಈ ಬೇಡಿಕೆಗೆ ಮುಖ್ಯ ಕಾರಣ ಎನ್ನಬಹುದು. ಜಿಲ್ಲೆಯ ಅಭಿವೃದ್ಧಿಗಾಗಿ ವಿಶೇಷ ಯೋಜನೆ ರೂಪಿಸಿದ್ದರೂ. ಅದರ ಜಾರಿಗೆ ಸರ್ಕಾರ ಉಪೇಕ್ಷೆ ತೋರಿ. ಮಲತಾಯಿ ಧೋರಣೆ ತಳೆದಿದೆ ಎಂಬ ದೂರಿಗೆ ಅವಕಾಶ ನೀಡಿದಂತಾಗಿದೆ. ಈ ಹಿಂದೆ ಸರ್ಕಾರವು ಮೂವರು ಸಚಿವರ ನಿಯೋಗವೊಂದನ್ನು ರಚಿಸಿ. ಅಭಿವೃದ್ಧಿ ಕಾರ್ಯಗಳ ಜಾರಿಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿತ್ತು. ಆದರೆ ಅದು ಭರವಸೆಯಾಗಿಯೇ ಉಳಿದ ಕಾರಣ ಕಳೆದ ವರ್ಷ ಪ್ರತ್ಯೇಕತಾ ವಾದ ತೀವ್ರಗೊಂಡಿತ್ತು.

ಕಳೆದ ವರ್ಷ ರಾಜ್ಯದ ವಿಭಜನೆಗಾಗಿ ಹೋರಾಟ, ಚಳವಳಿಗಳು ತೀವ್ರವಾಗಿದ್ದ ಕಾಲ. ಪ್ರತ್ಯೇಕ ಕೊಡಗು ರಾಜ್ಯ ರಚನೆಗಾಗಿ ಆರಂಭವಾಗಿದ್ದ ಬೇಡಿಕೆ, ಚಳವಳಿಗಳ ಸದ್ದು ಸರ್ಕಾರದ ಹಲವು ಭರವಸೆಗಳ ನಂತರ ಅಡಗಿತು; ಆದರೆ ಅದರ ಬೆನ್ನ ಹಿಂದೆಯೇ-ಉತ್ತರ ಭಾಗದ ಹದಿನಾಲ್ಕು ಜಿಲ್ಲೆಗಳನ್ನು ಒಳಗೊಂಡ ಉತ್ತರ ಕರ್ನಾಟಕ ರಾಜ್ಯದ ಸ್ಥಾಪನೆಗಾಗಿ ಹೋರಟ ಆರಂಭ ವಾಗಿದ್ದು ದುರದೃಷ್ಟಕರ. ರಾಜ್ಯ ಎಲ್ಲ ಭಾಗಗಳೂ ಅಭಿವೃದ್ಧಿ ಹೊಂದುವಂತೆ ಸರ್ಕಾರ ಯೋಜನೆಗಳನ್ನು ರೂಪಿಸಿ. ಕಾರ್ಯಗತ ಗೊಳಿಸಿದರೆ ಇಂಥ ದೂರುಗಳಿಗೆ ಅವಕಾಶ ಇರುವುದಿಲ್ಲ. ಆದರೆ, ತಮ್ಮ ಭಾಗದ ಅಭಿವೃದ್ಧಿ ಆಗಿಲ್ಲ ಎಂಬ ಕಾರಣಕ್ಕೆ ಪ್ರತ್ಯೇಕತೆಯ ಬೇಡಿಕೆ ಮುಂದಿಟ್ಟು ಚಳವಳಿ ನಡೆಸುವುದು ಸಲ್ಲದು. ಇದರಿಂದ ರಾಜ್ಯದ ಅಖಂಡತೆಗೆ ಭಂಗ ಉಂಟಾಗುತ್ತದೆ. ಏಕೀಕರಣ ಸಾಧಿಸಿದ ಶ್ರಮವೆಲ್ಲ ವ್ಯರ್ಥವಾಗುತ್ತದೆ. ಸರ್ಕಾರವೂ ತಾರತಮ್ಯ ತೋರದೆ ರಾಜ್ಯದ ಎಲ್ಲ ಭಾಗಗಳ ಸಮಾನ ಅಭಿವೃದ್ಧಿಗೆ ಗಮನ ನೀಡುವುದೂ ಅಗತ್ಯ.

ಸಂಗಾತಿ.

# ಮನೋದೈಹಿಕ ಕಾಯಿಲೆಗಳ ಬಗ್ಗೆ ಒಂದು ಸಣ್ಣ ಮಾಹಿತಿ

ಯಾವುದೇ ದೀರ್ಘ ಕಾಲದ ಮನೋಕ್ಲೇಶ, ಒತ್ತಡ ದಿಂದಾಗಿ, ವ್ಯಕ್ತಿಯ ಒಂದು ಅಥವಾ ಹೆಚ್ಚಿನ ಅಂಗಗಳು ಸವೆತಕ್ಕೆ ಒಳಗಾಗಿ ರೋಗಗ್ರಸ್ತವಾಗುತ್ತದೆ. ಒಬ್ಬ ವ್ಯಕ್ತಿಯಲ್ಲಿ ಯಾವ ಅಂಗ ಕಾಯಿಲೆಗೆ ಒಳಗಾಗುತ್ತದೆ ಎಂಬುದು ಅನುವಂಶಿಯ ಅಂಶಗಳು ಮತ್ತು ಆ ಅಂಗದ ಆರೋಗ್ಯ ಮಟ್ಟದ ಮೇಲೆ ನಿರ್ಧಾರವಾಗುತ್ತದೆ.

ಸಾಮಾನ್ಯವಾಗಿ ಎಲ್ಲೆಡೆ ಕಂಡುಬರುವ ಮನೋದೈಹಿಕ ಕಾಯಿಲೆಗಳೆಂದರೆ,

ಅಧಿಕ ಆಮ್ಲಸ್ಥಿತಿ [Hyper acidity] ಮತ್ತು ಜಠರದ ಹುಣ್ಣು [Peptic Ulcer]

ಅಧಿಕ ರಕ್ತದ ಒತ್ತಡ [High blood pressure]

ಹೃದ್ರೋಗಗಳು [Corondry Heart Diseases]

ಆಸ್ತಮಾ ಉಸಿರಾಟದ ತೊಂದರೆಯ ಕಾಯಿಲೆಗಳು

ಮೈಗ್ರೇನ್ ತಲೆನೋವು, ಒತ್ತಡದ ತಲೆನೋವು

ಕೀಲು ಬೇನೆ [Arthritu]

ಎಕ್ಸಿಮಾ, ಸೋರಿಯಾಸಿಸ್ ನಂತಹ ಚರ್ಮ ರೋಗಗಳು,

ಕರುಳ ಬೇನೆ [Ulcerative Collitis, Irritable bood syndrome]

ಋತುಚಕ್ರದ ಏರುಪೇರುಗಳು,

ಸಿಹಿಮೂತ್ರ ರೋಗ

ಬೊಜ್ಜು, ಅತಿಯಾಗಿ ತಿನ್ನುವ ರೋಗ [Bulimis]

ಆದ್ದರಿಂದ ಯಾವುದೇ ಮನೋದೈಹಿಕ ಕಾಯಿಲೆ ಔಷಧೋಪಚಾರದ ಜೊತೆಗೆ ರೋಗಿಯ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವ ವಿಧಾನಗಳನ್ನೂ ಅನುಸರಿಸುವುದು ಅತ್ಯಗತ್ಯ.

2] ಮಾನಸಿಕ ಒತ್ತಡದ ನಿವಾರಣೆ ಹೇಗೆ ?

ಒತ್ತಡಕ್ಕೆ ಕಾರಣವಾದ ಸನ್ನಿವೇಶ-ಸಮಸ್ಯೆಯನ್ನು ವ್ಯಕ್ತಿ ತನ್ನ ವೈದ್ಯರಿಗೆ ಅಥವಾ ಆತ್ಮೀಯರೊಂದಿಗೆ ಹೇಳಿಕೊಳ್ಳಬೇಕು.

ಚಿಂತೆ ಮಾಡುವುದನ್ನು ಬಿಟ್ಟು ಏನು ಮಾಡಿದರೆ ಸಮಸ್ಯೆ ಪರಿಹಾರವಾಗುತ್ತದೆ ಎಂದು ಸಂಬಂಧಪಟ್ಟವರೊಂದಿಗೆ ಸಮಾಲೋಚಿಸಿ ಕಾರ್ಯಪ್ರವೃತ್ತನಾಗಬೇಕು.

19ನೇ ಪುಟಕ್ಕೆ

# ಹಾಲು ಹರಿದಿತ್ತು, ಮಗು ಹಸಿದಿತ್ತು

– ಬಾರಿಯಂಡ ಜೋಯಪ್ಪ

"ಮಾಂಸ ತಿಂದರೆ ತಿನ್ನಬೇಕು ಮೂಳೆ ಬೀಳುವಷ್ಟು, ಮೂಳೆ ಬಿದ್ದರೆ ಬೀಳಬೇಕು ಮುಕ್ಕಾಲಿಯ ಸಮದಷ್ಟು".

ಹಿರಿಯ ಬೇಟೆಗಾರರು ಮಾಂಸವನ್ನು ತಿನ್ನುತ್ತ ಆಡಿಕೊಳ್ಳುತ್ತಿದ್ದ ಮಾತಿದು. ಈಗ ಮಾಂಸವನ್ನು ಉಪ್ಪಿನಕಾಯಿ ಹಾಗೆ ತಿನ್ನುವುದನ್ನು ನೋಡಿ ನಗುತ್ತಾರೆ. ಕಾಡು ಮಾಂಸ ಕನಸಾಗಿಬಿಟ್ಟಿದೆ ಅನ್ನುತ್ತಾರೆ.

ಅಚ್ಚಯ್ಯ ತಾಲೂಕಿನ ಬೇಟೆಗಾರ. ಪ್ರಾಯದ ಅವನ ಬೇಟೆಯ ಕತೆ ಬಿಚ್ಚಿದನೆಂದರೆ ಆ ಸುರುಳಿ ಮುಗಿಯುವುದೇ ಇಲ್ಲ. ಈಗ ಸುಕ್ಕಾದ ಮುಖದ ಬೊಚ್ಚುಬಾಯಿಯ ಅಚ್ಚಯ್ಯಜ್ಜ ಆಗ ಬೇಟೆಗೆ ಹೊರಟ ಎಂದರೆ.....!

ಮಿಲಿಟರಿ ಖಾಕಿ ಸುರಾಲು, ಶರಟು, ತಲೆಗೊಂದು ಮಫ್ಲರ್, ಮಡಚುವ ಚಾಕು, ಕತ್ತಿ, ಲೈಟು, ಹತ್ತಾರು ತೋಟಗಳು-----ಒಂದು 'ಗೂಡಂಗಡಿಯೇ' ಅವನ ಬೆನ್ನ ಮೇಲೆ. ದಿನಗಳು ಕಾಡಲ್ಲೇ ಉರುಳಿ ಹೋಗುತ್ತವೆ ! ಒಳಿ ಮಾಡಿ ಅಲ್ಲೇ ದಿನಗಟ್ಟಲೆ ಕೂತರೂ ಸಣ್ಣಪುಟ್ಟ ಪ್ರಾಣಿಗಳನ್ನು ಈಡು ಮಾಡುತ್ತಿರಲಿಲ್ಲ. ತಂದ ಬುತ್ತಿ ತೀರಿದಾಗ ಮಾತ್ರ ಮುಳ್ಳುಹಂದಿ -ಕಬ್ಬೆಕ್ಕು.

ಇವರು ಸಾಮಾನ್ಯವಾಗಿ ಬೇಟೆಗೆ ಹೊರಡುತ್ತಿದ್ದುದು ಬೆಳದಿಂಗಳ ಕಾಲದಲ್ಲಿ. ಬೇಸಗೆಯಲ್ಲಿ ನೀರಿನ ಆಸರೆಗಳೇ ಕಡಿಮೆ. ಕಾಡಿನ ನಡುವೆ ಕೆರೆ ಏನಾದರೂ ಇದ್ದರೆ ಪ್ರಾಣಿಗಳು ಅಲ್ಲಿಗೆ ಬಂದೇ ಬರುತ್ತವೆ.

ಒಮ್ಮೆ ರಾತ್ರಿಯಿಡೀ ಅಚ್ಚಯ್ಯಜ್ಜನೂ ಅವನ ಗೆಳೆಯನೂ ಒಳಿ ಕೂತು ಸುಸ್ತಾಗಿದ್ದರು. ತಾವು ಕುಳಿತ ಮರದಿಂದ ದೂರ ಹೋಗಿ ಕಾಫಿ ಕಾಯಿಸಿಕೊಳ್ಳುವ ಏರ್ಪಾಡು ಮಾಡಿದರು. ಅಲ್ಲೇ ಬಿದ್ದಿದ್ದ ಒಂದು ಮರದ ತುಂಡಿಗೆ ಸೇರಿದಂತೆ ಎರಡು ಕಲ್ಲು ಇಟ್ಟು ಒಲೆ ಹೂಡಿದರು. ತರಗೆಲೆ ತಂದು ಸಣ್ಣ ಪುಟ್ಟ ಕಡ್ಡಿಗಳನ್ನು ಸೇರಿಸಿ ಬೆಂಕಿ ಮಾಡಿ ಪಾತ್ರೆಯಿಟ್ಟು ನೀರಿಗೆ ಬೆಲ್ಲ ಹಾಕಿ ಅಷ್ಟು ದೂರದಲ್ಲಿ ಇಬ್ಬರೂ ಕೂತು 'ಗುಣುಗುಣು' ಮಾತಲ್ಲಿ ಮುಳುಗಿದರು. ಇದ್ದಕ್ಕಿದ್ದ ಹಾಗೆ ಕಾಫಿ ಪಾತ್ರೆ ಮೊಗಚಿಕೊಂಡಿತು ! ಉರಿಯುತ್ತಿದ್ದ ಬೆಂಕಿ ಕೆಟ್ಟು ಹೊಗೆ ಎದ್ದಿತು. "ನೀನು ಕಲ್ಲನ್ನು ಸರಿಯಾಗಿ ಜೋಡಿಸಿಲ್ಲ. ಹೋಯ್ತಲ್ಲ ಕಾಫಿ" ಅಂದ ಅಚ್ಚಯ್ಯ. ಮಾಚಯ್ಯ ಮತ್ತೆ ಕಾಫಿ ಪಾತ್ರೆಯನ್ನು ಸರಿಯಾಗಿ ಇಟ್ಟು ಬೆಂಕಿ ಊದಿದ. ಮತ್ತೆ ಮೊಗಚಿಕೊಂಡಿತು. ದೆವ್ವದ ಚೇಷ್ಟೆಯೆ? ಇಬ್ಬರೂ ಮುಖ ನೋಡಿಕೊಂಡರು. ಒಲೆಗೆ ಆಧಾರವಾಗಿದ್ದ ಮರ ಸರಿಯುತ್ತಿದೆ..... ಮರ ಸರಿಯುವುದು.... ಅಯ್ !

ಅಡ್ಡಲಾಗಿದ್ದುದು ಮರ ಅಲ್ಲ, ಹೆಬ್ಬಾವು ! ಬಿಸಿ ತಗುಲಿದ್ದ ಹೆಬ್ಬಾವು ಸರಿಯತೊಡಗಿತ್ತು. ಅದರ ತಲೆ ಎಲ್ಲೋ ಬಾಲ ಎಲ್ಲೋ. ಸುರುಳಿ ಮಾಡಿಕೊಂಡು ಇಬ್ಬರನ್ನೂ ಸೇರಿಸಿ ನುಂಗಿದ್ದರೆ ! ಇಬ್ಬರೂ ಪಾತ್ರೆಯನ್ನೂ ಬಿಟ್ಟು ಓಡಿದರು.

'ಸಾಕಲ್ಲ ಬೇಟೆ' ಅಂತ ಮಾಚಯ್ಯ ಕೇಳಿದ. ಬಂದುದಕ್ಕೆ ಒಂದಾದರೂ ಕಡವೆ ಹೊಡೆಯದಿದ್ದರೆ ಹೇಗೆ? ಅಚ್ಚಯ್ಯ ನುಡಿದ.

ಕಾಡಿನಲ್ಲೇ ಇಳಿಜಾರಿನಲ್ಲಿ ಇಳಿದ ದಾರಿಯೊಳಗೆ ನಡೆದರು. ಅಲ್ಲಿ ಆಚೆ ನೋಡಿದರೆ ಅರೆ ಬೆಳೆದ ನೊಗ ಮರದ ಚರ್ಮಕ್ಕೆ ಗಾಯವಾಗಿದೆ. ಇನ್ನೂ ಮುಂದೆ ಕಡವೆಗಳ ಚೂಪು ಗೊರಸು ನೆಲದಲ್ಲಿ ಗುರುತು ಮೂಡಿಸಿದೆ. ಪಕ್ಕದಲ್ಲೊಂದು ನೆಲ್ಲಿ ಮರ. ನೆಲ್ಲಿ ಮರ ಕಾಣಿಸುವಂತೆ ಸರಿಯಾದ ಆಯ ನೋಡಿ ಎರಡು ಬೇರೆ ಬೇರೆ ಒಳಿ ಮಾಡಿ ಕಾಯುತ್ತಾ ಕುಳಿತರು.

ರಾತ್ರಿ ಒಂದೆರಡು ಗಂಟೆ ಕಳೆದಿರಬಹುದು. ಅಷ್ಟರಲ್ಲಿ ದೂರದಲ್ಲಿ ಗಿಡವೊಂದು ಅತ್ತಿತ್ತ ಎಳೆದಾಡಿದಂತೆ ಕಾಣುತ್ತಿದೆ. ಆದರೆ ಅಲುಗಾಡಿಸುತ್ತಿರುವುದು ಏನು ಎಂಬುದು ಕಾಣುತ್ತಿಲ್ಲ. ಅಚ್ಚಯ್ಯ ಎಚ್ಚರಗೊಂಡ. ಓ ! ಕಡವೆಗಳು ಕುತ್ತಿಗೆಯ ಉಣ್ಣೆಗಳ ಹಿಂಸೆಗೆ ಮರದ ಚಕ್ಕೆ ಕಿತ್ತು ಹೋಗುವಷ್ಟು ಉಜ್ಜಿಕೊಳ್ಳುತ್ತಿವೆ. ಕಡವೆಗಳ ಕುತ್ತಿಗೆಯಲ್ಲಿ ಬಳೆಯಾಕಾರದ ಗಾಯದ ಸುತ್ತ ನೂರಾರು ಉಣ್ಣೆಗಳು ಮಣಿ ಪೋಣಿಸಿದಂತೆ ಕಚ್ಚಿಕೊಂಡು ರಕ್ತ ಹೀರುತ್ತಿರುತ್ತವೆ.

ಅಚ್ಚಯ್ಯ ಸೆಟೆದು ಕುಳಿತ. ಮರದ ನೆರಳು ಕಪ್ಪಾಗಿ ಬಿದ್ದಿತ್ತು. ಬೆಳಕಿಗೆ ಬರಲು ಹಿಂದೇಟು ಹಾಕುತ್ತಾ ನೆರಳಲ್ಲಿ ಕಡವೆ ನಿಂತಿದೆ. ಇತ್ತ ಬಂದರೆ ಮಾಚಯ್ಯ ಅತ್ತ ಹೋದರೆ ಅಚ್ಚಯ್ಯ. ಕಡವೆಯ ಬಲಿ ಖಂಡಿತ.

ನಿಧಾನಕ್ಕೆ ನೆಲ ಮೂಸಿ ನೋಡಿ ತಲೆ ಎತ್ತಿ ಇಳಿಸುತ್ತಾ ಹೆದರಿ ಹೆದರಿ ಒಂದು ಕಡವೆ ಬೆಳಕಿನೆಡೆಗೆ ಬರುತ್ತಿದೆ. ಕಡವೆಯ ಕಪ್ಪಾದ ಮೈ ಅಚ್ಚಯ್ಯನ ಕಣ್ಣಿಗೆ ಕಂಡಿತು. ಛೇ ! ಕೊಂಬಕಡವೆ * ಯಾಗಿದ್ದರೆ...... ಹುಂ, ಇರಲಿ ಬೋಳಿಯಾದರೇನು.......... ಅಂತೂ ಕೊಂಬ ಕಡವೆ ಹೊಡೆದಿದ್ದರೆ ಅದರ ಗತ್ತೇ ಒಂಥರ ಆಗುತ್ತಿತ್ತು. ಹೀಗೆಂದುಕೊಳ್ಳುತ್ತಿರಲು ಆ ಕಡವೆ ಬೇಟೆಗಾರನ ಸಿಂಡು * ಹಿಡಿದು ಹೊರಟೇ ಹೋಯ್ತು. ಬೆಳಗಾನ ಕುಳಿತರೂ ಯಾವ ಬೇಟೆಯೂ ಆಗಲಿಲ್ಲ.

ಇಬ್ಬರೂ ಮರದಿಂದ ಇಳಿದು ಮುಖ ಮುಖ ನೋಡಿಕೊಂಡರು. ಹಗಲು ಯಾಕೋ ಏನೋ ಇವರಿಗೆ ಬೇಟೆಯೇ ಆಗಲಿಲ್ಲ. ರಾತ್ರಿಯಾಗುವುದನ್ನೇ ಕಾದರು.

ಆ ರಾತ್ರಿ ಚಂದ್ರ ತಡವಾಗಿ ಕಂಡ. ಮರಕ್ಕೆ 'ಬರ್‌ಬರ್' ಎಂದು ಉಜ್ಜಿಕೊಳ್ಳುವ ಸದ್ದು ಬಂತು. ಸದ್ದು ನಿಂತಿತು. ಎದುರುಗಡೆ ಒಂದು ಪ್ರಾಣಿ. ತುಂಡು ಕೋಡು, ಬಿಳಿಯ ಬಟ್ಟೆ ಸುತ್ತಿದಂತೆ ಕಾಣುವ ಕಾಲುಗಳು ! ಅದು ಕಾಟ ! (ಕಾಡುಕೋಣ) ಆ ಕೋಣಕ್ಕೆ ಮನುಷ್ಯನ ಸುಳಿವು ತಿಳಿದಿರಬೇಕು. ಆದರೂ ಅದು ಗಾಬರಿಯಿಂದ ಓಡಲಿಲ್ಲ. ತಲೆಯೆತ್ತಿ ಇವರತ್ತ ನೋಡಿತು. ಗುಂಡು ಹೊಡೆದು ಪ್ರಯೋಜನವಿಲ್ಲ. ಅದನ್ನು ಕೊಂದರೆ ತಿನ್ನಬೇಕು. ಸುಮ್ಮನೆ ಕೊಂತು ಹಾಳು ಮಾಡುವುದೇಕೆಂದು ಸುಮ್ಮನಾದ. 'ಕೊಂದ ಪಾಪಕ್ಕೆ ತಿಂದು ಪರಿಹಾರ' ಎಂಬ

ಹತ್ತು ಕೂಡಿದ್ದಲ್ಲಿ ಮುತ್ತು

ಮಾತನ್ನು ನೆನೆದ. ಕೋಣ ತಲೆ ಕೊಡವಿ ಕಿವಿ ಅಲುಗಿಸಿ ಹೊರಟು ಹೋಯಿತು. ಚಂದ್ರ ಪಡುವಣ ಕಡೆಗೆ ಸರಿಯುತ್ತಿದ್ದಂತೆ ಮರಗಿಡಗಳ ನೆರಳೂ ಉದ್ದವಾಗತೊಡಗಿತು. ಅಷ್ಟರಲ್ಲಿ ಹತ್ತಾರು ಮಾರು ದೂರದಲ್ಲಿ ಸದ್ದಾಯಿತು. ಆ ಸದ್ದು ಒಂದು ಆಕಾರವಾಗಿ ಅಚ್ಚಯ್ಯನ ಒಳಿ ಬಳಿಯೇ ಬಂತು. ನೆರಳಿನಿಂದ ಬೆಳಕಿಗೆ ಬಂದು ನಿಲ್ಲುವುದಕ್ಕೆ ಸರಿಯಾಗಿ ಅಚ್ಚಯ್ಯನ ಕೋವಿಯಿಂದ ಗುಂಡು ಸಿಡಿಯಿತು. ಬೋಳಿ ಕಡವೆ ನಾಲ್ಕು ಕಾಲು ಮೇಲಾಗಿ ಉರುಳಿತು.

ಅಚ್ಚಯ್ಯ ಮರದಿಂದ ಸರಸರನೆ ಇಳಿದು ಮಾಚಯ್ಯನನ್ನು ಕರೆದ. ಸಕತ್ತಾದ ಕಡವೆಯನ್ನು ನೋಡಿದ ಮಾಚಯ್ಯ ಅಚ್ಚಯ್ಯನನ್ನು ಕೊಂಡಾಡಿದ. ಇಬ್ಬರಿಂದ ಅದನ್ನು ಏನೂ ಮಾಡಲಾಗಲಿಲ್ಲ. ಇನ್ನಷ್ಟು ಜನರನ್ನು ಕರೆಯಲು ಊರಿಗೆ ಹೊರಟರು.

ಇತ್ತ, ಸತ್ತುರುಳಿದ ತಾಯಿ ಕಡವೆಯ ಮರಿ ತಾಯಿ ಏಳಬಹುದೆಂದು ಕಾದು ನಿಂತಿತು. ತಾಯಿ ಏಳಲೇ ಇಲ್ಲ. ಮತ್ತೆ ಮೆಲ್ಲಮೆಲ್ಲನೆ ತಾಯಿ ಬಳಿ ಬಂತು. ತಾಯಿ ಮಲಗಿಯೇ ಇದೆ. ಮರಿ ಅದರ ಮೈಗೆ ತನ್ನ ತಲೆಯಿಂದ ಒಂದೆರಡು ಮೃದುವಾದ ಗುದ್ದು ಗುದ್ದಿತು. ಅದು ಅಲುಗಾಡಲಿಲ್ಲ. ಮೂಸಿತು. ನೆಕ್ಕಲು ನೋಡಿತು. ಆ ತಣ್ಣಗಿನ ಮೈ ಮರಿಗೆ ಹಿತ ಕಾಣಲಿಲ್ಲ. ತಾಯಿಯ ಮುಖವನ್ನೇ ನೋಡುತ್ತಾ ನಿಂತುಕೊಂಡಿತು. ಮತ್ತೆ ಅದರ ಮುಖದೆದುರೇ ಮಲಗಿತು. ತಾಯಿಯ ಬಿಸಿ ಉಸಿರು ಮರಿಗೆ ಬಡಿಯಲೇ ಇಲ್ಲ !

ಮೀಸೆ ತಿರುವುತ್ತಾ ಊರಿಂದ ಹಿಂದಿರುಗಿದ ಅಚ್ಚಯ್ಯನನ್ನು ನಾಯಿಗಳು ಹಿಂಬಾಲಿಸಿದವು. ಅವರ ನಡೆದಾಟ ಎಬ್ಬಿಸಿದ ಸದ್ದಿಗೆ ಮರಿ ಕಡವೆ ದಡಕ್ಕನೆ ಎದ್ದು ನಿಂತಿತು. ಅವರ ಸದ್ದು ಹತ್ತಿರವಾಗಲು ಮರಿಗೆ ದಿಕ್ಕು ಕಾಣದಾಯಿತು. ಅಮ್ಮನನ್ನು ಬಿಟ್ಟು ಓಡುವುದೇ? ಕೂಡದು. ಇಲ್ಲ, ಅಮ್ಮನ ಹಾಲು ಕುಡಿಯಬೇಕು. ಅವಳ ಜೊತೆ ಇರಬೇಕು. ಹೀಗೆ ಅಂದುಕೊಳ್ಳುವ ಹೊತ್ತಿಗೆ ನಾಯಿಗಳ ಸದ್ದು ತೀರಾ ಹತ್ತಿರಕ್ಕೇ ಬಂತು. ಎರಡು ನಾಯಿಗಳು ಬೊಗಳುತ್ತಾ ಇತ್ತ ಕಡೆಗೇ ಬರುತ್ತಿವೆ ! ಮರಿಗೆ ತಿಳಿಯದಂತೆ ಅದರ ಕಾಲು ಹತ್ತಾರು ಹೆಜ್ಜೆ ಹಾಕಿ ಬಿಟ್ಟಿತ್ತು. ಬೊಗಳುತ್ತಾ ಬಂದ ನಾಯಿಗಳು ಸತ್ತ ಕಡವೆಯನ್ನು ಮೂಸುತ್ತಾ ಗುಂಡು ತಾಗಿ ಸೋರಿದ ರಕ್ತವನ್ನು ನೆಕ್ಕತೊಡಗಿದವು.

ಮರಿ ಕಡವೆ ಓಡಿ ಮರದ ಬುಡದಲ್ಲಿ ನಿಂತುಕೊಂಡು ಇತ್ತ ನೋಡಿತು. ನಾಯಿಗಳಿಗೆ ಇದರ ಸುಳಿವು ಸಿಕ್ಕಿ ಮರಿಯತ್ತ ಬೊಗಳಿ ಹಾರಿದವು. ಆ ನಾಯಿಗಳೊಡನೆ ಬೇಟೆಗಾರರೂ ನುಗ್ಗಿದರು. ಆದರೆ ಕಡವೆ ಮರಿ ಹೇಗೋ ಓಡಿ ತಪ್ಪಿಸಿಕೊಂಡಿತು. ತನ್ನಮ್ಮನ ಹಾಲಿನ ಬಯಕೆಯನ್ನು ಮನದಲ್ಲೇ ನೆನೆದು ಮರೆಯಾಗಿ ನಿಂತಿತು.

ಬೇಟೆಗಾರರು, ನಾಯಿಗಳೂ ಸುಸ್ತಾಗಿ ಮತ್ತೆ ಸತ್ತ ಕಡವೆಯ ಬಳಿ ಬಂದರು. ಆ ಕಡವೆ ತನ್ನ ಮರಿಗಾಗಿ ಇಳಿಸಿದ್ದ ಹಾಲು ಒಂದು ಕಲ್ಲಿನ ಮೇಲೆ ಸುರಿದು ಕೆನೆಗಟ್ಟಿತ್ತು. ಒಂದು ನಾಯಿ ಆ ಹರಿದು ನಿಂತ ಹಾಲನ್ನು ನೆಕ್ಕಿತು. ಮತ್ತೊಂದು ನಾಯಿ ಆ ಕಡವೆಯ ಕೆಚ್ಚಲನ್ನೇ ಕಚ್ಚಿ ಕಚ್ಚಿ ಎಳೆಯುತ್ತಿತ್ತು.

* ಕೊಂಬ ಕಡವೆ - ಗಂಡು ಕಡವೆ
ಬೋಳಿಕಡವೆ - ಹೆಣ್ಣು ಕಡವೆ. ಇದಕ್ಕೆ ಕೊಂಬಿಲ್ಲ
ಸಿಂಡು - ವಾಸನೆ

## ನಗೆ ಹನಿಗಳು

**ಗಂಡ :** ಆ ನೆನ್ನೆದ್ ಪೇಪರ್ ತಕಂಡ್ ಬಾನೆ.

**ಹೆಣ್ಣ್ :** ಅದರ್ನ್ ನಾನ್ ಗುಡ್ಸಿ ಕಸದ ತೊಟ್ಟಿಗೆ ಹಾಕಿ ಬುಟ್ಟೆಲಾ !

**ಗಂಡ :** "ಛೆ" ನೆನೆದ್ ಪೇಪರ್‌ಲಿ ಎಂತಾ ಇತ್ತ್ ತಾ ನಂಗೆ ನೋಡಕಾಯಿತಲ.

**ಹೆಣ್ಣ್ :** ಅದರ್‌ಲಿ ಎಂತಾ ಇತ್ಲೆ ಬರಿ ತರಕಾರಿ ಸಿಪ್ಪೆ ಮಾತ್ರ ಇತ್ತ್.

* * *

**ರಾಮಾ :** ನಾನ್ ನಿಂಗೆ ಏನ್‌ತಾ ಬೋರ್ಡ್‌ಲಿ ಬರಿಯಕ್ಕೆ ಹೇಳ್ದ್‌ರಾ

**ಕೆಂಚ :** ರಾಮಾಗೌಡರ ಮನೆಗಳ್ನ ಬಾಡಿಗೆಗೆ ಕೊಟ್ಟವೆ

**ರಾಮಾ :** ಆದರೇ, ನೀನ್ ಏನ್ ಬರ್ದ್‌ಳೋ ಓದು.

**ಕೆಂಚ :** ರಾಮಾಗೌಡರ ಮಗಳ್ನ ಬಾಡಿಗೆಗೆ ಕೊಟ್ಟವೆ.

* * *

**ಪ್ರವಾಸಿ :** ಹಲೋ ಇದ್ ಯಾರ ತಲೆ ಬುರುಡೆ

**ವಾಚ್‌ಮ್ಯಾನ್ :** ಇದ್ ಅಲೆಗ್ಸಾಂಡರ್‌ದ್

**ಪ್ರವಾಸಿ :** ಅದರ ಜೊತೆಲಿರುವ ಸಣ್ಣ್‌ದ್ ಯಾರ್‌ದ್.

**ವಾಚ್‌ಮ್ಯಾನ್ :** ಅದ್ ಅಂವ ಸಣ್ಣಾ ಹೈದ ಆಗಿರ್‌ಕನ ಸಿಕ್ಕಿದ್.

**ಅಣ್ಣಚೀರಾ ಭಾರತಿ ಸೋಮಣ್ಣ, ಮಕ್ಕಂದೂರು.**

* * *

### ತಿಳಿದದ್ದೇ ಬೇರೆ ಆದದ್ದೆ ಬೇರೆ

ಒಂದು ಸಲ ಸಿನೇಮಾ ನೋಡುತ್ತ ಕುಳಿತಿರುವಾಗ ಓರ್ವ ಮಹಿಳೆಯ ಪರ್ಸ್ ಕಳ್ಳತನವಾಯಿತು. ಆಕೆ ಪೋಲೀಸ್ ಸ್ಟೇಶನ್‌ಗೆ ಹೋಗಿ ಕಂಪ್ಲೆಂಟ್ ಕೊಟ್ಟಳು.

**ಪೋಲೀಸ್ :** ಕಳ್ಳನು ನಿಮ್ಮ ಪರ್ಸ್‌ನ್ನು ಎಲ್ಲಿಂದ ತೆಗೆದುಕೊಂಡ?

ಮಹಿಳೆ : ನನ್ನ ಜಂಪರಿನೊಳಗಿನಿಂದ ಸಾರ್.

**ಪೋಲೀಸ್ :** (ಆಶ್ಚರ್ಯದಿಂದ) ಏನ್ರೀ ಜಂಪರ್ ಒಳಗಿನಿಂದ ತೆಗೆದುಕೊಂಡರೂ ನಿಮಗೆ ಗೊತ್ತೇ ಆಗಲಿಲ್ವ?

ಮಹಿಳೆ : ಆತ ನನ್ನ ಪರ್ಸ್ನ ಕಳ್ಳತನ ಮಾಡ್ತಾನೆ ಅಂತ ನಾನು ತಿಳಿದಿರಲಿಲ್ಲ ಎಂದು ನಿರಾಶೆಯಿಂದ ನುಡಿದಳು.

**– ಕೊಂಪುಳೀರ ಗಣೇಶ್ ಬೋಪಯ್ಯ, ಬಿಕೋಳ**

ನೆಂಟರು ದೂರವಿರಬೇಕು, ನೀರು ಹತ್ತಿರ ಇರಬೇಕು

# ರಾಷ್ಟ್ರದ ಸಂಸ್ಕೃತಿಯನ್ನು ಗೌರವಿಸಿ ಕಾಪಾಡುವದೇ ನಿಜವಾದ ರಾಷ್ಟ್ರಭಕ್ತಿ

"ತನ್ನ ದೇಶವನ್ನು ಪ್ರೀತಿಸದವನು ಜಗತ್ತಿನಲ್ಲಿ ಯಾವುದನ್ನೂ ಪ್ರೀತಿಸಲಾರ." ಈ ನುಡಿಯಲ್ಲಿ ಅಡಗಿದ ಅಪ್ಪಟ ಸತ್ಯವನ್ನು ಯಾರು ಅಲ್ಲಗಳೆಯಲು ಸಾಧ್ಯವಿಲ್ಲ. ಹುಟ್ಟಿನಿಂದಲೇ ಮನುಷ್ಯನಲ್ಲಿ ಕೆಲವೊಂದು ಗುಣಗಳು ಸಹಜವಾಗಿ ಬಂದಿರುತ್ತದೆ. ನವರಸಗಳನ್ನು ಅಭಿವ್ಯಕ್ತಗೊಳಿಸಬಲ್ಲ ಮನುಜನಲ್ಲಿ ಸ್ವದೇಶ ಪ್ರೇಮವೂ, ಭಕ್ತಿಯೂ ಕೂಡ ವ್ಯಕ್ತ ರೂಪದಿ, ಅವ್ಯಕ್ತ ರೂಪದಿ ಸ್ಪಂದಿಸುತ್ತಿರುತ್ತದೆ. ಮಾತೆಯನ್ನು ನಾವು ಸ್ವಾಭಾವಿಕವಾಗಿ ದೇಶವನ್ನು ಪ್ರೀತಿಸುತ್ತೇವೆ. ನಾವಷ್ಟೆ ಅಲ್ಲ, ಪಶು-ಪಕ್ಷಿಗಳು ಕೂಡ ಉದಯದಿಂದ -ಸೂರ್ಯಾಸ್ತದವರೆಗೂ ಲೋಕವನ್ನೇ ಸುತ್ತಿ ಮರಳಿ ತಮ್ಮ ತಮ್ಮ ಗೂಡಿಗೆ ಬರುತ್ತವೆ. ಅದೇ ರೀತಿ 'ನಾನು' 'ನನ್ನದು', 'ನನ್ನ ದೇಶ' ಎಂಬ ಸ್ವಾಭಿಮಾನ ಪ್ರತಿಯೊಬ್ಬರಲ್ಲೂ ಬೆರೆತಿದೆ.

ನಮ್ಮ ದೇಶದ ರೀತಿ-ನೀತಿ, ನಡತೆ, ಆಚಾರ-ವಿಚಾರಗಳನ್ನು ಪಾಲಿಸುವುದು, ಧರ್ಮದಿಂದ ನಡೆಯುವುದು ಮಾತೆಯ ಸಂಸ್ಕೃತಿಯನ್ನು ಮರೆಯದೆ, ಗೌರವಿಸಿ ರಕ್ಷಿಸುವುದೇ ನಿಜವಾದ ದೇಶಭಕ್ತಿ. ಎಲ್ಲಿದೆ ಇದು?

ನಮ್ಮ ಅಂತರಂಗದಲ್ಲಿ ಪರಿಶುದ್ಧ ಹೃದಯದಲ್ಲಿ ಕೇವಲ 'ಮೇರಾ ಭಾರತ್ ಮಹಾನ್ ಹೈ' ಎಂದು ನುಡಿದ ಮಾತ್ರಕ್ಕೆ ದೇಶಾಭಿಮಾನ ಪೂರ್ಣವಾಗದು. ಇದು ಭಾರತೀಯರ ಹೃದಯದಿಂದ ಪವಿತ್ರವಾದ ರೂಪದಿ ಜಾಗೃತವಾದ ಭಕ್ತಿ ರಸವಾಗಿದೆ. ನುಡಿಯಲ್ಲಿ ನುಡಿಯಾಗಿ ಉಳಿಯದೆ ನಡೆಯಲ್ಲಿ ಸಾಧಿಸಿದ್ದಲ್ಲಿ ಈ ಪುಣ್ಯ ಭುವಿಯಲ್ಲಿ ನರನಾಗಿ ಜನಿಸಿದ್ದಕ್ಕೂ ಸಾರ್ಥಕ ಅಲ್ಲವೆ?ಎಲ್ಲದಕ್ಕಿಂತ ಹಿರಿಯದು ನಮ್ಮ ದೇಶ, ನಮ್ಮ ಮಾತೃಭೂಮಿ !

ದೇಶ ಬದುಕಿದರೆ ನಾವು ಬದುಕುತ್ತೇವೆ. ದೇಶದ ಪ್ರಗತಿಗೆ, ಉನ್ನತಿಗೆ ದೇಶಭಕ್ತಿಯಿಂದ ಸೇವೆಗೈಯ್ಯುವ ದೇಶಭಕ್ತರೇ ಕಾರಣ. ನಮ್ಮ ಈ ಭರತ ಭೂಮಿ ಶತಮಾನಗಳ ಹಿಂದಿನಿಂದ ಇಂದಿನವರೆಗೆ.ಅನೇಕ ಮಹಾತ್ಮರನ್ನು, ದೇಶ ಭಕ್ತರನ್ನೂ ತನ್ನ ವಿಶಾಲವಾದ ಮಡಿಲಲ್ಲಿ ಆಡಿಸಿದೆ. ತನ್ನಲ್ಲಿ ಒಂದಾಗಿರಿಸಿ ಕೊಂಡಿದೆ. ಸ್ವಾತಂತ್ರ್ಯ ಪಡೆಯಲು ತಮ್ಮ ಇಡೀ ಬಾಳನ್ನೇ ಮುಡಿಪಾಗಿಟ್ಟು "ಮಾಡು ಇಲ್ಲವೇ ಮಡಿ" ಎಂಬ ಪ್ರತಿಜ್ಞೆಯಿಂದ ಕಂಕಣಬದ್ಧವಾಗಿ ದೇಶವನ್ನು ಗುಲಾಮಗಿರಿಯಿಂದ ಮುಕ್ತಗೊಳಿಸಿದರು. ಇಂದು ಆ ಮಹಾನ್ ಪುರುಷರು 'ನೀಲಾಂಬರದಿ' ತಾರೆಗಳಾಗಿ ಮಿನುಗುತ್ತಿರುವರು.

ರಾಷ್ಟ್ರದ ಘನತೆ ಹೆಚ್ಚಿಸಲು ಪ್ರತಿ ಪ್ರಜೆಯೂ 'ದೇಶವು ತನ್ನಿಂದ ಯಾವ ಸೇವೆಯನ್ನು ನಿರೀಕ್ಷಿಸುತ್ತಿದೆ' ಎಂದು ತಿಳಿಯಲು ಪ್ರಯತ್ನಿಸಬೇಕು. ಆದರೆ, ಇಂದು 'ದೇಶವು ತನಗಾಗಿ ಏನು ಮಾಡಿದೆ' ಎಂದು ಜನರು ನಿರೀಕ್ಷಿಸುತ್ತಾರೆ. ಎಂತಹ ವಿಪರ್ಯಾಸ! ನಮ್ಮ ದೇಶದ ಮೌಲ್ಯಗಳನ್ನು ಕಾಪಾಡುವುದೇ ದೇಶಭಕ್ತಿ. ಯೋಗ್ಯತೆ, ಪರಿಶ್ರಮ, ನಿಸ್ವಾರ್ಥತೆ, ಕರ್ತವ್ಯ, ದಕ್ಷತೆ, ಶ್ರೇಷ್ಠತೆ, ಪ್ರಾಮಾಣಿಕತೆ, ಮಾನವೀಯತೆ.... ಈ ಮೌಲ್ಯಗಳ ಪರಿಪಾಲನೆಯೇ ದೇಶಭಕ್ತಿ.

ನಿಜವಾದ ದೇಶಾಭಿಮಾನವೆಂದರೆ ಅಂಧ ವಿಶ್ವಾಸ, ಮೂಢ ನಂಬಿಕೆಗಳನ್ನು ತೊಡೆದು ಹಾಕಿ ಆಸೆ-ಆಮಿಷಗಳಿಗೆ ಒಳಗಾಗದೇ ತನ್ನ ಕರ್ತವ್ಯ ಪಾಲಿಸುವವನು ದೇಶಭಕ್ತ. ಆಗ ಮಾತ್ರ ದೇಶದ ಉನ್ನತಿ ಸಾಧ್ಯ. ಸ್ವದೇಶದ ಸಂಪತ್ತು ಉಡಿಗೆ -ತೊಡಿಗೆ, ಸಂಸ್ಕೃತಿ, ವಿಚಾರಗಳನ್ನು ಗೌರವಿಸಿ ರಕ್ಷಿಸಬೇಕಲ್ಲವೇ?

ಹಾಗಿದ್ದರೆ ಇವುಗಳನ್ನು ಆಚರಣೆಗೆ ತರಬೇಕು. ಪರರ ವಸ್ತುಗಳನ್ನು ಪರದೇಶವನ್ನು ಹೊಗಳುತ್ತಾ ಈ ಮಣ್ಣಿನಲ್ಲಿ ಹುಟ್ಟಿ ಬೆಳೆದ ತನ್ನ ದೇಶವನ್ನು ಕಡೆಗಣಿಸುವ ಮನೋವೃತ್ತಿ ಕೀಳರಿಮೆ ದೂರಾಗಬೇಕು. ಇಂತಹ ಭಾವನೆ ಸ್ವಂತ ವಿವೇಚನೆಯಿಂದ ಬರಬೇಕೆ ವಿನಾಃ ಪರರ ಉಪದೇಶದಿಂದಲ್ಲ. ಹಣಕ್ಕಾಗಿ ಸ್ವಾಭಿಮಾನವನ್ನು ಮಾರಿಕೊಳ್ಳುವವರಿಂದ ನಮ್ಮ ದೇಶದ ಹೆಸರನ್ನು ಇನ್ನೊಬ್ಬರು ನೆನಪಿಸಿದಾಗ ಮಾತ್ರ ಎಚ್ಚರವಾಗುವ ಮೈಗಳ್ಳರಿಂದ ರಾಷ್ಟ್ರಗೀತೆಗೂ ಗೌರವ ಕೊಡದ ಅನಾಗರಿಕರಿಂದ ಈ ಅನುಪಮ ದೇಶಕ್ಕೆ ಸೇವೆ ಸಲ್ಲದು. ವ್ಯಕ್ತಿಯೊಂದು ಶಕ್ತಿಯೆನಿಸಬೇಕು.

ಅಂಧಕಾರದಲ್ಲಿದ್ದಾಗ ಒಬ್ಬರನ್ನೊಬ್ಬರು ನೋಡಿಕೊಳ್ಳು ಒಂದೇ ಹಣತೆ ಸಾಕು. ನೊಂದವರಿಗೆ ನೆರವಾಗಲೂ ಸ್ವಲ್ಪ ಮಾನವೀಯತೆ ತೋರಲು ಪ್ರತಿಯೊಬ್ಬರಲ್ಲೂ ದೇಶಭಕ್ತಿ ಬೇಕು.

ಬೈನೆರವನ ಚಿತ್ರಾ, ಮಡೆ

---

7ನೇ ಪುಟದಿಂದ

ಮೈ-ಮನಸ್ಸು ವಿರಮಿಸಲು ನೆರವಾಗುವ ಸದಭಿರುಚಿಯ ಚಟುವಟಿಕೆಗಳನ್ನು ಪ್ರತಿದಿನ ಮಾಡಬೇಕು, ಸಂಗೀತ, ಓದು ಯೋಗ, ಪ್ರಾಣಾಯಾಮ, ನಡಿಗೆ, ಕ್ರೀಡೆ, ಧಾರ್ಮಿಕ ಪೂಜೆ, ಧ್ಯಾನಗಳು ಉಪಯುಕ್ತ.

ನಿರಾಶಾವಾದವನ್ನು ಬಿಟ್ಟು ಆಶಾವಾದಿಯಾಗಿ, ಇದ್ದುದರಲ್ಲಿ ತೃಪ್ತಿ ಪಡುವುದನ್ನು ಅಭ್ಯಾಸ ಮಾಡಬೇಕು.

ಲಭ್ಯವಿರುವ ಸೌಲಭ್ಯಗಳನ್ನು [ಕಾಲ, ಹಣ, ಜನ] ವಿವೇಚನೆಯಿಂದ ಬಳಸಿ, ಅವುಗಳಿಂದ ಗರಿಷ್ಠ ಪ್ರಯೋಜನ ಪಡೆಯಲು ಪ್ರಯತ್ನಿಸಬೇಕು.

ಆದ ತಪ್ಪುಗಳ ಬಗ್ಗೆ ಚಿಂತಿಸದೆ, ಆ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸಬೇಕು.

ಹೀಗೆ ನಮ್ಮ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿಕೊಂಡು ಇದರಿಂದ ಬರುವ ಅನೇಕ ರೀತಿಯ ಸಮಸ್ಯೆಗಳನ್ನು ದೂರ ಮಾಡಿಕೊಳ್ಳೋಣ.

ಉಳುವಾರನ ತನುಜ-ಜನಾರ್ಧನ್

---

ಎತ್ತನ್ನು ನಂಬಿ ಬೀಜ ಹಾಕಬಾರದು, ನೆಂಟರನ್ನು ನಂಬಿ ಬದುಕಬಾರದು

## ಸಂಗಾತಿ ಭವಿಷ್ಯ : ನವೆಂಬರ್ 1 ರಿಂದ 15, 2000

ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ :** ದೈವಾನುಕೂಲವಿದೆ. ಕಳೆದು ಹೋದ ಭೂಮಿ ಮತ್ತೆ ಕೈ ಸೇರುವುದು. ಜನರ ಪ್ರೀತಿಗೆ ಪಾತ್ರರಾಗುತ್ತೀರಿ. ವಿವಾಹದ ವಿಷಯದಲ್ಲಿ ಅವಮಾನವಾಗುವ ಸಂಭವವಿದೆ. ಹಣಕಾಸಿನ ಸ್ಥಿತಿ ಉತ್ತಮವಿದೆ.

**ವೃಷಭ ರಾಶಿ :** ದೈವಾನುಗ್ರಹವಿಲ್ಲ. ಸಂಸಾರದಲ್ಲಿ ನಷ್ಟ ನಿಷ್ಠುರಗಳು ಬರಲಿದೆ. ಅನಾವಶ್ಯಕ ಪ್ರಯಾಣದಿಂದ ಮನಸ್ಸು ಚಂಚಲವಾಗುವುದು. ಅಂಗಾಂಗಳಿಗೆ ಊನ ಸಂಭವಿಸಬಹುದು. ನವಗ್ರಹಗಳ ಆರಾಧನೆಯಿಂದ ಶಾಂತಿ.

**ಮಿಥುನ ರಾಶಿ :** ಗೃಹ ವಲಯದಲ್ಲಿ ಸಾಧಾರಣ ನೆಮ್ಮದಿ. ಹೊಸ ಭೂ ಖರೀದಿ ಯೋಗವಿದೆ. ಬುಧನ ದೋಷದಿಂದ ವಿದ್ಯೆಗೆ ಕುಂದು ಉಂಟಾಗಬಹುದು. ಶಾಂತಿ ಚಿತ್ತದಿಂದ ವ್ಯವಹಾರ ಮಾಡಿ.

**ಕರ್ಕಾಟಕ ರಾಶಿ :** ದೈವಾನುಕೂಲವಿದೆ. ನೀವು ಕಳೆದುಕೊಂಡಿದ್ದ ಶಾಂತಿ, ಪ್ರೀತಿ, ಪ್ರೇಮ ಈಗ ಲಭಿಸುವುದು. ಗೃಹ ವಲಯದಲ್ಲಿ ದೇವತಾಕಾರ್ಯ ಮಾಡುವ ಯೋಗವಿದೆ. ಹಣಕಾಸಿನ ವ್ಯವಹಾರ ಉತ್ತಮ ಮಟ್ಟದ್ದಾಗಿದೆ. ನವಗ್ರಹಗಳ ಆರಾಧನೆ ಮಾಡಿರಿ.

**ಸಿಂಹ ರಾಶಿ :** ದೇವತಾನುಗ್ರಹವಿದೆ. ಶತ್ರುಗಳು ಅಪವಾದ ಹೊರಿಸಲಿದ್ದಾರೆ. ಉತ್ತಮವಾದ ಕೆಲಸ ಮಾಡಿ ಕೀರ್ತಿ ಪಡೆಯುತ್ತೀರಿ. ಪಿತೃಗಳ ಭೂಮಿ ನಿಮ್ಮ ಕೈ ಸೇರುವುದು. ಗಣಪತಿ ಆರಾಧನೆ ಮಾಡಿರಿ.

**ಕನ್ಯಾ ರಾಶಿ :** ದೈವಾನುಕೂಲವಿದೆ. ಸರಕಾರಿ ಕೆಲಸಗಳು ತಲೆಕೆಳಗಾಗಬಹುದು. ಅನಾವಶ್ಯಕ ಪ್ರಯಾಣದಿಂದ ನಷ್ಟ ನಿಷ್ಠುರಗಳು ಬರಲಿವೆ. ಹೊಸ ಕೆಲಸಕ್ಕೆ ಕೈ ಹಾಕಬೇಡಿ.

**ತುಲಾ ರಾಶಿ :** ಗೃಹ ವಲಯದಲ್ಲಿ ನೆಮ್ಮದಿ ಇಲ್ಲ. ಸಿಟ್ಟನ್ನು ಎಡಗಡೆಗೆ ತಳ್ಳಿ ಮುನ್ನಡೆಯಿರಿ. ಹೊಸ ವ್ಯವಹಾರಕ್ಕೆ ಕೈ ಹಾಕಬೇಡಿ. ನಷ್ಟ ಅನುಭವಿಸುವ ಸೂಚನೆ ಇದೆ.

**ವೃಶ್ಚಿಕ ರಾಶಿ :** ಗೃಹ ವಲಯದಲ್ಲಿ ಗುರು ಹಿರಿಯರ ಆಶೀರ್ವಾದ ದೊರಕಲಿದೆ. ಭೂಮಿ ಸಂಬಂಧಕವಾಗಿ ಲಾಭ ಪಡೆಯುತ್ತೀರಿ. ಹಣಕಾಸಿನ ವ್ಯವಹಾರದಲ್ಲಿ ಉತ್ತಮ ಲಾಭವಿದೆ. ಧೈರ್ಯದಿಂದ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಿ ಸುಬ್ರಹ್ಮಣ್ಯನನ್ನು ಆರಾಧಿಸಿ.

**ಧನಸ್ಸು ರಾಶಿ :** ದೇವತಾನುಗ್ರಹವಿದೆ. ಭೂ ಸಂಬಂಧವಾಗಿ ವ್ಯವಹರಿಸುವಾಗ ಕುಲದೇವರನ್ನು ನೆನೆಸಿದರೆ ಫಲಕಾರಿಯಾಗುವುದು. ಮಿತ್ರರಿಂದ ಅಪಾಯವಿದೆ. ಗುರುವಿನ ಆರಾಧನೆ ಮಾಡಿರಿ.

**ಮಕರ ರಾಶಿ :** ದೈವಾನುಗ್ರಹವಿದೆ. ಭೂಮಿ ಖರೀದಿ ಯೋಗವಿದೆ. ಗೃಹ ವಲಯದಲ್ಲಿ ಉತ್ತಮ ವಾತಾವರಣವಿದೆ. ಹೊಸ ಮಿತ್ರರ ಭೇಟಿ. ಹಣಕಾಸು ಯಥೇಚ್ಛವಾಗಿ ಕೈಗೂಡುವುದು. ಶನಿಯನ್ನು ಆರಾಧನೆ ಮಾಡಿಕೊಂಡು ಬನ್ನಿ.

**ಕುಂಭ ರಾಶಿ :** ದೈವಾನುಕೂಲವಿಲ್ಲ. ಆರೋಗ್ಯದ ಕಡೆ ನಿಗಾ ಇರಲಿ. ಪ್ರಯಾಣದಿಂದ ದುಃಖವಾಗಲಿದೆ. ಹಣಕಾಸಿನ ವ್ಯವಹಾರದಲ್ಲಿ ನಷ್ಟ ಅನುಭವಿಸುವಿರಿ. ಶನಿಯನ್ನು ಆರಾಧಿಸುವುದರಿಂದ ಉತ್ತಮ.

**ಮೀನ ರಾಶಿ :** ಆರೋಗ್ಯ ಸುಧಾರಿಸುವುದು. ಮಾತಾ ಪಿತರ ಆಶೀರ್ವಾದದಿಂದ ದೇವತಾಕಾರ್ಯ ಮಾಡುವಿರಿ. ಹಣಕಾಸು ವ್ಯವಹಾರದಲ್ಲಿ ನೆಮ್ಮದಿ. ಉದ್ಯೋಗ ಸಿಗಲಿದೆ. ವಿಷ್ಣುವಿನ ಆರಾಧನೆ ಮಾಡಿರಿ.

---

### ವಿಸ್ಮಯ ಗಣಿತ ಲೋಕ

$9 \times 1 = 9 \rightarrow 0 + 9 = 9$

$9 \times 2 = 18 \rightarrow 1 + 8 = 9$

$9 \times 3 = 27 \rightarrow 2 + 7 = 9$

$9 \times 4 = 36 \rightarrow 3 + 6 = 9$

$9 \times 5 = 45 \rightarrow 4 + 5 = 9$

$9 \times 6 = 54 \rightarrow 5 + 4 = 9$

$9 \times 7 = 63 \rightarrow 6 + 3 = 9$

$9 \times 8 = 72 \rightarrow 7 + 2 = 9$

$9 \times 9 = 81 \rightarrow 8 + 1 = 9$

$9 \times 10 = 90 \rightarrow 9 + 0 = 9$

ಎಮ್ಮೆ ಅ (ಕಂದ), ವಿರಾಜಪೇಟೆ

### ಉಳಿಕೆ

ಕೊಡಗು ಸಂಗಾತಿಯ ಬಳಕೆ
ಗೌಡ ಸಂಸ್ಕೃತಿಯ ಉಳಿಕೆ
ಅಮ್ಮಾಜೀರ ಪೊನಪ್ಪನವರ ಬಯಕೆ
ಪೊನಿ ಧ್ವನಿಯ ಗಳಿಕೆ
ಪೊನಿ ಧ್ವನಿಯ ಬಳಕೆ
ಅರೆ ಭಾಷೆಯ ಉಳಿಕೆ
ಅದೇ ಸಂಗಾತಿಯ ಮತ್ತು
ಪೊನ್ನಪ್ಪನವರ ಶ್ರಮ
ಅದಿಕ್ಕೆ ನಮ್ಮ ನಿಮ್ಮೆಲ್ಲರ
ಅನಂತ ನಮನ.

ಪ್ರಕಾಶ್ ಭಾಜಡ್ಕ ಮರಗೋಡು

---

ಶನಿ ಹಿಡಿದವನು ಮುಟ್ಟಿದೆಲ್ಲಾ ಹಾಳು

# ಚಿರಸ್ಮರಣೆ



ದಿ. ತೋಟಂಬೈಲು ಮಾದಪ್ಪ
ಜನನ 1899 ನಿಧನ 5-11-1969

ನೀವು ಈ ಭೌತಿಕ ಶರೀರವನ್ನು ತ್ಯಜಿಸಿ 31 ವರ್ಷಗಳು ಸಂದಿದೆ. ಈ ಕಾಲಾವಧಿಯಲ್ಲಿ ನೀವು ಹಾಕಿ ಕೊಟ್ಟ ದಾರಿಯಲ್ಲಿಯೇ ಇಂದಿಗೂ ನಾವುಗಳು, ಮಕ್ಕಳು, ಮರಿಮಕ್ಕಳು ಮುಂದುವರಿಯುತ್ತಿದ್ದೇವೆ. ನಿಮ್ಮ ಪ್ರಾಮಾಣಿಕತೆ, ನಿಷ್ಠಾವಂತ ಸಮಾಜ ಸೇವೆ, ಸಮಾಜದ ಕಾಳಜಿಯೇ ನಮಗೆಲ್ಲರಿಗೂ ದಾರಿ ದೀಪವಾಗಿದೆ. ಆ ಭಗವಂತನು ನಿಮ ದಿವ್ಯಾತ್ಮಕ್ಕೆ ಅನುದಿನವು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುವ.

ಮಕ್ಕಳು,
ಸೊಸೆಯಂದಿರು, ಅಳಿಯಂದಿರು
ಮೊಮ್ಮಕ್ಕಳು, ಮರಿಮಕ್ಕಳು.

ಪ್ರಕಟಣೆ : ತೋಟಂಬೈಲು ನಾಣಯ್ಯ
ಕುರುಬರ ಮೊಟ್ಟೆ ಎಸ್ಟೇಟ್,
ಸಿದ್ದಾಪುರ, ಕೊಡಗು,
Ph : 0274/58361

---

# 3ನೇ ವರ್ಷದ ಚಿರಸ್ಮರಣೆ



ಜೈನೀರ ಚಂದ್ರಪ್ಪ, ಹಾಸನ
ಜನನ : 30-3-1944
ಮರಣ : 25-10-1997

ನೀವು ನಮ್ಮನ್ನಗಲಿ 3 ವರ್ಷ ಕಳೆದರೂ ನೀವು ಬಿದ್ದ ಜಾಗ ನಿಮ್ಮ ರಿಕ್ಷ ನಿಮ್ಮ ಖಾಕಿ ಬಟ್ಟೆ ನಮಗೆ ಇನ್ನೂ ಹಚ್ಚಹಸುರಾಗಿದೆ. ನೀವು ನಮ್ಮನ್ನು ಬಿಟ್ಟು ಹೋದ ಆ ಗಳಿಗೆ ನಿಮಿಷ ಕಳೆಯಿತು. ನಿಮಿಷ ಘಂಟೆ ಕಳೆಯಿತು. ಘಂಟೆ ದಿನ ಕಳೆಯಿತು. ದಿನ ವಾರ ಕಳೆಯಿತು ವಾರ ತಿಂಗಳು ಕಳೆಯಿತು. ತಿಂಗಳು ವರ್ಷ ಕಳೆಯಿತು ಹೀಗೆ ಚಿಂತಿಸುತ್ತಾ ನಿಮ್ಮ ನೆನಪಿನಲ್ಲೇ 3 ವರ್ಷ ಕಳೆದೆವು. ಆ ಭಗವಂತನು ನಿಮ್ಮ ಆತ್ಮಕ್ಕೆ ಸದಾ ಶಾಂತಿ ಕೊಡಲೆಂದು ನಾವುಗಳೆಲ್ಲರು ದಿನ ನಿತ್ಯ ದೇವರಲ್ಲಿ ಪ್ರಾರ್ಥಿಸುತ್ತೇವೆ.

**ಆತ್ಮಕ್ಕೆ ಶಾಂತಿ ಕೋರುವವರು : ಪತ್ನಿ : ಶಾಂತಿ**
**ಮಕ್ಕಳು : ದೊಡ್ಡ ಮಗ ವೇಣು, ಸೊಸೆ ಸುಮ ಹಾಗೂ ಮೊಮ್ಮಗಳು**
**ಸಣ್ಣ ಮಗ ಲೋಕೇಶ್, ಅಳಿಯ ಮಗಳು ಮುತ್ತು ಮೊಮ್ಮಕ್ಕಳು**

ಪ್ರಕಟಣೆ : **ಜೈನೀರ ಪಾರ್ವತಿ ಹಾಸನ, ಫೋನ್ 61091**

---

# ದ್ವಿತೀಯ ವರ್ಷದ ಪುಣ್ಯಸ್ಮರಣೆ



ದಿ|| ಕುದುಪಜೆ. ಎ. ಸುಂದರ
(ವಾಣಿಜ್ಯ ತೆರಿಗೆ ಅಧಿಕಾರಿ)

ಜನನ : 8-1-1956 ಮರಣ : 28-11-1998

ನೀವು ನಮ್ಮನ್ನು ಅಗಲಿ ಎರಡು ವರ್ಷಗಳು ಕಳೆದರು ನಿಮ್ಮ ಸವಿನೆನಪು ಸದಾ ನಮ್ಮಲ್ಲಿ ಹಚ್ಚಹಸುರಾಗಿದೆ. ಸಮಾಜಕ್ಕೆ ಮಾದರಿಯಾಗಿದ್ದ ಆದರ್ಶಗುಣಗಳು ನಿಮ್ಮ ಜೀವನದ ನಿಸ್ವಾರ್ಥ ನೆನಪುಗಳು ನಮಗಿಂದು ಧೈರ್ಯದ ಸಂಕೋಲೆಯಾಗಿದ್ದು ನಿಮಗಿದ್ದ ಆಶೆ, ಆಕಾಂಕ್ಷೆಯ ಫಲ ತಲಪುವ ಸಾಮರ್ಥ್ಯ ನೀಡುವುದರೊಂದಿಗೆ, ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಅನುದಿನವು ನಾವು ಪ್ರಾರ್ಥಿಸುತ್ತೇವೆ.

**ಪತ್ನಿ : ಭಾನುಮತಿ, ಮಕ್ಕಳು : ವಿನೀತ್ ಮತ್ತು ಮಿಥನ್‌ಕುಮಾರ್, ಮೈಸೂರು**

Reg. No. KA/SK/MYS-88 Registered : 10-01-96 TCI Kar. 09592



ಲ್ಯಾಂಡ್ ಸ್ಕೇಪ್ ವಾಟರ್ ಕಲರ್ ಸ್ಥಳ : ಮೇಲುಕೋಟೆ



ವಿವಿಧ ಭಂಗಿಗಳಲ್ಲಿ ಸ್ತ್ರೀಯರು ಪೋಸ್ಟರ್ ಕಲರ್, ಮಾಡ್ರನ್ ಕಲರ್

ಚಿತ್ರ : ಕೊಳಂಬೆ ಭಾನುಪ್ರಕಾಶ್



ಲೈಫ್ ಪೈಂಟಿಂಗ್, ವಾಟರ್ ಕಲರ್, ಮಾಡೆಲ್



ದಿ. ಲೇಡೀಸ್ ಹಾಸ್ಟೆಲ್, ಆಯಿಲ್ ಕಲರ್ ಮಾಡ್ರನ್ ಪೈಂಟಿಂಗ್

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.